Technical College at Arsikere.

Q.—667. Sri K. PANCHAKSHARIAH (Arsikere).—

Will the Government be pleased to state :—

(*a*) whether it has come to their notice that there is need for a Technical College at Arsikere which is a prominent industrial town in Hassan District;

(*b*) the steps they have taken in this behalf?

A.—Sri A. G. RAMACHANDRA RAO (Minister for Law and Education).—

(*a*) No.

(*b*) Does not arise in view of answer to (*a*) above.

LEGISLATIVE BUSINESS

THE MYSORE MOTOR SPIRIT (TAXATION ON SALES) (AMENDMENT) BILL, 1953.

Motion to consider.

Sri KADIDAL MANJAPPA (Minister for Revenue and Public Works).—I beg to move :

> "That the Mysore Motor Spirit (Taxation on Sales) (Amendment) Bill, 1953, be taken into consideration."

This is a very simple measure.

Sri M. RAJASEKHARA MURTHY (Yelandur).—I rise to a point of order. This House is not competent to discuss this Bill. The measure now brought is virtually an amendment to the original Act, that is, the Mysore Motor Spirit (Taxation on Sales) Act. Prior to 1949, the State Governments had the sovereign right to discuss on any Bill; but after 1949, that is, after the merger of the States with the Union, most of the Central enactments have been extended to the States. Now this comes in the Union List, that is, Tax on import of petrol. It is included in the Union List, bearing Subject No. 53. The Central Government has got a separate enactment governing the principles of taxation on motor spirit and the State Government has no right to amend this Act. Moreover, the Constitution came into existence in 1951. The legislative enactments made prior to 1951 on subjects which are now included in the Union List are followed only for two years from the date of the commencement of the Constitution, so much so this Act expires on 31st March 1953. Further, I would like to point out that on account of the adaptation of the Laws Act passed in 1949, most of the Central enactments have been extended to Mysore also and this subject-matter..

Sri KADIDAL MANJAPPA.—May I know the enactments extended to the Mysore State?

Sri M. RAJASEKHARA MURTHY.—You please look into the Schedule which is included in the Union List.

Sri K. HANUMANTHAIYA (Chief Minister).—Is it Subject No. 53?

Sri M. RAJASEKHARA MURTHY.—Yes—Taxation on motor spirit. If, in spite of the constitutional difficulty, the House is going to pass the Bill, it is not for me to say what the High Court is going to say as to the legality or otherwise of this legislation. Anyhow, I leave it to the discretion of the House and I seek a ruling from the Chair.

Sri J. MOHAMED IMAM (Jagalur).—I would like to clarify this point. My friend has raised an important issue regarding the competency of this House to pass legislation enhancing duty on petrol, and when the competency of the House is questioned, according to the Rules of Business, a full debate will have to be allowed. This is the provision under the Rule: "Where the Bill initiates legislation outside the legislative competency of the Assembly, the Speaker may permit a full discussion thereon". So, my friend has raised a very important constitutional point which has to be discussed fully and for which the Speaker will have to give full opportunity to all the members of this

House. I was thinking on similar lines whether this House is competent to levy a tax on petrol which is in the nature of a duty. There are three Lists under the Constitution. There is the Union List, there is the Concurrent List and the State List. To empower the State to levy a tax on a certain commodity, that power must be stated specifically in the State List. It may be argued that tax of 4 annas had already been levied on petrol in 1949 and as such they have power to enhance the tax. But the conditions were different at that time.

Mr. SPEAKER.—Please do not argue on the merits of the case.

Sri J. MOHAMED IMAM.—I am not arguing on merits. We cannot take this as precedent because at that time the Constitution had not come into force. After the Constitution of India came into force, the situation has been changed and the powers have been allotted to the State and to the Centre and here petrol comes under the Union List and not under the State List. It is only the Government of India that can levy a tax or duty on petrol and hence, the Government of India levy import duty on petrol and it comes entirely within their jurisdiction and the State at the most can levy a sales-tax on an imported article. Now the State wants power to levy an absolute tax, a tax at the rate of 6 annas on petrol, which is beyond their competence and beyond the competence of this House. So, I uphold the point of order raised by my friend.

Sri K. HANUMANTHAIYA.—Say you support. It is for the Chair to uphold.

Sri J. MOHAMED IMAM.—I submit that this House is not competent to levy a tax on petrol and it is beyond the competence of this House. This is the point to be decided and I am sure the House will go into this question in detail.

Sri A. BHEEMAPPA NAIK (Molakalmuru).—I want some information from the Government, whether it is a cess or a tax. I am told it is 'Sales-tax', in which case this question does not arise at all. I want to know whether it is a cess or a tax. If it is a tax, under what provision of law it has been levied now? Hitherto, we were under the impression that 4 annas that is being levied till to-day was Sales-tax.

Sri J. MOHAMED IMAM.—It does not come under Sales-tax at all.

Sri KADIDAL MANJAPPA.—The Bill is clear. It is a Sales-tax on retail sales of motor spirit.

Sri J. MOHAMED IMAM.—The amendment is an amendment to the Motor Spirit Taxation Act; it is not an amendment to the Sales-tax Act. We would like to discuss it in great detail. It is a matter of great importance. In the first place, this amendment is not an amendment to the Sales-tax Act; it is not mentioned in the Sales-tax Act under the Schedule. It is an Act by itself. You cannot take shelter under the guise of levying a sales-tax. If you admit it as a sales-tax, then levy it at the rate of six pies per rupee; let it come under the Sales-tax Act and be guided by the Sales-tax Act.

Sri A. BHEEMAPPA NAIK.—The question is whether it does not come under the articles on which sales-tax is leviable.

Sri KADIDAL MANJAPPA.—Sir, this is not a new Act. There is already an Act known as the Motor Spirit (Taxation on Sales) Act, 1949. It is in force now. According to the provisions of this Act, a tax on retail sale of motor spirits is permissible. The tax is being levied at the rate of four annas per gallon on all retail sales of motor spirit from 1949. Sir, item No. 53 in the Union List is relied upon by the Hon'ble Member. Item No. 53 reads like this: "Regulation and Development of Oil fields"—we are not going to regulate or develop the oil fields; "and mineral resources"—neither are we regulating and developing mineral resources; "petroleum and petrol products"—it is not regulation or development of petro-

(SRI KADIDAL MANJAPPA.)

leum and petrol products; "under the control of the Union"—as I have already submitted, this is under the State list. I wish to draw the attention of the Hon'ble Members to item No. 54—Tax on all sales or purchase of goods other than newspapers. So, there is no substance in the objections raised by the Hon'ble Members. This enactment is not novel to Mysore. Several States like Madras, Bombay, West Bengal, U. P., Punjab, Bihar, Madhya Pradesh, Assam, Orissa, Hyderabad and Madhya Bharath–all these States are having such enactments. Rcently, Sir, in Madras and Bombay, they have enhanced the Sales-tax on motor spirits. In Madras, prior to June 1952, the tax levied was four annas per gallon. In the month of June..

Sri J. MOHAMED IMAM.—Can my friend quote mainly from papers?

Mr. SPEAKER.—The Hon'ble Minister is referring to his notes.

Sri KADIDAL MANJAPPA.—In the month of June, an Ordinance was promulgated by the Madras Government enhancing the tax from four annas to six annas. During that period, similarly the Government of Bombay have enhanced the tax from two annas to four annas. I may bring to the notice of the Hon'ble Members that the rate we have now proposed in this Bill . . . . (*Interruption*) In West Bengal, the rate prevailing is six annas; in Orissa, it is six annas. (*Interruption*) I want to bring to the notice of the Hon'ble Members that similar enactments are in force in other States.

So the Bill is not repugnant to the Constitution and it is within the competence of this Legislature to amend the Act which is already in force.

Sri M. RAJASEKHARA MURTHY.—Now, I would like to draw the attention of the Hon'ble Members to Subject 83, seventh schedule, in the Union List—'Duties on imports excluding export duties'. This levy of tax of two annas comes under this.

Sri KADIDAL MANJAPPA.—It is not export duty.

Sri M. RAJASEKHARA MURTHY.—It is a duty on import. It is not Sales-tax. This comes under 83....

Sri H. SIDDAVEERAPPA (Minister for Home and Industries).—Sir, the Hon'ble Member goes on from article to article.

Mr. SPEAKER.—I have sufficiently heard both sides. Considering all aspects of the question I have come to the conclusion that, when I am not free from doubts in my mind, I should not hold that the matter is outside the scope of the State Legislature. I shall not by my ruling deprive the Assembly of the opportunity of discussing the Bill on its merits and then arrive at its own decision. The question whether the Bill is beyond the jurisdiction of the Legislature is a matter for the Courts of Law to decide. Unless a Bill is manifestly beyond jurisdiction, the Chair should not rule out the Bill, but should permit debate and leave the decision to Courts if and when the question is raised. I rule that the Bill be taken into consideration.

Sri KADIDAL MANJAPPA.—Sir, it is a very simple measure. Under the Act now in force, a tax on retail sales of motor spirits at the rate of four annas per gallon is being levied. In this Bill, the Government seeks to enhance the tax from four annas to six annas. I have already submitted that they have very recently enhanced the rate in Bombay from two annas to four annas and in Madras from four annas to six annas. I have also submitted already that there are other States where the prevailing rate of this tax is six annas. The Bill mostly affects the richer section of the public and therefore I am sure Hon'ble Members will accord their approval to this Bill.

Mr. SPEAKER.—Motion moved:

"That the Mysore Motor Spirit (Taxation on Sales) (Amendment) Bill, 1953, be taken into consideration".

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಅವರು ಹೇಳುವ ಹಾಗೆ, ಈ ತೆರಿಗೆ ಶ್ರೀಮಂತವರ್ಗದ ಮೇಲೆ ಬೀಳುವುದಾದರೆ ಯಾರೂ ಬೇಡವೆಂದು ಹೇಳುತ್ತಿರಲಿಲ್ಲ. ಆದರೆ ಯಾವ ರೀತಿ ಇದು ಐಶ್ವರ್ಯವಂತರ ಮೇಲೆ ಬೀಳುತ್ತದೆ ಎಂಬುದನ್ನು ಅವರು ಹೇಳಲಿಲ್ಲ. ಈಗ ಅನೇಕ ಲಕ್ಷಾಂತರ ಸಾಮಾನ್ಯ ಜನರೂ ಕಾರುಗಳ ಮೇಲೂ, ಬಸ್ಸುಗಳ ಮೇಲೂ ಓಡಾಡುತ್ತಿದ್ದಾರೆ. ಅವರೆಲ್ಲರೂ ಐಶ್ವರ್ಯವಂತರೆಂದು ಹೇಳುವುದಕ್ಕಾಗುವುದಿಲ್ಲ, ಅವರೆಲ್ಲರೂ ಶ್ರೀಮಂತರಲ್ಲ. ಅನೇಕ ಬಡಜನರು ಅನಿವಾರ್ಯ ಕೆಲಸಗಳಿಗಾಗಿ ಪ್ರಯಾಣ ಮಾಡುತ್ತಾರೆ, ಅವರ ಮೇಲೆ ಈ ತೆರಿಗೆ ಬೀಳುತ್ತದೆ, ಐಶ್ವರ್ಯವಂತರ ಮೇಲೆ ತೆರಿಗೆ ಹಾಕುವ ಧೈರ್ಯ ಈ ಸರ್ಕಾರಕ್ಕಿದ್ದರೆ ಅವರ ಮೇಲೆ ಮಾತ್ರ ಬೀಳುವ ಯಾವುದಾದರೂ ಒಂದು ತೆರಿಗೆಯ ಮಸೂದೆಯನ್ನು ತರುತ್ತಿದ್ದರು.

ಶ್ರೀ ಕಡಿದಾಳ್ ಮಂಜಪ್ಪ.—ತಮಗಿಂತಲೂ ಮುಂಚೆಯೇ ನಾವು ಧೈರ್ಯ ಮಾಡಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ತೆರಿಗೆ ನೂರಕ್ಕೆ 95 ಭಾಗ ಬಡಜನರ ಮೇಲೆ ಮತ್ತು ಚಿಕ್ಕ ಚಿಕ್ಕ ವರ್ತಕರ ಮೇಲೆ ಬೀಳುತ್ತದೆ. ಹಳ್ಳಿಗಳಿಂದ ದಿನವೂ ಪಟ್ಟಣಗಳಿಗೆ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೆ ಬರುವ ಸಣ್ಣಪುಟ್ಟ ವರ್ತಕರ ಮೇಲೆ ಬೀಳುತ್ತದೆ. ಖಂಡಿತವಾಗಿಯೂ ಇದು ಶ್ರೀಮಂತರ ಮೇಲೆ ಬೀಳುವ ತೆರಿಗೆಯಲ್ಲ. ಹೀಗೆ ಪೆಟ್ರೋಲಿನ ಮೇಲೆ ದಿನ ದಿನಕ್ಕೂ ತೆರಿಗೆಯನ್ನು ಜಾಸ್ತಿಮಾಡಿದರೆ, ಬಸ್ಸುಗಳನ್ನು ಓಡಾಡಿಸುವವರಿಗೆ ತೊಂದರೆಯಾಗುತ್ತದೆ; ಅದರಿಂದ ಅವರು ಪ್ರಯಾಣಿಕರಿಂದ ತೆಗೆದುಕೊಳ್ಳುವ ದರವನ್ನು ಹೆಚ್ಚು ಮಾಡುತ್ತಾರೆ. ಮೈಲಿಗೆ ಆರುಕಾಸಿದ್ದುದು ಏಳುಕಾಸಾಗಿದೆ. ಹೀಗೆ ತೆರಿಗೆಯನ್ನು ಹೆಚ್ಚಿಸಿದರೆ, ಒಂಬತ್ತುಕಾಸು ಕೂಡ ಮಾಡುತ್ತಾರೆ. ಸರ್ಕಾರವೇ . ಇದಕ್ಕೆ ಅವಕಾಶಕೊಟ್ಟ ಹಾಗಾಗುತ್ತದೆ. ಇದು ಬಹಳ ಅನ್ಯಾಯ. ಪೆಟ್ರೋಲು ಇನ್ನೂ ಕಡಮೆ ದರಕ್ಕೆ ಸಿಕ್ಕುವ ಹಾಗೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಜಪಾನಿನಲ್ಲಿ ಒಂದು ಗ್ಯಾಲನ್ ಪೆಟ್ರೋಲಿಗೆ ಐದಾಣೆ ಬೀಳುತ್ತದೆ. ಇಂಡಿಯಾ ಸರ್ಕಾರದವರು ಇದರ ಮೇಲೆ ಡ್ಯೂಟಿ ಹಾಕುತ್ತಾರೆ, ಇಲ್ಲಿನ ಸರ್ಕಾರ ಬೇರೆ ತೆರಿಗೆ ಹಾಕುತ್ತಾರೆ, ಮುನಿಸಿಪಾಲಿಟಿಗಳವರು ಅಕ್ಟ್ರಾಯಿ ಬೇರೆ ಹಾಕುತಾರೆ. ಹೀಗೆಲ್ಲಾ ಆಗಿ ಪೆಟ್ರೋಲಿನ ಬೆಲೆ ಇಷ್ಟು ಹೆಚ್ಚಿದೆ. ಒಟ್ಟಿನಲ್ಲಿ ತೆರಿಗೆಯ ಹೊರೆ ಹೆಚ್ಚುತ್ತಿದೆ. ಇದು ಬಡಜನರ ಮೇಲೆ ಬೀಳುತ್ತದೆ. ಆದುದರಿಂದ ಇದನ್ನು ಸ್ವಾಗತಿಸುವುದಕ್ಕಾಗುವುದಿಲ್ಲ, ಸಂಪೂರ್ಣವಾಗಿ ವಿರೋಧಿಸುತ್ತೇನೆ.

Sri J. MOHAMED IMAM.—Sir, it is with the greatest regret that we have to oppose these taxation measures which have been introduced by this Government in such a great hurry. They even deprived us of our Sunday enjoyment and wanted us to meet to pass these measures which aim to load the people with greater burdens of tax. I indicated in the course of the debate on the Rajpramukh's speech that myself and my party would oppose any fresh measure of taxation. We also gave—not only members of my party, but also independent members including Sri K. Pattabhiraman—a suggestion that the time has come when we have to review the entire financial problem and structure which is facing us, and, for that purpose, it is absolutely necessary that a committee should be appointed to go into the question of our financial stability and that committee must be empowered to effect economy wherever it is necessary and also to find out fresh resources of revenue. Sri Ramachandra Rao, the then acting Finance Minister gave us a favourable reply and said in reply to Sri Pattabhiraman that the Government would consider the question favourably—the appointment of the committee. But as a reply to Budget discussions, we find that the proposal has been turned down. Sir, such being the case, if we agree for any measure of taxation, we will not be doing good to the Government itself. On the other hand, by agreeing to this fresh measure of tax, we will be landing the Government into greater trouble and also heap on the people fresh measures of taxation.

Sri, I said in the course of my Budget debate that this is the commencement of the period of indiscriminate taxation. The measures which have been placed before us to-day confirm the commencement of indiscriminate taxation. These, to my mind, look like desparate measures, and I will dilate on this when we take up the next Bill.

10 A.M.

I am now going to deal with the present Bill which aims to raise the tax on petrol from four annas to six annas. In the year 1949, your immediate predecessor brought this Bill for the first time seeking power to levy four annas on every gallon of petrol. At that time, myself and my friends this side vehemently opposed it.

Sri H. SIDDAVEERAPPA.—You always oppose.

Sri J. MOHAMED IMAM.—I always oppose because you are so unreasonable and you are regardless of the condition of the people. You never aim at uplifting their conditions. I have to oppose every one of your actions and measures that are calculated to bring down the people to low standards of living and deteriorate the economic situation. Every taxation measure, every fresh taxation, must correspond to the economic condition of the common man in the State. I am going to put you a plain and simple question. During the last five years, in spite of the huge amounts we have been spending, can you authoritatively state that the economic condition of the man in the State has in any way improved? Is there any improvement in the prosperity of the country or the prosperity of the man? I say without fear of contradiction that instead of improvement in the economic condition of the man in the State, it is gradually going down, it is deteriorating and his condition is becoming very miserable and people are telling us "Save us from our friends". When the economic condition is deteriorating, what right is there for the Government to ask a man to contribute more to the common exchequer? Have you taken into consideration his paying capacity, his earning capacity? Have the Government done anything to improve his earning power? Is it not a fact that his poverty is becoming more and more rampant? Any sympathetic Government, any Government which represents the people, must take into consideration all these factors before asking the people to pay for the taxation.

I said that these taxation measures are desperate measures. As has been stated in the Statement of Objects and Reasons, what are these measures meant for? To wipe out the deficit. Who is responsible for this deficit? Is it the people whom you want to victimise or is it the administration who created this deficit? I want a plain answer. It is because of this misrule, it is because of the maladministration, that there has been a big deficit and you want people to pay for this fresh taxation. What justification is there? On the other hand, I would have been convinced by the reasonableness of the taxation if it had been aimed at providing extra amenities to the people, or at conferring extra benefits to the people. But that is not at all the case. The case is to wipe out the deficit. The amount will come here and go somewhere but the deficit will remain. On the same ground the previous Government levied a series of similar taxes. They levied Sales-tax; they levied tax on petrol, on cloth, surcharge on electricity and various other taxes. They said at that time that the financial position was unsound and that they wanted to make up the deficit. In spite of these series of taxes that were levied, has there been a gap between the expenditure on the one side and the revenue on the other side? Though the people consented to pay taxes, the deficit is mounting every year. That is what will happen hereafter. After all what is it that you are going to get from these taxes? You are going to get four lakhs from petrol and forty lakhs from the other measure to which I will come later on. Are you sure that from these taxes you are going to wipe out the deficit? Your deficit is 157.33 *plus* 111.11=268.44 lakhs. When you are faced with the problem of wiping out a deficit to the extent of 268 lakhs, you come forward with small measures which will only fetch a revenue of four or five lakhs which are more a nuisance than a boon. These are desperate measures and we cannot say where they will land us. I am going to state now—if you want, you can verify—that this is only the beginning of taxation. You take an over-all picture of the entire financial position of our State and see what are our commitments and to what extent, under the present conditions, should we have recourse to taxation. First of all, we have got the problem of wiping out the deficit which comes to 2½ crores. We have got the problem

of finding out ways and means to the extent of nine crores in order to implement the Five-Year Programme. Then we have got the problem of finding out resources to the extent of five crores to implement the educational reforms as recommended by the Educational Reforms Committee, the report of which will shortly come before us. Let us take a realistic view. Let us find out what are our commitments, what are our liabilities and what will be the burden that has been cast on the people. We must be prepared to undertake taxation to the extent of sixteen crores for these three objects alone, leaving out items like cultural development, etc. If you are serious, you must find out ways and means to the extent of sixteen crores and it will be a direct liability on the State and on the Government. If you have to undertake these schemes, how is it possible to finance them ? It is a herculean problem and small taxation measures will not solve the problem. On the other hand, whatever you get from these measures will be a drop in the ocean of deficit and our future commitments. We have to face the situation boldly and squarely ; otherwise you will be groping in the dark. Appointment of a committee is absolutely necessary. They must go into the entire financial position. They must probe into the expenditure side and see what are the departments that could be abolished and wherein economy could be effected and also the sources of revenue. Even now I am saying that we have got important sources of revenue which you are not thinking of seriously on ideological or sentimental grounds. The first is Prohibition. You have to revise the policy of Prohibition. You should not be guided by sentiment. If you are guided by sentiment, you will be subjecting yourselves to the greatest danger. Take the verdict of the country. The time has come to thrash out whether it should be retained or abolished. The second is the Gold Duty. Last time I suggested that the State had lost one important source of revenue by abolishing gold duty. I can give now such examples. If a committee is constituted they can go into all these questions and aspects and find out fresh ways and means on one side and the retrenchment that can be effected on the other side, how much money can be saved, to what extent the deficit could be wiped out. Then we will co-operate.

Mr. SPEAKER.—May I know what were the recommendations of the Prohibition Committee of which the Hon'ble Member was the Chairman ?

Sri J. MOHAMED IMAM.—I am glad, Sir, you have raised that question. The Committee made certain recommendations and those recommendations were adopted by the then Government in which Sri L. Siddappa was a Minister. As soon as the Congress came to power they set aside that scheme. The scheme that is adopted is different from the one we recommended. The scheme which we recommended was one of gradual introduction of prohibition and regulation. It also assured a certain amount of revenue to the Government but the Congress Government wanted to introduce wholesale Prohibition and during the first two years they introduced Prohibition in five districts and kept quiet.

So much so, as I said, there is prohibition in five districts and no prohibition in four districts. On the other hand, if they had followed the scheme which the Prohibition Committee gave to them, there would have been a certain amount of prohibition throughout the State. There was a lot of difference between the scheme given by the Prohibition Committee and the scheme ....

Mr. SPEAKER.—So far as the merits of the prohibition scheme are concerned about the financial aspect, within five years it could have come into force.

Sri J. MOHAMED IMAM.—We have clearly stated therein that prohibition as an experiment is to be tried. If it proves a failure, then we have to

(SRI J. MOHAMED IMAM.)

revise. You now understand the gravity of the financial problem. We must take all measures, not in a narrow minded way, but in a broad sense as to how to find out ways and means of facing the bigger problem of implementing all our various recommendations and for which a Committee is absolutely necessary.

Another reason that prompts me to oppose this Bill is the present financial policy adopted by the Government. If we had been convinced that the Government has been adopting a policy of economy and the Government has succeeded in effecting economy every year and if we had been convinced that year by year the expenditure is going down, then we would have some confidence in the Government. On the other hand, in spite of the assurances given by the Chief Minister that he has been very keen in effecting economy, glancing at the budget figures, we can easily understand that the figures on the expenditure side are mounting up year by year, and, as I pointed out in the course of my budget speech, since last year the expenditure on civil administration has gone up by Rs. 95 lakhs. Again I must point out to the Government that they are undertaking schemes of idealogical nature and other things in their own way without consulting this House.

Sri K. HANUMANTHAIYA.—What is it about which we did not consult the House?

Sri J. MOHAMED IMAM.—For example, cultural schemes. They may be good, but is this the time to incur all this expenditure? If you go on shouldering fresh liabilities and commitments, are we to vote for them? For example, your cultural scheme may cost us Rs. 10 to 15 lakhs. First of all, the House has to decide whether the cultural scheme, however good it may be, should be undertaken by the Government or by private agency. Is it the liability or the responsibility of the Government? Similarly, our *samskriti prachara*. I find that we are entering into fresh and more and more commitments which we cannot agree to. So we have no confidence in the Government that they are going to curtail expenditure or effect economy. As such, if we vote for this taxation and hand it over to you, what will happen? It will go to make up the deficit and our financial problem will not be solved. On the other hand, the cumulative effect of all this will be the crushing burden on the people who are already over-burdened, under-nourished, who are ill-fed and ill-clothed. That is the position. I appeal to the Government in all humility, in all sincerity I am doing it. There is no hurry in passing these measures and other measures which will be of disastrous consequence. The return we get will be small. Just defer these schemes. Please appoint an Expert Committee. Let them go into the entire financial structure and financial position of the State. Let them find out what is the real financial position; let them also find out what our future commitments are, and let us have an idea as to the real burden we have to bear. I do not hesitate if it comes to the question of paying an extra taxation, but I must have a realistic and proper perspective and a definiteness. I am speaking for all the people. Please postpone this for a month or two, appoint a Committee. Let them go into all this matter and we will come forward with necessary propositions. If we feel that taxation is inevitable, we will wholeheartedly co-operate with you, but if you go on in this way—the previous Government also went the same way—if you go on the same way, I may say you have no financial policy and no vision and foresight. With these remarks, I oppose this measure.

ಶ್ರೀ ಆರ್. ಅನಂತರಾವ್ (ಚಾಮರಾಜಪೇಟೆ).- ಅಧ್ಯಕ್ಷರೇ, ಈ ಶಾಸನವನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಆಸೆ ಪಡುತ್ತೇನೆ. ನಮ್ಮ ಎದುರು ಪಕ್ಷದವರು ಇದುವರೆಗೂ ಮಾತನಾಡಿ

ಇದರಿಂದ ಜನಸಾಮಾನ್ಯಕ್ಕೆ ತೊಂದರೆಯಾಗುತ್ತದೆ, ಜನಸಾಮಾನ್ಯದ ಮೇಲೆ ತೆರಿಗೆ ಬೀಳುತ್ತದೆ ಎಂದು ಹೇಳಿದರು. ನಾನು ಅವರಿಗೆ ಒಂದು ಪ್ರಶ್ನೆ ಹಾಕುತ್ತೇನೆ. ಇದು ಜನಸಾಮಾನ್ಯ ಉಪಯೋಗಿಸತಕ್ಕ ವಸ್ತುವೇ ಅಥವಾ ನ್ಯಾಯವಾಗಿ ಸಾಹುಕಾರರು ಉಪಯೋಗಿಸುವಂಥದೆ? 10–15 ಸಾವಿರ ರೂಪಾಗಳ ಮೋಟಾರನ್ನು ಕೊಂಡು ಕೊಂಡು ಪೆಟ್ರೋಲ್ ಉಪಯೋಗಿಸುವವರು ಬಡಜನರೇ! ನೀವೇ ಹೇಳಿ. ನೂರಕ್ಕೆ 8–10 ಜನ ಸಾಹುಕಾರರಿದ್ದಾರೆ, ಅವರಿಗೆ ತಗಲತಕ್ಕದ್ದನ್ನು ಜನಸಾಮಾನ್ಯಕ್ಕೆ ತಗಲಿದಂತೆ ಇಟ್ಟುಕೊಳ್ಳುವುದಕ್ಕಾಗುತ್ತದೆಯೇ ?

ಇನ್ನೊಂದು ವಿಷಯ ಅವರು ಹೇಳಿದರು, ಈ ತೆರಿಗೆಯಿಂದ ಬಸ್ಸುಗಳಲ್ಲಿ ದರ ಹೆಚ್ಚುತ್ತದೆ ಎಂದು. ಅದೂ ಸರಿಯಲ್ಲ. ಗೌರ್ನಮೆಂಟ್ ಬಸ್ ತಿರುಗುವುದಕ್ಕೆ monopoly ಇರುವ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಮಾತ್ರ ಪ್ರೈಪೋಟಿ ಎಂಬ ಪ್ರಶ್ನೆ ಏರುವುದು. ಆದರೆ ಅಲ್ಲಿಯೂ ಕೂಡ ಒಬ್ಬರು ಟಿಕೆಟ್ ದರ ಹೆಚ್ಚಿಸಿದಂದರೆ ಇನ್ನೊಂದು ಬಸ್ಸಿನವರು ದರ ಕಡಿಮೆಮಾಡುತ್ತಾರೆ. ಅಲ್ಲಿಗೆ ಅವರಿಗೆ ನಷ್ಟವಾಗುತ್ತದೆ. ಆದ್ದರಿಂದ ಬಸ್ಸಿನವರೂ ಇಂಥ ಕಷ್ಟಕಾಲದಲ್ಲಿ ಹೆಚ್ಚಿಗೆ ಲಾಭ ಅಪೇಕ್ಷಿಸದೆ ತಮ್ಮ ಲಾಭಾಂಶವನ್ನು ಕಡಮೆ ಮಾಡಿಕೊಳ್ಳಬೇಕು. ಹಾಗೆ ಮಾಡದೆ ದರ ಮಿತಿಮೀರಿ ಹೆಚ್ಚಿಸುತ್ತಾ ಹೋದರೆ ಕೊನೆಗೆ ಜನಸಾಮಾನ್ಯ ನಡೆದುಕೊಂಡೇ ಹೋಗುತ್ತಾರೆ; ಸೈಕಲ್ ಮೇಲೆ ಹೋಗುತ್ತಾರೆ. ಮೋಟಾರುಗಳ ಮೇಲೆ ಹೋಗುವುದನ್ನು ಬಿಡುವುದಕ್ಕೂ ಅವರು ಸಿದ್ಧ. ಆದ್ದರಿಂದ ಸಾಹುಕಾರರಿಗೆ ಇದು ಮುಖ್ಯಾಲುಪಾಲು ಅನ್ವಯಿಸತಕ್ಕ ತೆರಿಗೆ. ಸಾಮಾನ್ಯ ಮನುಷ್ಯನು ಉಪಯೋಗಿಸುವ ವಸ್ತುವಿನ ಮೇಲೆ ಏನಾದರೂ ತೆರಿಗೆ ಹಾಕಿದ್ದರೆ ಎಲ್ಲರೂ ವಿರೋಧಿಸುತ್ತಿದ್ದರು. ಸಾಹುಕಾರರ ಮೇಲೆ ಬೀಳತಕ್ಕ ಇಂಥ ತೆರಿಗೆಗೆ ನಮ್ಮ ಸ್ನೇಹಿತರು ಅಷ್ಟು ವಿರೋಧಿಸಭಾರದಾಗಿತ್ತು. ಏಕೆಂದರೆ ಶ್ರೀ ಇಮಾಂ ಸಾಹೇಬರು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ನೋಡಿದ್ದಾರೆ. ಅಲ್ಲಿ ಸಾಮಾನ್ಯವಾಗಿ ಸಾಹುಕರರು ಉಪಯೋಗಿಸತಕ್ಕ ವಸ್ತುವಿನ ಮೇಲೆ ತೆರಿಗೆ ಹಾಕುವುದನ್ನು ಯಾರೂ ವಿರೋಧಿಸುವುದಿಲ್ಲ. ಅಂಥ ವಸ್ತುಗಳ ಮೇಲೆ ಹೆಚ್ಚು ಹೆಚ್ಚು ತೆರಿಗೆಯನ್ನು ಹಾಕುತ್ತಿರುತ್ತಾರೆ, ಹಿಂದೆ ಒಂದಾನೊಂದು ಕಾಲದಲ್ಲಿ ಉಪ್ಪಿನ ಮೇಲೆ ತೆರಿಗೆ ಹಾಕಿದ್ದರು. ಮಹಾತ್ಮಾ ಗಾಂಧಿಯವರು ಅದು ಜನಸಾಮಾನ್ಯರು ಉಪಯೋಗಿಸುವ ವಸ್ತುವೆಂದು ಹೇಳಿ ಅದನ್ನು ಪ್ರಬಲವಾಗಿ ವಿರೋಧಿಸಿದರು ; ಅದರ ಮೇಲೆ ಅದನ್ನು ತೆಗೆದುಹಾಕಿದರು. ಆದ್ದರಿಂದ ಬಡವರು ಉಪಯೋಗಿಸತಕ್ಕ ವಸ್ತುವಿನ ವಿಷಯದಲ್ಲಿ ಸರ್ಕಾರದವರು ಎಂದೂ ತೆರಿಗೆ ಹಾಕಬಾರದು.

ಶ್ರೀ ಬಿ. ಹುಚ್ಚೇಗೌಡ (ತುರವೇಕೆರೆ).—ಇನ್ನು ಮೇಲೆ ಉಪ್ಪಿಗೂ ತೆರಿಗೆ ಹಾಕುತ್ತಾರೆ.

ಶ್ರೀ ಆರ್. ಅನಂತರಾಮ್.—ಅಲ್ಲದೆ, ನಮ್ಮ ಸರ್ಕಾರಿ ಬಸ್ಸುಗಳೂ ಕೂಡ ಇವೆ. ಅವರು ಕೂಡ ಈ ತೆರಿಗೆ ಹಾಕಿದೆಯೆಂದು ದರ ಹೆಚ್ಚಿಸುವುದಿಲ್ಲ.

ಒಟ್ಟಿನಲ್ಲಿ ಈಗ ಕಷ್ಟ ಕಾಲದಲ್ಲಿದ್ದೇವೆ. ನಮಗೆ ಖೋತಾ ಬಡ್ಜೆಟ್ ಬಂದಿದೆ. ಈ ಬಡ್ಜೆಟ್ಟನ್ನು ಸರಿದೂಗಿಸುವುದು ನಮ್ಮ ಮುಖ್ಯ ಕರ್ತವ್ಯ. ಪ್ರತಿ ವರ್ಷವೂ ಖೋತಾವನ್ನು ಸರಿದೂಗಿಸದೆ ಹಾಗೆಯೇ ಬಿಟ್ಟುಕೊಂಡು ಹೋದರೆ ಕೊನೆಗೆ ದೇಶಕ್ಕೆ ಕಷ್ಟ ಬರುತ್ತದೆ. ಬಸ್ ಮಾಲೀಕರುಗಳೂ ನಮ್ಮೊಡನೆ ಸಹಕರಿಸಿ ಈ ತೆರಿಗೆಯನ್ನು ಕೊಟ್ಟು ತಮ್ಮ ಲಾಭವನ್ನು ಸ್ವಲ್ಪ ಮಟ್ಟಿಗೆ ಕಡಮೆಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಬೇಕಾಗಿದೆ. ಸ್ವಲ್ಪ ದಿವಸಗಳು ಹೀಗೆ ಕಷ್ಟವಿರುತ್ತದೆ ಅಷ್ಟೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಬಿಲ್ಲನ್ನು ಯಾರೂ ವಿರೋಧವಿಲ್ಲದೆ ಒಪ್ಪುತ್ತಾರೆಂದು ನಂಬಿದ್ದೆ. ಆದರೆ, ತೆರಿಗೆಯೆಂದ ಮಾತ್ರಕ್ಕೆ ವಿರೋಧಮಾಡಬೇಕೆಂಬ ಮನೋಭಾವನೆಯಿಂದ ನಮ್ಮ ವಿರೋಧಪಕ್ಷದ ಸ್ನೇಹಿತರು ಮಾತನಾಡಿದ್ದಾರೆ. ಅವರ ವಾದದಲ್ಲಿ ಮುಖ್ಯವಾಗಿ ಈ ತೆರಿಗೆ ಬಡವರ ಮೇಲೆ ಬೀಳುತ್ತದೆ. ಆದ್ದರಿಂದ ಕೂಡದು ಎಂದು ಹೇಳಿದ್ದಾರೆ. ಮಾನ್ಯ ಸ್ನೇಹಿತರಾದ ಇಮಾಂ ಸಾಹೇಬರು ಬರೀ ಡಿಫಿಸಿಟ್ಟನ್ನು cover up ಮಾಡುವುದಕ್ಕೆ ಈ ತೆರಿಗೆ ಹಾಕುತ್ತೀರಿ, ಇಂಥದರಿಂದ ಏನು ಪ್ರಯೋಜನ ಎಂದು ಹೇಳಿದರು.

ಮೊದಲನೆಯದಾಗಿ, ಪೆಟ್ರೋಲ್ ಉಪಯೋಗಿಸುವವರು ವಿಶೇಷವಾಗಿ ಯಾರೆಂಬುದನ್ನು ವಿಮರ್ಶೆಮಾಡುವುದಾದರೆ, ಅವರು ಬಹುಮಟ್ಟಿಗೆ ಬಸ್ ಮಾಲೀಕರು, ಕಾರ್ ಮಾಲೀಕರು, ಮೋಟಾರ್ ಸೈಕಲ್ಲು ಮತ್ತು ಲಾರಿಗಳನ್ನಿಟ್ಟುಕೊಂಡಿರುವವರು. ಸಂಸ್ಥಾನಾಮಳೆ ಇಂಥವರು ಎಷ್ಟು ಜನರಿದ್ದಾರೆಂದು ಲೆಕ್ಕಹಾಕಿ ಎಲ್ಲರನ್ನೂ ಒಟ್ಟು ಸೇರಿಸಿದರೆ ಸುಮಾರು 10,000 ಜನ ಆಗಬಹುದು. ನಿಖರವಾದ ಅಂಕಿಗಳನ್ನು ಬೇಕಾದರೆ ಹೇಳಬಲ್ಲೆ. ಕಾರ್ ಮಾಲೀಕರು 7,800 ಜನ ಇದ್ದಾರೆ, ಬಸ್ ಮಾಲೀಕರುಗಳು 1,886 ಜನರಿದ್ದಾರೆ, ಲಾರಿಯವರು 3,347 ಜನ ಇದ್ದಾರೆ ಅಷ್ಟೆ. ಇದರಲ್ಲೂ ಕೆಲವರು ಡೀಸಲ್ ಆಯಿಲ್ ನಿಂದ ಬಸ್ಸು, ಲಾರಿಗಳನ್ನು ಓಡಿಸವವರೂ ಇದ್ದಾರೆ. ಅಲ್ಲಿಗೆ ಎಷ್ಟೇ ಹೆಚ್ಚೆಂದರೂ 10–12 ಸಾವಿರಕ್ಕೆ ಮೇಲ್ಪಟ್ಟಿಲ್ಲ. ಈ ಜನರೆಲ್ಲರೂ poor class ನವರೇ, rich class ನವರೇ ಅಥವಾ middle class ನವರೇ ಎಂದು ವಿಮರ್ಶೆ ಮಾಡುವುದಾದರೆ, ಇವರು ಎಲ್ಲರೂ ಮೇಲಿನ ವರ್ಗದವರ (rich class) ದರ್ಜೆಗೆ ಸೇರಿದವರು ಅಥವಾ ಒಂದು ವೇಳೆ ಕೆಲವರು ಆ ದರ್ಜೆಗೆ ಬರದೆ ಹೋದರೆ, upper middle class ನೊಳಗಾದರೂ ಸೇರಿದವರಾಗಿರುತ್ತಾರೆಂದು ಧಾರಾಳವಾಗಿ ಹೇಳಬಹುದು. ಅಂದ ಮೇಲೆ ಈ ತೆರಿಗೆ upper middle class ಹಾಗೂ rich class ಮೇಲೆ ಬೀಳುತ್ತದೆಂದು ಹೇಳಬಹುದೇ ಹೊರತು ಬಡವರ ಮೇಲೆ ಬೀಳುವುದಿಲ್ಲ.

ಆ ಮೇಲೆ ಮಾನ್ಯ ಸ್ನೇಹಿತರು ಇನ್ನೊಂದು ವಾದ ಹೇಳಿದರು. ಬಸ್ ಮಾಲೀಕರು, ಹೆಚ್ಚಿಗೆ ತೆರಿಗೆಗಳನ್ನು ಕೊಡುವುದರಿಂದ ಸೀಟಿಂಗ್ ಚಾರ್ಜ್‌ಗಳನ್ನು ಜಾಸ್ತಿ ಮಾಡುತ್ತಾರೆ, ಆದುದರಿಂದ ಈ ತೆರಿಗೆ indirect ಆಗಿ ಬಡವರ ಮೇಲೆ ಬೀಳುತ್ತದೆಂದು ಹೇಳಿದ್ದಾರೆ. ಅದೂ ಒಪ್ಪತಕ್ಕಂಥದಲ್ಲ. ಈಗಿರುವ ಆಕ್ಟಿನಲ್ಲೇ ಅಂಥದಕ್ಕೆ provision ಇಲ್ಲ. ಮೈಲಿಗೆ ಒಂದಾಣೆ ಅಥವಾ 9 ಕಾಸಿನ ಮೇಲೆ ದರವನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹೀಗೆ ಪೆಟ್ರೋಲ್ ತೆರಿಗೆ ಹೆಚ್ಚಾದ ಕೂಡಲೆ ಪ್ರತಿಯೊಬ್ಬ ಪ್ರಯಾಣಿಕನ ಮೇಲೆಯೂ ಹೆಚ್ಚಿಗೆ ದರ ವಿಧಿಸುವುದಕ್ಕಾಗುವುದಿಲ್ಲ. ಆದ್ದರಿಂದ ಈ ರೀತಿಯಲ್ಲೂ ಕೂಡ ಅವರು ಬಡವರಿಗೆ ಇದು ತೊಂದರೆ ಕೊಡುತ್ತದೆಂದು ಹೇಳುವ ವಾದ ವಿತಂಡವಾದವೇ ಹೊರತು ಬೇರೆಯಲ್ಲ. ಅದರಲ್ಲೂ ನಮ್ಮ ದೇಶದಲ್ಲಿ ಸಾಹುಕಾರರೇ ಬಸ್ಸು ಮತ್ತು ಕಾರುಗಳನ್ನಿಡುವವರು. ಅನೇಕರು ವಾದ ಮಾಡಿದ್ದಾರೆ, ತೆರಿಗೆಗಳು ಹೀಗೆ ಹೆಚ್ಚಾದರೆ ಬಸ್ಸುಗಳನ್ನು, ಓಡಿಸುವವರು

(ಶ್ರೀ ಡಿ. ದೇವರಾಜ ಅರಸ್.)

ಕಡಮೆಯಾಗುತ್ತಾರೆ ಎಂದು. ಸ್ಪೇರ್ ಪಾರ್ಟುಗಳ ಬೆಲೆ ಹೆಚ್ಚಿ, ಪೆಟ್ರೋಲಿನ ಬೆಲೆಯೂ ಹೆಚ್ಚಿದರೆ ಎಲ್ಲರೂ ಕಾರು, ಬಸ್ಸುಗಳನ್ನು ನಿಲ್ಲಿಸುತ್ತಾರೆಂದು ಹೇಳಿದರು. ನಮ್ಮ ಅನುಭವ ನೋಡಿದರೆ ಇದಕ್ಕೆ ತೀರಾ ವ್ಯತಿರಿಕ್ತವೇ ಆಗಿದೆ. ಹತ್ತು ಬಸ್ಸು ರೈನುಗಳಿಗೆ ಯಾವುದಾದರೂ ಒಂದು ಡಿಸ್ಟ್ರಿಕ್ಟಿನಲ್ಲಿ ಅರ್ಜಿ ಕರೆಯುತ್ತೆಂದರೆ 500 ಅರ್ಜಿಗಳು ಒಂದೇ ಸಮನೆ ಬರುತ್ತಿರುತ್ತವೆ. ಅದರಲ್ಲೂ ಸಾಲು ಸಾಲಾಗಿ ನನಗೆ ಕೊಡಬೇಕು, ತನಗೆ ಕೊಡಬೇಕು, ಎಂದು ಮಾಲೀಕರುಗಳು ನಿಂತಿರುವುದನ್ನು ಈಗಲೂ ನೋಡುತ್ತಿದ್ದೇವೆ. ಒಂದುವೇಳೆ, ನಮ್ಮ ಮಾನ್ಯ ಸ್ನೇಹಿತರು ವಾದಮಾಡುವ ಹಾಗೆ, ಬಸ್ ಮಾಲೀಕರುಗಳಿಗೆ ನಷ್ಟವಾಗುತ್ತದೆಂದು ಹೇಳುವಹಾಗಿದ್ದರೆ, ಇಷ್ಟೊಂದು ಜನ ಏಕೆ ಮುಂದೆ ಬರುತ್ತಿದ್ದರು ?

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).— ಪರ್ಮಿಟುಗಳ ವ್ಯಾಪಾರಕ್ಕೆ !

10-30 A.M.

ಶ್ರೀ ಡಿ. ದೇವರಾಜ ಅರಸ್.—ಇನ್ನೂ ಒಂದು ದೃಷ್ಟಿಯಿಂದಲೂ ನೋಡೋಣ. ಮಾನ್ಯ ಮಿತ್ರರು ಹೇಳಿದಂತೆ ಬಸ್ ಮಾಲೀಕರುಗಳೆಲ್ಲರೂ ಮಾತನಾಡಿಕೊಂಡು ಪೆಟ್ರೋಲ್ ದರ ಜಾಸ್ತಿಯಾಯಿತೆಂದು ಹೇಳಿ ಬಸ್ಸುಗಳನ್ನು ನಿಲ್ಲಿಸಿದರೆ ಬಹಳ ಸಂತೋಷವೇ ! ಬಡ ಜನರಿಗೇನೂ ನಷ್ಟವಾಗುವುದಿಲ್ಲ. ಹಿಂದೆ ತಾಲ್ಲೂಕುಗಳಿಂದ ನಡೆದುಕೊಂಡು ಕೂಡ ಮೈಸೂರಿಗೆ ಬರುತಿದ್ದರೆಂದು ಕೇಳಿದ್ದೇವೆ. ಈಗಲೂ ಸಹ ಜನರು ಹಾಗೆಯೇ ಮಾಡಿಯಾರು. ಒಂದು ವೇಳೆ ಲಾರಿಗಳು ನಿಂತು ಹೋದರೆ ಎತ್ತಿನ ಗಾಡಿಗಳಿಗೆ ಸುಗ್ಗಿಯ ಕಾಲ ಬರುತ್ತದೆ. ಅವರೇ ಎಷ್ಟು ಬೇಕಾದರೂ ಓಡಿಸುತ್ತಾರೆ. ಆದ್ದರಿಂದ ಪೆಟ್ರೋಲ್ ದರ ಹೆಚ್ಚಿಸಿದ ಮಾತ್ರಕ್ಕೇ ಲಾರಿ ಮಾಲೀಕರುಗಳು ಗಾಡಿಗಳನ್ನು ನಿಲ್ಲಿಸಿದರೂ ಏನೂ ಅನಾಹುತವಾಗುವುದಿಲ್ಲ. ಮತ್ತು ಕಾರಿನಲ್ಲಿ ಓಡಾಡುವುದೂ ಕೂಡ ನಿಲ್ಲುವುದಿಲ್ಲ. ಬರಿಯ ಬಡ್ಜೆಟ್ಟಿನ ಖೋತಾ ಕಡಮೆಮಾಡುವುದಕ್ಕೆ ಈ ತೆರಿಗೆ ಹಾಕುತ್ತಿದ್ದಾರೆ. ಇದರಿಂದ ಕೇವಲ ನಾಲ್ಕೈದು ಲಕ್ಷ ರೂಪಾಯಿ ಬರುತ್ತದೆ, ಏಕೆ ಹಾಕಬೇಕೆಂದು ಹೇಳುವಾಗ, ಇದರ converse ಯೋಚನೆಮಾಡಿದರೆ, ಅಲ್ಪಸ್ವಲ್ಪ ಹಾಕುವುದು ಬೇಡ ಎಂದು ಹೇಳಿದ ಹಾಗಾಗುತ್ತದೆ. ಅಂದರೆ ಹೆಚ್ಚು ತೆರಿಗೆ ಹಾಕಬೇಕೆ ? ಹೆಚ್ಚುತೆರಿಗೆ ಹಾಕಬೇಕೆಂದು ಹೇಳುವುದಾದರೆ ಬಹಳ ಸಂತೋಷ. ಹನಿ ಕೂಡಿದರೆ ಹಳ್ಳ, ತೆನೆ ಕೂಡಿದರೆ ಬತ್ತ ಎಂದು ಹೇಳುತ್ತಾರೆ. ಹಾಗೆ ಸಣ್ಣಪುಟ್ಟ ತೆರಿಗೆ ಎಂದು ಹೇಳಿ ಯಾವ ಬುದ್ಧಿವಂತ ಸರ್ಕಾರವೂ ಇದನ್ನು ಬಿಡುವುದಕ್ಕಾಗುವುದಿಲ್ಲ. ದೊಡ್ಡ ದೊಡ್ಡ ತೆರಿಗೆ ಬರುವುದಿದ್ದರೆ, ನಿಜವಾಗಿ ಬಡಜನರ ಮೇಲೆ ಹೊರೆಬೀಳದೇಯಿದ್ದರೆ, ಅಂಥದನ್ನು ಹಾಕಬೇಕು ಅಲ್ಲದೆ, ಖೋತಾ ಕಡಮೆಮಾಡುವುದು ಸರ್ಕಾರದ ಕರ್ತವ್ಯವಲ್ಲವೆ ? ಬಡ್ಜೆಟ್ಟಿನಲ್ಲಿ ಏಕೆ ಖೋತಾ ಬಂತು? ರಾಷ್ಟ್ರಾಭ್ಯುದಯ ಕಾರ್ಯಗಳನ್ನು ಹೆಚ್ಚುಹೆಚ್ಚಾಗಿ ಕೈಕೊಂಡು, ಸ್ಕೂಲುಗಳು, ಆಸ್ಪತ್ರೆಗಳು ಮುಂತಾದ ಜನರಿಗೆ ಅನುಕೂಲವಾದ ಕಾರ್ಯಗಳನ್ನು ಮಾಡಬೇಕಾದರೆ, ಬಡ್ಜೆಟ್ಟಿನಲ್ಲಿ ಖೋತಾ ಬೀಳದೆ ಹೇಗೆ ಸಾಧ್ಯ! Inspite of a deficit budget and inspite of financial troubles, Government have been able to provide more funds for all those items. ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಈ ಸಾರಿ ದೇಶಾಭ್ಯುದಯ ಕಾರ್ಯಗಳಿಗೆ ಹೋದ ವರ್ಷಕ್ಕಿಂತ ಸುಮಾರು ಒಂದುಕೋಟಿ ರೂಪಾಯಿಗಳವರೆಗೆ ಹೆಚ್ಚಾಗಿ ಒದಗಿಸಿದ್ದಾರೆ. ವಿರೋಧಪಕ್ಷದ ಸದಸ್ಯರು ಹೇಳಿದ ಹಾಗೆ ಖೋತಾ ಬಡ್ಜೆಟ್ ಆಗುತ್ತದೆ, ಖರ್ಚುಮಾಡುವುದು ಬೇಡ ಎಂದು ಒಂದು ವೇಳೆ ಹೇಳುವುದಾದರೆ, ಈ ಒಂದು ಕೋಟಿ ರೂಪಾಯಿ ಉಳಿತಾಯಮಾಡಿ ಖೋತಾ ಇಲ್ಲದಂತೆ ಸುಲಭವಾಗಿ ತೋರಿಸಬಹುದಾಗಿತ್ತು. ಇದರಲ್ಲಿ ಕೃಷ್ಟವೇನೂ ಇರಲಿಲ್ಲ. ಖರ್ಚು ಹೆಚ್ಚಾಗಲು ಕಾರಣ ಜನರಿಗೆ ಅನುಕೂಲವಾಗಲೆಂಬ ಉದಾತ್ತ ಧ್ಯೇಯದಿಂದ ಸರ್ಕಾರ ಜನೋಪಯುಕ್ತ ಕಾರ್ಯಗಳಿಗೆ ಹೆಚ್ಚು ಹಣವನ್ನೊದಗಿಸಿರುವುದು. ತೆರಿಗೆ ಹಾಕುವುದಾದರೆ ಶ್ರೀಮಂತರ ಮೇಲೆ ಹಾಕಿ ಎಂಬ ವಾದವನ್ನು ಹೇಳುತ್ತಿದ್ದರು. ಅದೇ ಉದ್ದೇಶದಿಂದ ಹಾಕಿದರೆ, ಈಗ ಹೀಗೆ ಹೇಳುತ್ತಾರೆ. ಅವರ ದೃಷ್ಟಿಯಲ್ಲಿ ಬಸ್‌ಮಾಲೀಕರೂ, ಟ್ಯಾಕ್ಸಿ ಮಾಲೀಕರೂ, ಮೋಟಾರು ಮಾಲೀಕರೂ ಐಶ್ವರ್ಯವಂತರಲ್ಲವೆಂದೆ? ಹಾಗಿದ್ದರೆ ನಮ್ಮ ದೇಶದಲ್ಲಿ ಇನ್ನು ಯಾರು ಯಾರು ಶ್ರೀಮಂತರು? ಆದುದರಿಂದ ಈ ತೆರಿಗೆಯಿಂದ ಬಡವರಿಗೆ ಅನಾನುಕೂಲವಾಗುತ್ತದೆಂದು ಹೇಳುವುದರಲ್ಲಿ ಯಾವ ತಿರುಳೂ ಇಲ್ಲ. ಪೆಟ್ರೋಲನ್ನು ಉಪಯೋಗಿಸತಕ್ಕ ಕಾರು, ಬಸ್ಸು ಮುಂತಾದ ವಾಹನಗಳ ಮಾಲೀಕರು ತೆರಿಗೆ ಕೊಡುವುದರಲ್ಲಿ ಯಾವುದೂ ಕಷ್ಟವಿಲ್ಲ. ತೆರಿಗೆ ಹಾಕುವಾಗ ಯಾವಾಗಲೂ ಹೆಚ್ಚೆಂದು ಹೇಳುತ್ತಲೇ ಇರುತ್ತಾರೆ. ಈ ಖೋತಾ ಬಡ್ಜೆಟ್ ಯಾವ ಕಾರಣದಿಂದ ಬಂದಿದೆಯೆಂಬುದನ್ನು ಮನಗಂಡು ಈ ತೆರಿಗೆ ಹಾಕಿ ಖೋತಾ ಕಡಮೆಮಾಡುವುದೂ ಅಲ್ಲದೆ, ಒಂದು ತತ್ವವೂ ಇದೆ. ತೆರಿಗೆಯನ್ನೂ ಹಾಕಬಾರದು ಖರ್ಚೂ ಹೆಚ್ಚಬಾರದು ಎನ್ನುವ ವಾದವನ್ನು ಮಾಡುತ್ತಾರೆ. ಶ್ರೀ ಇಮಾಂರವರು, ವೆಲ್‌ಫೇರ್ ಸ್ಟೇಟಿನ ತತ್ವವನ್ನೊಪ್ಪಿಕೊಂಡಿರುವಾಗ, ಖರ್ಚು ಹೆಚ್ಚಾಗಲೇಬೇಕು. ಪ್ರಜಾಪ್ರಭುತ್ವದಲ್ಲಿ ಯಾರೇ ಸರ್ಕಾರ ನಡೆಸಿದರೂ ತೆರಿಗೆಯಿಲ್ಲದೆ ಸರ್ಕಾರ ನಡೆಸುವುದು ಸಾಧ್ಯವಿಲ್ಲದೇಯಿರುವ ಮಾತು. ಖರ್ಚು ಹೆಚ್ಚಿಸುತ್ತಲೇ ಇರಬೇಕು, ಅದಕ್ಕೆ ತೆರಿಗೆ ಹಾಕಲು ಹೊಸ ಹೊಸ ಮಾರ್ಗಗಳನ್ನು ಹುಡುಕಲೇಬೇಕು. ಯಾರು ಹೊರೆಯನ್ನು ಹೊರಬಲ್ಲರೊ ಅವರ ಮೇಲೆ ಹಾಕಬೇಕು. ಆದುದರಿಂದ, ಈಗ ಸರ್ಕಾರ ಹಾಕಿರುವ ತೆರಿಗೆಯ ಹೊರೆ, ಹೊರೆಯನ್ನು ಹೊರುವುದಕ್ಕೆ ಯಾರಿಗೆ ಶಕ್ತಿಯಿದೆಯೋ ಅವರ ಮೇಲೆ ಬೀಳುವುದರಿಂದ, ಈ ಮಸೂದೆಯನ್ನು ಸಭೆ ಒಪ್ಪಬೇಕೆಂದು ನನ್ನ ಅಭಿಪ್ರಾಯ.

Mr. SPEAKER.—The House will now rise for lunch and meet again at Eleven of the Clock.

(The House rose for Lunch at Thirty-five Minutes past Ten of the Clock and reassembled at Eleven of the Clock.

[MR. SPEAKER in the Chair.]

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಗಳೆ, ಈಗ ನಮ್ಮ ಮುಂದೆ ಬಂದಿರತಕ್ಕ ಈ ಮಸೂದೆಯ ಸಂಬಂಧವಾಗಿ ಎರಡು ಮಾತಗಳನ್ನು ಹೇಳಲು ಬಯಸುತ್ತೇನೆ. ಈ ಸಮಯದಲ್ಲಿ

ಒಂದು ವಿಷಯವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಯಾವಾಗಲೂ ಸರ್ಕಾರಕ್ಕೆ ಅವರು ತರುವ ಹಣಕಾಸಿನ ಮಸೂದೆಗಳಿಗೆ ವಿರೋಧ ಬಂದರೆ ಅದು ಅಪ್ರಿಯವಾಗಿರುತ್ತದೆ, ಆಕರ್ಷಣೀಯವಾಗಿರುವುದಿಲ್ಲ. ಆದರೆ ಈ ಹೊತ್ತು ನಾನು ಈ ಮಸೂದೆಯ ವಿಷಯವನ್ನು ಮಾತ್ರ ಮಾತನಾಡುವುದು ನನ್ನ ಉದ್ದೇಶವಲ್ಲ. ಇದರ ಹಿನ್ನೆಲೆಯೇನಿದೆ ಎಂಬ ವಿಷಯದಲ್ಲಿ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ನಾವು ಏನೊಂದು ಸತ್ಸಂಪ್ರದಾಯವನ್ನು ಹಾಕಬೇಕೆಂದಿದ್ದೆವು ಎಂಬುದನ್ನು ಮಾತ್ರ ಹೇಳುವುದು ನನ್ನ ಉದ್ದೇಶ. ಸರ್ಕಾರಕ್ಕೆ ಹಣಕಾಸಿನ ಪರಿಸ್ಥಿತಿ ಇಷ್ಟು ಉತ್ಕಟವಾಗಿರುವ ಸಂದರ್ಭದಲ್ಲಿ, ಬಡ್ಜೆಟನ್ನು ಸರಿದೂಗಿಸುವುದಕ್ಕೆ ಸಾಧ್ಯವಾಗದೆಯಿರುವ ಸಂದರ್ಭದಲ್ಲಿ ಭವಿಷ್ಯ ಸುಖವಾಗಿರುತ್ತದೆ, ಸುಖಮಯವಾಗಿರುತ್ತದೆ, ಆಶಾದಾಯಕವಾಗಿರುತ್ತದೆ ಎಂಬ ಭರವಸೆಯಿಲ್ಲದೆಯಿರುವಾಗ, ಎಲ್ಲರೂ ಕಲೆತು ಸೌಜನ್ಯದಿಂದ ಕೂಡಿ ಸರ್ಕಾರವನ್ನು ಮುಂದೆ ನಡೆಸಬೇಕೆಂಬ ತತ್ವವನ್ನು ಮುಂದಿಟ್ಟುಕೊಂಡು ಎಲ್ಲರೂ ಸೇರಿ ಪರಸ್ಪರ ಸಹಕಾರ ಸೌಹಾರ್ದಗಳಿಂದ ಒಂದು ಸತ್ಸಂಪ್ರದಾಯವನ್ನ ಸ್ವೀಕರಿಸಿ ಕೆಲಸಮಾಡಬೇಕೆಂದು ಒಂದು ಸಲಹೆಯನ್ನು ಕೊಟ್ಟಿದ್ದಾಯಿತು. ಶ್ರೀ ಇಮಾಂರವರೂ ನಾನೂ ಮಾಡಿದ ಈ ಸಲಹೆಯ ಹಿನ್ನೆಲೆಯನ್ನು ಈಗ ಸರ್ಕಾರದ ಗಮನಕ್ಕೆ ತರುತ್ತೇನೆ. ಈ ಒಂದು ಹಿನ್ನೆಲೆಯಿಂದ ಮಾಡಿದ ಸಲಹೆಗೆ ತಿರಸ್ಕಾರ ಬಂದಿದೆ, ಇದರಿಂದ ಮನಸ್ಸಿಗೆ ನೋವಾಗುತ್ತಿದೆ, ಇದನ್ನು ಸಭೆಯ ಮುಂದಿಡುತ್ತೇನೆ. ಕೇವಲ ಈ ಹೊಸ ತೆರಿಗೆಯನ್ನು ಈ ಹೊಸ ಹಣಕಾಸಿನ ಪರಿಸ್ಥಿತಿಯಲ್ಲಿ ಹಾಕುವುದಕ್ಕೆ ನಿರಾಕರಿಸಬೇಕು, ವಿರೋಧಿಸಬೇಕು ಎಂಬ ಭಾವನೆಯಿಂದಲ್ಲ. ಒಂದು ಸತ್ಸಂಪ್ರದಾಯವನ್ನು ಬೆಳೆಸಬೇಕೆಂಬುದು ನಮ್ಮ ಆಶೆ. ಪರಿಸ್ಥಿತಿ ಹೇಗಿದೆ ಎಂಬುದನ್ನು ಸರ್ಕಾರದವರೂ ನಾವೂ ಕಲೆತು ಕುಳಿತು ಒಮ್ಮನಸ್ಸಿನಿಂದ ಎಲ್ಲ ದೃಷ್ಟಿಯಿಂದಲೂ ಯೋಚನೆ ಮಾಡೋಣ. ಖರ್ಚುಬಾಬುಗಳಲ್ಲಿ ಉಳಿತಾಯಮಾಡುವುದಕ್ಕೆ ಸಾಧ್ಯವೆ, ಮಿತವ್ಯಯಮಾಡುವುದಕ್ಕೆ ಸಾಧ್ಯವೆ, ಬರತಕ್ಕ ವರಮಾನವನ್ನು ಹೆಚ್ಚಿಸುವುದಕ್ಕೆ ಸಾಧ್ಯವೆ ಹೊಸದಾಗಿ ವರಮಾನಗಳ ಮೂಲಗಳನ್ನು ವೃದ್ಧಿಪಡಿಸುವುದಕ್ಕೆ ಸಾಧ್ಯವೆ, ಕೇಂದ್ರ ಸರ್ಕಾರಕ್ಕೂ ನಮಗೂ ಆಗಿರತಕ್ಕ ಒಪ್ಪಂದಗಳ ವಿಷಯದಲ್ಲಿ ಇವುಗಳೇ ಕಟ್ಟಕಡೆಯ ಮಾತೆ ಅಥವಾ ಬದಲಾವಣೆಮಾಡುವುದಕ್ಕೆ ಅವಕಾಶವಿಲ್ಲವೆ, ಎಂಬುದನ್ನೆಲ್ಲಾ ಯೋಚನೆಮಾಡಿ ನೋಡಿ, ನಾನಾ ದೃಷ್ಟಿಗಳಿಂದ ಪರಿಶೀಲಿಸಿ, ಮುಂದೆ ಸರಿಯಾಗಿ ಬದಲಾವಣೆಗಳನ್ನು ಮಾಡೋಣ. ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳಾಗಬೇಕಾಗಿವೆ; ಶ್ರೀ ಇಮಾಂರವರು ಹೇಳಿದಹಾಗೆ, ದೇಶದಲ್ಲಿ ಇನ್ನೂ ಅನೇಕ ಕಾರ್ಯಗಳಿಗೆ ಹಣ ಬೇಕಾಗುತ್ತದೆ. ನಾವು ಕಲೆತು ಕುಳಿತು ಒಮ್ಮನಸ್ಸಿನಿಂದ ಭವಿಷ್ಯವನ್ನು ನಿರ್ಧಾರಮಾಡೋಣ ಎಂಬ ಒಂದು ಸತ್ಸಂಪ್ರದಾಯವನ್ನು ಹಾಕುವುದಕ್ಕೆ ಹೊರಟ್ಟಿದ್ದೆವು. ಇದಕ್ಕೆ ತಿರಸ್ಕಾರ ಬಂದಿದೆ ಎಂದು ನಮಗೆ ವ್ಯಸನವಾಗಿದೆ. ಇಡೀ ಭರತಖಂಡದಲ್ಲೇ ಮೈಸೂರು ಒಂದು ಮಾದರಿಯಾದ ಸತ್ಸಂಪ್ರದಾಯವನ್ನು ಹಾಕತಕ್ಕ ಅವಕಾಶವಿತ್ತು. ಇದಕ್ಕೇಕೆ ನಕಾರ ಬಂತೋ ಗೊತ್ತಿಲ್ಲ. ಒಂದು ತೆರಿಗೆ ಹಾಕಲು ಇರಬೇಕಾದ ಮೂಲ ಸಿದ್ಧಾಂತವನ್ನು ನಾನಾಗಲೇ ಹೇಳಿದ್ದೇನೆ. ಪ್ರಜೆಗಳ ಪ್ರತಿನಿಧಿಗಳಾಗಿ ಬಂದಿರತಕ್ಕ ನಾವು ನಮ್ಮ ನಮ್ಮ ಕ್ಷೇತ್ರಗಳಿಗೆ ವಾಪಸು ಹೋದ ಸಮಯದಲ್ಲಿ ನಮ್ಮ ಜನರಿಗೆ ಒಂದು ಆಶ್ವಾಸನ, ಒಂದು ಸಮಾಧಾನ ಕೊಡುವುದಕ್ಕೆ ನಮಗೆ ಅವಕಾಶವಿರಬೇಕು. ಸರ್ಕಾರಕ್ಕೆ ಈ ತೆರಿಗೆಯನ್ನು ಹಾಕದಿದ್ದರೆ ಇನ್ನಾವ ಮಾರ್ಗವೂ ಇಲ್ಲ. ಇದು ಅನಿವಾರ್ಯ ಎಂಬುದು ನಮ್ಮ ಮನಸ್ಸಿಗೆ ದೃಢವಾಗಬೇಕು. ಈ ರೀತಿ ಒಂದು ವಿಶ್ವಾಸ, ಆಶ್ವಾಸನ ದೊರೆಯಲಿ, ಅದನ್ನು ದೊರಕಿಸಿಕೊಂಡು ಹೋಗೋಣ ಎಂಬುದು ನಮ್ಮ ಉದ್ದೇಶವಾಗಿತ್ತು. ಇದಕ್ಕೆ ನಕಾರ ಬಂತು! ಇದನ್ನು ನೋಡಿ ಒಂದು ಸರ್ಕಾರ ಈ ರೀತಿ ಇರುವುದೂ ಉಂಟೆ ಎನ್ನಿಸುತ್ತದೆ. ಮೈಸೂರಿನ ಶಾಸನ ಸಭೆಯಲ್ಲಿ ಇನ್ನೆಲ್ಲೂ ಕಂಡುಕೇಳಿಲ್ಲದಂಥ ಅವಕಾಶ ಬಂದಿವೆ. ಪ್ರತಿಪಕ್ಷದ, ಕಾಂಗ್ರೆಸ್ ಪಕ್ಷದ ಮತ್ತು ಇತರ ಪಕ್ಷಗಳವರೆಲ್ಲರೂ ಸೇರಿ ಕುಳಿತುಕೊಂಡು ಈ ವಿಷಯಗಳನ್ನೆಲ್ಲಾ ಆಮೂಲಾಗ್ರವಾಗಿ ಸಮಾಲೋಚನೆ ಮಾಡಿ ನೋಡೋಣ, ಪರಿಶೀಲನಮಾಡೋಣ, ವಿಧಿಯಿಲ್ಲದೆ, ಅನಿವಾರ್ಯವಾಗಿದ್ದರೆ ಈ ತೆರಿಗೆಯನ್ನು ಹಾಕುವ ಯೋಚನೆ ಮಾಡೋಣ, ಇಲ್ಲದಿದ್ದರೆ ಬೇಡ; ಸ್ನೇಹಹಸ್ತವನ್ನು ನೀಡಿ, ನಾವೆಲ್ಲರೂ ಅನುವಾಗುತ್ತೇವೆ, ಎಂದರೆ ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಎಲ್ಲಿಯೂ ಕೂಡ ಕಂಡುಕೇಳದೇಯಿರುವ ಮಾರ್ಗ, ಇಂಥ ಒಂದು ಹೊಸ ಸಂಪ್ರದಾಯ, ಹೊಸ ಮಾರ್ಗವನ್ನು ಹಾಕೋಣ ಎಂದರೆ ಇದಕ್ಕೆ ನಕಾರ ಬಂದಿದೆ! ಇಂಥ ಸರ್ಕಾರಕ್ಕೆ ಹೇಗೆ ಸ್ನೇಹಹಸ್ತವನ್ನು ನೀಡುವುದೋ ನನಗೆ ಅರ್ಥವಾಗುವುದಿಲ್ಲ. ಸ್ನೇಹ ಹಸ್ತವನ್ನು ಕೊಡೋಣ. ಇಂಗ್ಲೀಷಿನಲ್ಲಿ ಹೇಳುವ ಹಾಗೆ King's Government must be carried on ಎನ್ನುವ ಮೂಲ ತತ್ವವನ್ನು ಎಲ್ಲರೂ ಒಪ್ಪಬೇಕು; ಸರ್ಕಾರಪಕ್ಷ, ಪ್ರತಿಪಕ್ಷ ಎಲ್ಲರೂ ಒಪ್ಪಬೇಕು. ಆದರೆ ಈ ಸ್ನೇಹಹಸ್ತ ಬರಬೇಕಾದರೆ ವಿಶ್ವಾಸಪೂರ್ವಕವಾಗಿ ಸೌಜನ್ಯದಿಂದ ಕೂಡಿದ ವಾತಾವರಣವನ್ನು ಕಲ್ಪಿಸುವುದಕ್ಕೆ ಸರ್ಕಾರ ಒಪ್ಪಬೇಕು. ಇದನ್ನು ಸ್ವಲ್ಪ ಆಲೋಚನೆಮಾಡಿ ಎಂದು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಕಳೆದ ಅಧಿವೇಶನದಿಂದ ಈವರೆಗೆ ಅನೇಕ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅನೇಕ ರೀತಿಯಲ್ಲಿ ಖರ್ಚನ್ನು ಖೋತಾಮಾಡುವುದಕ್ಕೆ, ಮಿತವ್ಯಯಮಾಡುವುದಕ್ಕೆ, ವರಮಾನವನ್ನು ಹೆಚ್ಚುಮಾಡುವುದಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ಒಂಭತ್ತು ತಿಂಗಳು ಅಥವಾ ಒಂದು ವರ್ಷವಾಗಿದೆ. ಅದರಲ್ಲಿ ಯಾವುದೂ ಕೂಡ ಕಾರ್ಯರೂಪಕ್ಕೆ ಬಂದಿಲ್ಲ. ಸರ್ಕಾರದ ಕಷ್ಟವನ್ನೂ ನಾವು ಅರಿತುಕೊಂಡಿಲ್ಲವೆಂದು ಅವರು ಭಾವಿಸಬೇಕಾಗಿಲ್ಲ. ಅದನ್ನೂ ಆಲೋಚನೆಮಾಡೋಣ ಈ ಹೊತ್ತು ಒಂದು ಬಿಲ್ಲನ್ನು ತಂದಿದ್ದಾರೆ, ಇದರಿಂದ ನಾಲ್ಕೈದು ಲಕ್ಷ ರೂಪಾಯಿ ಕೇಳುತ್ತಿದಾರೆ; ಇನ್ನೊಂದರಲ್ಲಿ ಐದು ಲಕ್ಷ ಕೇಳುತ್ತಾರೆ, ನಾನು ಈ ಒಂದು ಉದ್ದೇಶದಿಂದ ಹೇಳುತ್ತಿಲ್ಲ. ಈ ಹೊತ್ತು ಈ ಮಹಾ ಸಭೆಯ ಮುಂದೆ ಇಟ್ಟಿರುವ ಬಿಲ್ಲಿನ ಸಾಧಕಬಾಧಕಗಳನ್ನು ನೋಡಿ, ಇದು ಸರಿಯೆ ಇಲ್ಲವೆ ಎಂಬುದನ್ನು ನಾನು ವಿಮರ್ಶೆಮಾಡುತ್ತಿಲ್ಲ. ಒಂದು ಮೂಲಭೂತ ಸಿದ್ಧಾಂತವನ್ನು ಸ್ಥಾಪನೆಮಾಡಬೇಕೆಂಬುದು ನನ್ನ ಆಶೆ. ಈಗಿರುವ ಹಣಕಾಸಿನ ಪರಿಸ್ಥಿತಿಯಲ್ಲಿ ಪಕ್ಷ ಪ್ರತಿಪಕ್ಷ ಭಾವನೆಯಿಲ್ಲದೇಯಿರುವ ರೀತಿ ಮೈಸೂರು ದೇಶದಲ್ಲಿ ಒಂದು ಸತ್ಸಂಪ್ರದಾಯವನ್ನು ಹಾಕುವುದಕ್ಕೆ ಸರ್ಕಾರಿ ಪಕ್ಷ ಮತ್ತು ಸರ್ಕಾರ ಸಿದ್ಧವಾಗಿದೆಯೆ? ಒಂದು ಹೊಸ ಸಂಪ್ರದಾಯವನ್ನು ಸ್ಥಾಪನೆಮಾಡಿ ದೇಶದಲ್ಲಿ ಕೀರ್ತಿಯನ್ನು ಸಂಪಾದನೆಮಾಡಿಕೊಳ್ಳುವು

(ಶ್ರೀ ಕೆ. ಪಟ್ಟಾಭಿರಾಮನ್)

ದಕ್ಕೆ ಸಿದ್ಧವಾಗಿದ್ದಾರೆಯೆ ಎನ್ನುವ ದೃಷ್ಟಿಯಿಂದ ವಿರೋಧಿಸುತ್ತಿದ್ದೇನೆ. ಈಗ ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಈ ತೆರಿಗೆಯ ವಿಚಾರದಲ್ಲಿ ಮೂಲಭೂತವಾದ ವಿಚಾರಗಳ ಬಗ್ಗೆ ಬಡ್ಜೆಟ್ ಮೇಲೆ ಮಾತನಾಡುವಾಗ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ನನಗೆ ಪೂರ್ಣವಾದ ಒಂದು ನಂಬಿಕೆ, ತೆರಿಗೆ ಹಾಕುವ ನೀತಿಯಲ್ಲಿದೆ. ನಮ್ಮ ಜನತೆಗೆ ಹೆಚ್ಚು ತೆರಿಗೆ ಹೊರುವುದಕ್ಕೆ ಶಕ್ತಿಯಿಲ್ಲವೆಂದು ಅಭಿಪ್ರಾಯ ಪಡುವವರಲ್ಲಿ ನಾನೂ ಒಬ್ಬ. ಇದು ಸರಿಯಲ್ಲವೆಂದು ನನ್ನ ಮನಸ್ಸನ್ನೊಪ್ಪಿಸಿ ಪರಿವರ್ತನೆಮಾಡಿ, ಬೇಕಾದರೆ, ಆಗ ಒಂದು ಹೆಜ್ಜೆ ಮುಂದೆ ಹೋಗಲು ಸಿದ್ಧವಾಗುತ್ತೇನೆ. ಪ್ರತಿಪಕ್ಷದ ಪರವಾಗಿ ಮಾತನಾಡುವ ಅಧಿಕಾರ ನನಗಿಲ್ಲ. ಈ ಹೊತ್ತು ಈ ತೆರಿಗೆ ಹಾಕಿದರೆ ದೇಶದಲ್ಲಿ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡೋಣ. ಒಂಭತ್ತು ತಿಂಗಳ ಕಾಲ ಸರ್ಕಾರ ನಡೆಸಿದ್ದೀರಿ ; ಅನೇಕ ಸಲಹೆಗಳು ಬಂದಿವೆ ; ಅವುಗಳನ್ನು ಕಾರ್ಯಗತಮಾಡಲು ಕೈಹಾಕಿಲ್ಲ ; ಮಿತವ್ಯಯ ಮಾಡಿಲ್ಲ. ಮುಂದಿನ ಮಸೂದೆಯ ವಿಷಯ ಮಾತನಾಡುವುದಕ್ಕೆ ನನಗೆ ಅವಕಾಶವಿಲ್ಲ. ಅದರಿಂದ ಈಗಲೇ ಪ್ರಸ್ತಾಪಮಾಡಬೇಕೆಂದಿದ್ದೇನೆ. ಈ ತೆರಿಗೆ ಹಾಕುವಾಗ ಎಲ್ಲಿಂದ ಹಣ ಬರಬೇಕು, ಇದನ್ನು ಹೊರುವವರು ಯಾರು ? ರೈತನ ಪರಿಸ್ಥಿತಿ, ದೇಶದ ಪರಿಸ್ಥಿತಿ, ಕೃಷಿಯ ಪರಿಸ್ಥಿತಿ ಹೀಗಿರುವಾಗ 9 ಕಾಸನ್ನು ಒಂದಾಣೆ ಮಾಡುವುದು ಹೇಗೆ ? ಇದನ್ನೆಲ್ಲಾ ಯೋಚನೆ ಮಾಡಬೇಕು. ನಾನು ಈಗ ಒಂದು ಸಲಹೆಯನ್ನು ಕೊಡುವುದಾದರೆ, ಈಗಲೂ ಕಾಲ ಮೀರಿಲ್ಲ, ಈಗ ಮಾರ್ಚಿ ತಿಂಗಳಲ್ಲಿದ್ದೇವೆ. ಒಂದು ತಿಂಗಳು ಇದನ್ನು ನಿಧಾನಮಾಡಿ ಒಂದು ಸಮಿತಿಯನ್ನು ಮಾಡಿ, ಹಣಕಾಸಿನ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ನೋಡುವುದಕ್ಕೆ ಅವಕಾಶ ಕೊಟ್ಟರೆ ನಿಮಗೂ ಒಳ್ಳೆಯದು, ನಮಗೂ ತೃಪ್ತಿ. ನಾವೂ ಕೂಡ ದೇಶದ ಮುಂದೆ ಹೋಗಿ ನಮ್ಮ ಕರ್ತವ್ಯವನ್ನು ನಾವು ಸರಿಯಾಗಿ ನಿರ್ವಂಚನೆಯಿಂದ ನಿರ್ವಹಿಸಿದ್ದೇವೆ, ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳಾದ ನಾವು ಸ್ನೇಹಹಸ್ತವನ್ನು ನೀಡಿ, ಎಲ್ಲವನ್ನೂ ಕೂಲಂಕಷವಾಗಿ ಪರೀಕ್ಷಿಸಿ ನೋಡಿ, 'ಅನಿವಾರ್ಯ ಪರಿಸ್ಥಿತಿ ಬಂತು ನಾವು ಬೆಂಬಲ ಕೊಟ್ಟಿದ್ದೇವೆ' ಎಂದು ನಮ್ಮ ಜನರಿಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಸ್ನೇಹಹಸ್ತ ಒರಬೇಕಾದರೆ, ನಿಮ್ಮ ಸ್ನೇಹ ಹಸ್ತವೂ ಬರಬೇಕು. ತೆರಿಗೆಯ ವಿಚಾರದಲ್ಲಿ ಹೇಳುವುದಾದರೆ, ಒಂದು ಎಚ್ಚರಿಕೆಯ ಮಾತು ಹೇಳಬೇಕಾಗಿದೆ. ಇದನ್ನು ನಾನು ಅಗೌರವದಿಂದ ಹೇಳುವುದಿಲ್ಲ, ವಿಶ್ವಾಸಪೂರ್ವಕವಾಗಿ, ಒಂದು ತತ್ವದ ಮೇಲೆ ಹೇಳುತ್ತೇನೆ. ಇದೇನೂ ನಿಮ್ಮ ನಿರೀಕ್ಷೆ ಖಂಡಿತವಾಗಿ ಈಡೇರುವುದಿಲ್ಲ. ಭವಿಷ್ಯದ ನುಡಿಯೆಂದಲ್ಲ. ಭವಿಷ್ಯವನ್ನು ನುಡಿಯುವ ಶಕ್ತಿ ನನಗಿಲ್ಲ. ಈ ಎಲ್ಲ ತೆರಿಗೆಗಳಿಂದ 40—50 ಲಕ್ಷ ರೂಪಾಯಿಗಳು ಬರುತ್ತವೆಯೆ? ಶ್ರೀ ದೇವರಾಜ ಅರಸಿನವರು ಆಗಲೇ ಒಂದು ರೀತಿಯಲ್ಲಿ ನನಗೆ ಜವಾಬು ಕೊಟ್ಟಿದ್ದಾರೆ. ಕೇವಲ ನಾಲ್ಕೈದು ಲಕ್ಷ ರೂಪಾಯಿ ಕೇಳುತ್ತಾರೆ ಎಂದು ಹೇಳಿದ್ದಾರೆ. ಸಂಕೇತದ ರೂಪವಾಗಿ ಮಾತನಾಡುವುದಾದರೆ, 14—15 ಕೋಟಿ ರೂಪಾಯಿ ರೆವೆನ್ಯೂ ಅಕೌಂಟ್ಸ್ ಇದೆ. 38 ಕೋಟಿ ರೂಪಾಯಿ ಜಮಾ ಖರ್ಚು ನಿಮ್ಮದು. ಹೀಗಿರುವಾಗ ಕೇವಲ ನಾಲ್ಕೈದು ಲಕ್ಷ ರೂಪಾಯಿ ಬೇಕೆಂದು ಒಂದು ತೆರಿಗೆಯನ್ನು ಹಾಕುವುದಕ್ಕೆ ಹೊರಟರೆ ದೇಶದಲ್ಲಿ ಹೇಗೆ ತೃಪ್ತಿ ಬರುತ್ತದೆ ; ಜನರನ್ನು ಹೇಗೆ ಇದಕ್ಕೆ ಒಪ್ಪಿಸುವುದು ? ಇನ್ನೂ ಮಾತನಾಡಬೇಕಾದ ಅನೇಕ ಸದಸ್ಯರಿದ್ದಾರೆ, ಇನ್ನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಈಗ ನಾನು ಮಾತನಾಡುತ್ತಿರುವುದು ಭದ್ರವಾದ token opposition, ಕೇವಲ ಸಂಕೇತವಾದ ವಿರೋಧವೆಂದು ಭಾವಿಸಬೇಕು. ಇನ್ನೂ ಕಾಲಮೀರಿಲ್ಲ. ಇದನ್ನು ಮೇ ತಿಂಗಳವರೆಗೆ ನಿಲ್ಲಿಸಿ. ಬಹಳ ಹೆಚ್ಚು ಕಾಲವಿಲ್ಲ, 30 ದಿವಸ 720 ಘಂಟೆಗಳ ಕಾಲ ಮಾತ್ರ. ಆಮೂಲಾಗ್ರವಾಗಿ ನೋಡೋಣ. ತೆರಿಗೆಯ ಪರಿಸ್ಥಿತಿ ಹೇಗಿದೆ, ಮಿತವ್ಯಯ ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯವೆಂಬುದನ್ನೆಲ್ಲಾ ನೋಡೋಣ. ಕಂದಾಯ ಹಾಕುವುದು ಮಾತ್ರ ಸಾಧ್ಯ, ಇನ್ನೇನೂ ಮಾರ್ಗವಿಲ್ಲವೆಂದು ನಮ್ಮನ್ನು ಒಪ್ಪಿಸಿದರೆ, ಆಗ ನಾವು ನಿರಾಕರಿಸಬಾರದು. ಉಭಯತ್ರರೂ ಸೇರಿ ಒಂದು ಸತ್ಸಂಪ್ರದಾಯವನ್ನು ಹಾಕೋಣ. ಹಣಕಾಸಿನ ವಿಚಾರದಲ್ಲಿ ಪಕ್ಷ ಪ್ರತಿಪಕ್ಷ ಎನ್ನುವುದು ಹೋದರೆ ರಾಜಕೀಯದಲ್ಲಿ ಹೊಸ ಹೆಜ್ಜೆಯನ್ನಿಡುವುದಕ್ಕೆ ಸಾಧ್ಯವಾಗುತ್ತದೆ. ಒಂದು ಮಂಗಳದಾಯಕವಾದ ಭಾವನೆ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಬಿಟ್ಟು ಸುಮ್ಮನೆ ಕಂದಾಯ ಹೊರಿಸುವುದೇ ನ್ಯಾಯ ಎಂದು ನೀವು ಹೇಳುವುದಾದರೆ, ಖಂಡಿತವಾಗಿ ದೇಶದ ಪರಿಸ್ಥಿತಿಯನ್ನು ನೋಡುವುದಾದರೆ, ಇದೊಂದನ್ನೇ ಅಲ್ಲ ಇನ್ನೂ ಬೇರೆ ಹಣಕಾಸಿನ ಮಸೂದೆಗಳನ್ನು ಕೂಡ ವಿರೋಧಿಸಬೇಕಾಗುತ್ತದೆ. ಇದು ಸರಿಯೇ ತಪ್ಪೇ ಎಂಬುದು ಮುಖ್ಯವಲ್ಲ. ನನ್ನ ಮನಸ್ಸಿನಲ್ಲಿರುವುದು ಸರ್ಕಾರ ಪಕ್ಷ ಪ್ರತಿಪಕ್ಷ ಭಾವನೆ ಹೋಗತಕ್ಕ ವಾತಾವರಣವನ್ನು ಕಲ್ಪಿಸಿದರೆ, ಸ್ನೇಹಹಸ್ತವನ್ನು ಕೇಳಿದರೆ, ಉಭಯತ್ರರೂ ಸೇರಿ ಸಂಪ್ರದಾಯವನ್ನು ಹಾಕಿ ಸಿದ್ಧವಾದರೆ ಇದು ಸಾಧ್ಯ. ಆ ರೀತಿ ಮಾಡುವುದಾದರೆ, ಅದಕ್ಕೆ ಸಿದ್ಧವಾಗಿದ್ದರೆ, ಇನ್ನೂ ಮೇ ತಿಂಗಳವರೆಗೆ ಕಾಯೋಣ. ನಾನು ಸ್ವಲ್ಪ ಸ್ವಾರ್ಥದೃಷ್ಟಿಯಿಂದ ಕೂಡ ಹೇಳುತ್ತೇನೆ. ಈ ವಿಷಯದಲ್ಲಿ ಶ್ರೀ ಇಮಾಂರವರಿಗೂ ನನಗೂ ಭಿನ್ನಾಭಿಪ್ರಾಯ ಬರಬಹುದು. ಆದರೂ ಸ್ಪಷ್ಟವಾಗಿ ಹೇಳುತ್ತೇನೆ, ನಿಮ್ಮ ಕೆಲಸಕಾರ್ಯಗಳು ಆಗಬೇಕಾದರೆ, ವಿಶಾಲವಾದ ದೃಷ್ಟಿಯಿಂದ ಯೋಚನೆ ಮಾಡಬೇಕು, ಯೋಜನೆ ಮಾಡಬೇಕು. ಹಣ ಹೆಚ್ಚು ಹೆಚ್ಚಾಗಿ ಬೇಕು. ಇದಕ್ಕೆಲ್ಲಾ ತಳಹದಿ ಹಣ. ಅದು ಬೇಕೇ ಬೇಕು. ವಿದ್ಯಾಸುಧಾರಣೆಯಾಗಬೇಕು. ನನ್ನ ಕೈಲಾದಮಟ್ಟಿಗೆ ಸೇವೆಯನ್ನು ಸಲ್ಲಿಸುವುದಕ್ಕೆ ಸದಾ ಸಿದ್ಧನಿದ್ದೇನೆ. ವಿಶಿಷ್ಟರೀತಿಯ ಪೂರ್ಣವಾದ ಯೋಜನೆಯನ್ನು ಹಾಕಿಕೊಳ್ಳೋಣ. ನಾಲ್ಕೈದು ವರ್ಷಗಳಿಂದ, ತೆರಿಗೆಗಳು ಹೆಚ್ಚಾಗುತ್ತಿವೆಯೆಂದರೆ ಕೋಪಮಾಡಿಕೊಳ್ಳಬಾರದು. ಸರ್ಕಾರದಲ್ಲಿರುವವರಿಗೆ ಬುದ್ಧಿ, ಜ್ಞಾನ, ಜಾಸ್ತಿ ; ಒಪ್ಪಿಕೊಳ್ಳುತ್ತೇನೆ. ಸುಲಭವಾಗಿ ಏನೋ ಒಂದು ಕ್ಷಣಮಾತ್ರದಲ್ಲಿ ದೈವ ಕಟಾಕ್ಷವಿದ್ದರೆ ಪ್ರಾಯಶಃ ಈ ರೀತಿ ತೆರಿಗೆಯಿಲ್ಲದೆ ಯಾರು ಹೆಚ್ಚು ಹೊರಬಹುದೋ ಅವರಿಂದ ಹೆಚ್ಚು ಹಣವನ್ನು ಬರಮಾಡಿಕೊಳ್ಳುವುದಕ್ಕೆ ಸಾಧ್ಯ. ನಾವೂ ಕೂಡ ಸಹಕರಿಸುತ್ತೇವೆ. ಹೀಗೆ ಸ್ನೇಹಹಸ್ತವನ್ನು ನೀಡುವಾಗ ಏಕೆ ತಿರಸ್ಕಾರ ಮಾಡುತ್ತೀರಿ ? ನನಗೆ ಆಶ್ಚರ್ಯವಾಗುತ್ತದೆ ! ಇನ್ನೆಲ್ಲಿಯೂ ಈ ರೀತಿ ಸ್ನೇಹಹಸ್ತವನ್ನು ಕೊಟ್ಟಿಲ್ಲ ! ಇಷ್ಟಾದರೂ ನೀವು ನಿರಾಕರಿಸಿದರೆ, ಆ ಜವಾಬ್ದಾರಿ ನಿಮ್ಮದೇ ಆಗಿರುತ್ತದೆಂದು ಸರ್ಕಾರದವರಿಗೆ ಸ್ಪಷ್ಟವಾಗಿ ಹೇಳಬೇಕಾಗಿದೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಈಗಾಗಲೇ ನಮ್ಮ ಮಿತ್ರರು ಹೇಳಿರುವ ಹಾಗೆ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ವಿಮರ್ಶೆ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಿಸಿ, ಆ ಸಮಿತಿ ವಿಮರ್ಶೆಮಾಡಿದ ಮೇಲೆ ಅವರು ಒಪ್ಪಿ, ಇದು ಅನಿವಾರ್ಯವೆಂದು ಹೇಳುವುದಾದರೆ, ಇದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಈ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಒಪ್ಪಿಗೆಯಿದೆ.

ಎರಡನೆಯದಾಗಿ ಪೆಟ್ರೋಲಿನ ಮೇಲೆ ತೆರಿಗೆಯನ್ನು ಹೆಚ್ಚು ಮಾಡುವುದು ಕೇವಲ ಹಣಗಾರರಿಂದ ವಸೂಲಾಗುವ ಹಾಗಿದೆ, ಇದು ಬಡವರಿಂದ ವಸೂಲಾಗುವುದಿಲ್ಲ, ಎಂದು ಶ್ರೀಗಳಾದ ಅನಂತರಾಮಯ್ಯರವರೂ ದೇವರಾಜ ಅರಸಿನವರೂ ಹೇಳಿದರು. ಇದು ಸರಿಯಾದ ಅಭಿಪ್ರಾಯವಲ್ಲ. ತಾವು ಈ ರೀತಿ ಮಾಡಿರತಕ್ಕದ್ದು ಸರಿಯಲ್ಲ. ಈಗಾಗಲೇ ಸಂಸ್ಥಾನದಲ್ಲಿ ಲಾರಿಗಳ ಸಂಖ್ಯೆ ವಿಪರೀತ ಹೆಚ್ಚಿದೆ. ಇದರ ಜೊತೆಗೆ ಕಾರುಗಳ ಸಂಖ್ಯೆ ಈಗ ಸುಮಾರು 7,000 ಇರಬಹುದು. ಬಸ್ ಮಾಲೀಕರುಗಳಿಗೆ ಬಸ್ಸಿನ spare parts ಮತ್ತು ಇತರ ಎಲ್ಲಾ ಖರ್ಚುಗಳೂ ಒಂದಕ್ಕೆ ನಾಲ್ಕರಷ್ಟು ಹೆಚ್ಚಿರುತ್ತವೆ. ಅನೇಕ ಬಸ್ ಮಾಲೀಕರಿಗೂ, ಲಾರಿ ಮಾಲೀಕರಿಗೂ ಪೆಟ್ರೋಲ್ ಖರ್ಚು ಸಹ ಹುಟ್ಟುತ್ತಿಲ್ಲ. ಆದರೆ ನಾನು ಬಸ್ ಮಾಲೀಕನೂ ಅಲ್ಲ, ಕಾರ್ ಮಾಲೀಕನೂ ಅಲ್ಲ. ಇದಕ್ಕಿಂತ ಹೆಚ್ಚಿಗೆ ಖರ್ಚುವೆಚ್ಚಗಳೇನು ಬರುತ್ತವೆಂಬ ಬಗ್ಗೆ ನನಗೆ ಅಷ್ಟು ಅನುಭವವಿಲ್ಲ. ಇಲ್ಲಿ ಇನ್ನೂ ಅನೇಕ ಬಸ್ ಮಾಲೀಕರಿರುತ್ತಾರೆ. ಬಹುಶಃ ಅವರು ಈ ಬಗ್ಗೆ ತಮಗೆ ಸಾಕಷ್ಟು ಅಂಕಿಅಂಶಗಳನ್ನೊದಗಿಸಬಹುದು.

ನಮ್ಮ ಟ್ರಾನ್ಸ್‌ಪೋರ್ಟ್ ಶಾಖೆಯ ಮಾನ್ಯ ಸಚಿವರು ಒಂದು ಮೈಲಿಗೆ ಎಷ್ಟು ಪೆಟ್ರೋಲ್ ಮತ್ತು ಇತರ ಖರ್ಚುಗಳು ಬೀಳುತ್ತವೆ, ಒಂದು ಮೈಲಿಗೆ ವರಮಾನವೆಷ್ಟು ಬರುತ್ತದೆ ಎಂಬ ಬಗ್ಗೆ ಅವರು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರವನ್ನೇ ತೆಗೆದುಕೊಂಡರೂ, ಒಂದು ಮೈಲಿಗೆ 0-14-0 ಉತ್ಪತ್ತಿಯೂ, 0-13-0 ಖರ್ಚೂ ಆಗಿ ಒಂದು ಆಣೆ ವರಮಾನ ಬರುತ್ತದೆ. ಯೆಂದು ಲೆಕ್ಕಾಚಾರ ಮಾಡಬಹುದಾಗಿದೆ. ಅಂಥ ಒಂದಾಣೆ ವರಮಾನದಿಂದ ಯಾರೂ ಅಭಿವೃದ್ಧಿಗೆ ಬರಲು ಸಾಧ್ಯವಿಲ್ಲ. ಈಗ ನಾವು ಈ ಮಸೂದೆಗೆ ನಮ್ಮ ಅನುಮತಿ ಕೊಟ್ಟರೆ ಮತ್ತೆ ಪ್ರತಿ ಮೈಲಿಗೂ 11 ಕಾಸುಗಳ ತೆರಿಗೆ ಹೆಚ್ಚುತ್ತದೆ.
ಅಂದರೆ ಈಗ ಒಟ್ಟು ಬಸ್ ಮಾಲೀಕನಿಗೆ ಬರುತ್ತಿರುವಂಥ 12 ಕಾಸುಗಳ ವರಮಾನದಲ್ಲಿ 11 ಕಾಸುಗಳ ತೆರಿಗೆ ಹೋಗಿಬಿಟ್ಟರೆ ಆತನಿಗೆ ಇನ್ನು ಉಳಿಯತಕ್ಕದ್ದು ಒಂದು ಕಾಸು ಮಾತ್ರ. ಹೀಗೆ ಆತನಿಗೆ ಉಳಿಯುವ ಒಂದು ಕಾಸಿಗೆ ತಾವು ಮಾಡಿರತಕ್ಕವಾದ ನನಗಂತೂ ಬಹಳ ಆಶ್ಚರ್ಯವನ್ನುಂಟುಮಾಡಿದೆ. ಇಂಥ ಉದ್ಯಮಕ್ಕೆ ಕೈಹಾಕತಕ್ಕವರ ಹೊಲ ಮನೆಗಳು ಒಂದೂ ಉಳಿಯುವುದಿಲ್ಲ. ಹಾಗೂ ಒಂದು ರೀತಿಯಲ್ಲಿ ನೋಡುವುದಾದರೆ ಈತನಿಗೆ ಈ ಒಂದು ಕಾಸು ವರಮಾನ ಬರಲು ಆತನಿಗೆ ಭರವಸೆಯಾದರೂ ಎಲ್ಲಿದೆ? ಪ್ರತಿಯೊಂದು ಲೈನಿನಲ್ಲೂ ಕಾಂಪಿಟಿಷನ್ ಜಾಸ್ತಿಯಾಗುತ್ತಿದೆ. ಹೀಗೆ ಒಂದು ಕಾಸಿನ ಆಸೆಗಾಗಿ ಮಾಡುವ ಉದ್ಯಮದಿಂದ ಯಾರೂ ಜೀವನಮಾಡುವುದಕ್ಕಾಗುವುದಿಲ್ಲ. ಹೀಗೆ ಸರ್ಕಾರದವರು ಬಸ್ಸಿನಮೇಲೆ ತೆರಿಗೆಗಳನ್ನು ಏರಿಸಿದರೆ ಯಾರೂ ಅವರ ನಷ್ಟದಿಂದ ಪಾವತಿಮಾಡಿ ಲುಕ್ಸಾನಿನ ಮೇಲೆ ವ್ಯವಹಾರ ಮಾಡುವುದಿಲ್ಲ. ಆಗ ತಾನೇ ತಾನಾಗಿ ಈ ದುಬಾರಿ ಖರ್ಚುವೆಚ್ಚಗಳೆಲ್ಲಾ ಪ್ರಯಾಣಿಕರ ತಲೆಯ ಮೇಲೆ ಬಿದ್ದೇಬೀಳಬೇಕಾಗುತ್ತದೆ. ಬಸ್ಸಿನ ಪ್ರಯಾಣದಲ್ಲಿ ಹಳ್ಳಿಯಿಂದ ಹಳ್ಳಿಗೆ ಓಡಾಡುವ ಜನರ ಪೈಕಿ ಬಡರೈತರು ಇವರು, ಇವರು ಶ್ರೀಮಂತರು ಎಂಬ ವ್ಯತ್ಯಾಸವನ್ನು ಮಾಡುವುದಕ್ಕಾಗುವುದಿಲ್ಲ. ಉದ್ಯಮದಾರನಾದವನು ಆತನ ಮೇಲೆ ಬೀಳತಕ್ಕ ಪ್ರತಿಯೊಂದು ಕಾಸನ್ನೂ ಪ್ರಯಾಣಿಕರ ತಲೆಯಮೇಲೆ ಹಾಕಿಬಿಡುತ್ತಾನೆ. ಯಾವಾಗ ಬಸ್ ಮಾಲೀಕರು ಹೀಗೆ ಬಸ್ಸಿನಲ್ಲಿ ತಿರುಗತಕ್ಕ ಪ್ರಯಾಣಿಕರಿಗೆ ಪ್ರಯಾಣದ ದರಗಳನ್ನು ಏರಿಸುತ್ತಾರೋ ಆಗ ಅವರು ಬಸ್ಸಿನಲ್ಲಿ ಪ್ರಯಾಣಮಾಡುವುದನ್ನು ದಿನದಿನಕ್ಕೂ ಕಡಮೆ ಮಾಡುತ್ತಾ ರೈಲ್ವೆ ವರಮಾನ ಹೆಚ್ಚಾಗಲು ತಾವಾಗಿಯೇ ಒಂದು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದರೆ ಈಗ ಆ ರೈಲ್ವೆ ವರಮಾನ ಕೂಡ ನಿಮಗೆ ಬರುತ್ತಿಲ್ಲ. ರೋಡ್ ವರಮಾನ ಕಡಮೆಯಾಗುತ್ತದೆ. ನಮಗೆ ನ್ಯಾಯವಾಗಿ ಬರಬೇಕಾದ ವರಮಾನ ಸಹ ಇದರಿಂದ ತಪ್ಪಿಹೋಗುತ್ತದೆ. ಈ ಒಂದು ತತ್ವದೃಷ್ಟಿಯಿಂದ ನಾನು ಇದನ್ನು ವಿರೋಧಿಸುತ್ತೇನೆ. ತಾವು ಈ ತೆರಿಗೆಯನ್ನು ಹಾಕಲು ಹೇಳತಕ್ಕ ಕಾರಣಗಳಾದರೂ ಏನು! ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಹದಗೆಟ್ಟುಹೋಗಿ ಈ ವರ್ಷದ ಬಡ್ಜೆಟ್ ಖೋತಾ ಆಗಿರುವುದರಿಂದ ಆ ಖೋತಾ ಬೀಳತಕ್ಕ ಮೊಬಲಗನ್ನು ಭರ್ತಿಮಾಡಿಕೊಳ್ಳಬೇಕೆಂಬ ಅಭಿಪ್ರಾಯದಿಂದ ಈ ತೆರಿಗೆಯನ್ನು ಹಾಕಬೇಕೆಂದು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದೀರಿ. ಹಾಗೆ ಖೋತಾ ಮೊಬಲಗನ್ನು ಭರ್ತಿಮಾಡಿಕೊಳ್ಳಲು ಇಂಥ ಸಣ್ಣ ಪುಟ್ಟ ಬಾಬುಗಳ ಮೇಲೆಲ್ಲಾ ಕಣ್ಣುಹಾಕಿ, ಐದು ಲಕ್ಷಕ್ಕಿಂತ ಕಡಮೆ ಬರುವ ಬಾಬುಗಳಿಗೆ ಕೈಹಾಕಿದ್ದೀರಿ. ಆದರೆ ನೀವು ಸುಮ್ಮನೆ ಖೋತಾ ಆಯಿತೆಂದು ಅಷ್ಟನ್ನು ಮಾತ್ರ ಹೇಳಿದ್ದೀರೇ ಹೊರತು, ಹಾಗೆ ಹಣ ಖೋತಾ ಬೀಳಲು ಕಾರಣವೇನು, ಆ ಹಣ ಏತಕ್ಕಾಗಿ ಖರ್ಚಾಗಿದೆ ಎಂಬುದನ್ನಾದರೂ ನಾವು ಆಲೋಚನೆ ಮಾಡಿ ನೋಡಿ, ಅದು ಸರಿ ಅಥವಾ ಅಲ್ಲ ಎಂಬುದನ್ನು ತಿಳಿಯಬೇಡವೇ ?

ಇನ್ನು ಈ ಪೆಟ್ರೋಲ್ ಟ್ಯಾಕ್ಸ್ ಜಾರಿಗೆ ಬಂದಿತು ಎಂದರೆ—ಈ ದಿವಸ ರೈತನು ತನ್ನ ಅನೇಕ ಕೆಲಸಗಳಿಗೆ ಲಾರಿಗಳನ್ನು ಉಪಯೋಗಮಾಡುತ್ತಿದ್ದಾನೆ—ಆಹಾರ ಧಾನ್ಯಗಳನ್ನು ಬೆಳೆಯಲು ಮತ್ತು ಇತರ ಬೆಳೆಗಳನ್ನು ಬೆಳೆಯಲು ಬೇಕಾದ ಅನೇಕ ಸಾಮಾನುಗಳನ್ನು ಸಾಗಿಸಲು ಉಪಯೋಗಿಸುತ್ತಿರುವುದರಿಂದ ಈ ಪೆಟ್ರೋಲ್ ತೆರಿಗೆ ಆತನ ಮೇಲೂ ಸಹ ಬಿದ್ದೇಬೀಳುತ್ತದೆ. ಇದರಿಂದ ಆತನು ಈ ಆಧುನಿಕ ಸಹಾಯಗಳನ್ನೆಲ್ಲಾ ಕೈಬಿಟ್ಟು ತನ್ನ ಮಾಮೂಲು ಪೂರ್ವದ ರೀತಿಯಲ್ಲಿ ಎತ್ತಿನ ಗಾಡಿಯಲ್ಲಿ ವ್ಯವಹಾರಮಾಡಲು ಪ್ರಾರಂಭವಾಗುತ್ತದೆ. ನಮ್ಮ ತಾತಮುತ್ತಾತಂದಿರ ಕಾಲದಲ್ಲಿದ್ದಂತೆ ನಾವು ನಡೆದುಕೊಂಡೋ ಅಥವಾ ಗಾಡಿಗಳಲ್ಲೋ ಹೋಗಬೇಕಾಗುತ್ತದೆ. ಹೀಗೆ ಪ್ರತಿಯೊಂದು ಹೆಜ್ಜೆಹೆಜ್ಜೆಗೂ ರೈತನಿಗೆ ತೆರಿಗೆ ಹಾಕುತ್ತಾಹೋದರೆ ಆತನು ಹೇಗೆ ಬಾಳುವುದು ! ತಾವು ಪೆಟ್ರೋಲ್ ತೆರಿಗೆಯನ್ನು ಹಾಕಿದರೆ ಕಡೆಗೆ ಇದನ್ನು ಕೊಡತಕ್ಕವನು ಯಾರು ? ಗ್ರಾಮಾಂತರಗಳಲ್ಲಿರತಕ್ಕ ಬಡಜನರು ಹೊರತು ಮತ್ತೆ ಬೇರೆ ಯಾರೂ ಅಲ್ಲ. ತಾವು ಒಂದು ಭಾವನೆಯನ್ನಿಟ್ಟುಕೊಂಡು ಕೇಳಬಹುದು. "ಹಾಗೆ ಈ ಬಸ್ಸುಗಳ ಉದ್ಯಮದಲ್ಲಿ ಆತನಿಗೆ ಹೆಚ್ಚಿನ ಲಾಭ ಬಾರದೆ ಇದ್ದ ಪಕ್ಷಕ್ಕೆ, ಯಾವುದಾದರೊಂದು ಬಸ್ ಲೈನನ್ನು ಅಡ್ವರ್‌ಟೈಜ್ ಮಾಡಿದಾಗ ಅಥವಾ ಹತ್ತಾರು ಲೈನುಗಳನ್ನು ಅಡ್ವರ್‌ಟೈಜ್ ಮಾಡಿದಾಗ ನೂರಾರು ಅರ್ಜಿಗಳು ಏಕೆ ಬರುತ್ತವೆ" ಎಂದು. ಹಾಗೆ ಆಲೋಚನೆ ಮಾಡುವುದಕ್ಕೆ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ತಪ್ಪು ಭಾವನೆಗಳೇ ಕಾರಣ. ಪರ್ಮಿಟ್ ತೆಗೆದುಕೊಳ್ಳ ತಕ್ಕ ಎಷ್ಟೋ ಜನರಲ್ಲಿ ಬಸ್ಸುಗಳೇ ಇರುವುದಿಲ್ಲ. ಅನೇಕರು ಬಸ್ಸುಗಳನ್ನು ಓಡಿಸಿ ಹಣ ಸಂಪಾದನೆ ಮಾಡಬೇಕೆಂಬ ದೃಷ್ಟಿಯಿಂದ ಈ ಪರ್ಮಿಟ್ಟುಗಳನ್ನು ಪಡೆಯುತ್ತಿಲ್ಲ. ಅನೇಕ ಖಾಸಗೀ ಜನರಿಗೆ ಈ ಪರ್ಮಿಟ್‌ಗಳನ್ನು ಪಡೆಯಲು ತುಂಬಾ ಕಷ್ಟವಿದೆ. ಆದುದರಿಂದ ಈ ಒಂದು ಗುಟ್ಟನ್ನು ತಿಳಿದುಕೊಂಡು ಅನೇಕರು, ಇನ್‌ಫ್ಲುಯೆನ್ಸನ್ನು ಇಟ್ಟುಕೊಂಡಿರತಕ್ಕಂಥವರು, ರಾಜಕೀಯ ಮುಖಂಡರಾಗಿರತಕ್ಕವರು, ರಾಜಕೀಯದಲ್ಲಿ ಒಂದು ಸ್ಥಾನಮಾನವನ್ನಿಟ್ಟುಕೊಂಡಿರತಕ್ಕವರು, ಅನೇಕರು ಈ ಬಸ್ ಪರ್ಮಿಟ್‌ಗಳನ್ನು ಸುಲಭವಾಗಿ ಪಡೆದುಕೊಂಡು ಬಿಟ್ಟು ಅವುಗಳನ್ನು ಬೇರೆ ಯಾರಿಗಾದರೂ ಕೊಟ್ಟು ಅವರಿಂದ ತಿಂಗಳು ತಿಂಗಳಿಗೆ ನೂರಾರು ರೂಪಾಯಿಗಳನ್ನು ಸಂಪಾದಿಸಲು ಇದನ್ನೂ ಒಂದು ಸಂಪಾದನೆ ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅಂಥ ನಿದರ್ಶನಗಳೇನಾದರೂ ಇದ್ದರೆ ಒಂದೆರಡನ್ನು ತಿಳಿಸುತ್ತೀರಾ?

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ನಿದರ್ಶನಗಳನ್ನು ಹೇಳುವುದಾದರೆ ನೂರಾರಿವೆ. ನನ್ನ ಜೊತೆಯಲ್ಲಿ ಯಾರಾದರೂ ಬರುವುದಾದರೆ ತೋರಿಸುವುದಕ್ಕೂ ನಾನು ತಯಾರಿದ್ದೇನೆ. ಆ ರೀತಿಯಾಗಿ ಈ ದಿವಸ ಪರ್ಮಿಟ್‌ಗಳನ್ನು ಪಡೆದುಕೊಂಡು ಬೇರೆಯವರಿಗೆ ಮಾರಿರತಕ್ಕಂಥ ನಿದರ್ಶನಗಳು ಬೇಕಾದಷ್ಟಿವೆ. ಒಬ್ಬೊಬ್ಬರೇ ನಾಲ್ಕೈದು ಲೈನುಗಳ ಬಸ್ ಪರ್ಮಿಟ್‌ನ್ನು ಪಡೆದುಕೊಂಡು ಬಸ್ಸುಗಳನ್ನೇ ಓಡಿಸದಿರುವಂಥ ನಿದರ್ಶನಗಳನ್ನು ಸಹ ತೋರಿಸಬಲ್ಲೆ. ಇನ್ನು ಸಂಸ್ಥಾನದಲ್ಲಿರುವ ದೊಡ್ಡ ದೊಡ್ಡ ಲೈನುಗಳನ್ನೆಲ್ಲಾ ಮನಾಪಲಿ ಮಾಡಿಕೊಂಡಿದ್ದೀರಿ. ಖಾಸಗೀ ಜನರಿಗೆ ಕೊಟ್ಟಿರತಕ್ಕ ಲೈನುಗಳಲ್ಲಿ ಕೇವಲ 30–40 ಮೈಲುಗಳಿದ್ದರೆ ಹೆಚ್ಚಾಯಿತು. ಅಂಥಾ ಲೈನ್‌ಗಳಲ್ಲಿ ಓಡಾಡುವ ಬಸ್ಸಿನಿಂದ ಮಾಲೀಕರಿಗೆ ಹೆಚ್ಚು ವರಮಾನ ಬರಲು ಅವಕಾಶವಿರುವುದಿಲ್ಲ. ಯಾವ ರೂಟಿನಲ್ಲಾಗಲಿ 100 ಮೈಲಿಗಿಂತ ಕಡಮೆ ಇದ್ದರೆ ವರಮಾನಕ್ಕೂ ಖರ್ಚಿಗೂ ಸರಿದೂಗಿಸಲು ಸಾಧ್ಯವಿಲ್ಲ. ಕೆಲವು ಲೈನುಗಳಲ್ಲಿ ಆದಾಯವಿದ್ದರೆ ವ್ಯತಿರಿಕ್ತ ಕೆಲವು ಲೈನುಗಳಲ್ಲಿ ಲುಕ್ಸಾನಿರುತ್ತದೆ. ಎಲ್ಲಾ ಲೈನುಗಳಲ್ಲೂ ಸದಾ ಫಾಯಿದೆ ಬರುವುದಿಲ್ಲ ತಾವು ಪ್ರತಿಯೊಂದು ಲೈನಿನಲ್ಲಿಯೂ ಲಾಭ ಬರುತ್ತದೆ ಎಂದು ಹೇಳುವುದಾದರೆ, ಖಂಡಿತ ನಾನು ಅದನ್ನು ಒಪ್ಪುವುದಿಲ್ಲ. ಅದರೆ ನಾನೇನೂ ಬಸ್ ಮಾಲೀಕನಲ್ಲ. ಇತ್ತೀಚೆಗೆ ವ್ಯವಸಾಯಗಾರನಿಗೆ ಈ ಲಾರಿಗಳಿಂದ ಆಗುತ್ತಿದ್ದಂಥ ಅನುಕೂಲ ಅಷ್ಟಿಷ್ಟಲ್ಲ. ಆತನಿಗೆ ಅಗತ್ಯವಾದ ಪ್ರತಿಯೊಂದು ಸಾಮಾನುಗಳನ್ನೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ, ಬಲು ಬೇಗ. ಸಾಗಿಸಬೇಕಾಗಿದ್ದರೆ ಅದು ಲಾರಿಗಳಿಂದಲೇ ಸಾಧ್ಯ. ತಾವು ಈಗ ಈ ಪೆಟ್ರೋಲ್ ತೆರಿಗೆಯನ್ನು ಏರಿಸುವುದರಿಂದ ರೈತನಿಗೆ ತುಂಬ ಕಿರುಕುಳ ಕೊಟ್ಟಹಾಗಾಗುತ್ತದೆ. ಆದ್ದರಿಂದ ನಿಮ್ಮ ಈ ತತ್ವ ನ್ಯಾಯವಾಗಿಲ್ಲ, ಇದು ಅಕ್ರಮವಾದದ್ದು, ಇದನ್ನು ತಾವು ರೈತನ ಹಿತದೃಷ್ಟಿಯಿಂದ ತಂದಿಲ್ಲವೆಂದು ತಿಳಿಸಿ ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಸರ್ಕಾರದವರು ಈಗ ಸಭೆಯಮುಂದೆ ಇಟ್ಟಿರತಕ್ಕ The Mysore Motor Spirit (Taxation on sales) (Amendment) Bill ಗೆ ನನ್ನ ಸಂಪೂರ್ಣ ಬೆಂಬಲ ನೀಡುತ್ತ ನಾನು ಒಂದೆರಡು ಮಾತುಗಳನ್ನು ಹೇಳಲಿಚ್ಛಿಸಿದ್ದೇನೆ. ಈಗಾಗಲೆ ನಮ್ಮ ಅಕ್ಕಪಕ್ಕದ ಪ್ರಾಂತಗಳಾದ ಮದರಾಸ್, ಬೊಂಬಾಯಿ ಈ ಪ್ರಾಂತಗಳವರು ಈ ತೆರಿಗೆಯನ್ನು 4 ಆಣೆಗಳಿಂದ 6 ಆಣೆಗೆ ಏರಿಸಿದ್ದಾರೆ. ಹೀಗಿರುವಾಗ ನಾವೂ ಸಹ ಅದೇರೀತಿ ಇಲ್ಲಿ ಆ ತೆರಿಗೆಯನ್ನು ಏರಿಸದೆ ಹಾಗೆಯೇ 4 ಆಣೆಗಳನ್ನೇ ಜಾರಿಯಲ್ಲಿಟ್ಟುಕೊಂಡು ಬಂದರೆ ಅದರಿಂದ ಯಾರಿಗೆ ಲಾಭ, ಯಾರಿಗೆ ಲುಕ್ಸಾನು ಆಗುತ್ತೆಂಬುದನ್ನು ನಾವೀಗ ಮುಖ್ಯವಾಗಿ ಆಲೋಚಿಸಬೇಕಾಗಿದೆ. ನಮ್ಮ ಸಂಸ್ಥಾನದಲ್ಲಿ ಈಗಾಗಲೇ ಇರತಕ್ಕ ಲಾರಿಗಳ ಸಂಖ್ಯೆ 3,447ಕ್ಕೆ ಏರಿದ್ದರೂ, ಹೊರಗಡೆಯಿಂದ ನಮ್ಮ ಸಂಸ್ಥಾನದೊಳಕ್ಕೆ ಬಂದುಹೋಗತಕ್ಕಂಥ ಬಸ್ಸು ಮತ್ತು ಲಾರಿಗಳ ಸಂಖ್ಯೆ ಈ ದಿವಸ 500-600ಕ್ಕೆ ಮೇಲೆಯೇ ಇರುತ್ತದೆಂದು ಹೇಳಬಹುದು. ಯಾವಾಗ ಹೊರಗಡೆ ಪ್ರಾಂತಗಳವರು ಪೆಟ್ರೋಲ್ ಟ್ಯಾಕ್ಸ್‌ನ್ನು ಜಾಸ್ತಿಮಾಡುತ್ತಾರೋ ಆಗ ಈ ಉದ್ಯಮದಲ್ಲಿರತಕ್ಕವರು ಪೆಟ್ರೋಲ್ ಟ್ಯಾಕ್ಸ್ ಕಡಮೆ ಇರತಕ್ಕಕಡೆಗೆ ಬರತಕ್ಕದ್ದು ಸ್ವಾಭಾವಿಕ. ಇದನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ನಾಳೆ ನಮ್ಮ ಸಂಸ್ಥಾನದಲ್ಲಿ ಹೊರಗಿನ ಲಾರಿ ಬಸ್ಸುಗಳು ಮುಕ್ಕಾಲು ಮೂರುವೀಸೆ ಪಾಲು ಈ ಸಂಸ್ಥಾನಕ್ಕೆ ಬಂದು ಪೆಟ್ರೋಲ್ ವ್ಯವಹಾರಮಾಡಲು ಪ್ರಾರಂಭವಾಗಬಹುದು. ನಮ್ಮ ಸಂಸ್ಥಾನದಲ್ಲಿ 4 ಆಣೆ ತೆರಿಗೆಯಿದ್ದು ಹೊರಗಡೆ 6 ಆಣೆ ತೆರಿಗೆ ಹಾಕುತ್ತಿದ್ದರೆ ಇಲ್ಲಿ 2 ಆಣೆ ತೆರಿಗೆ ಕಡಮೆ ಆಯಿತು ಎಂದು ಈಗ ನಮ್ಮಲ್ಲಿರತಕ್ಕ ಲಾರಿಗಳೂ ಹೊರಗಡೆಯವರ ಲಾರಿಗಳೂ ಪೆಟ್ರೋಲನ್ನು ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಕೊಂಡು ವ್ಯವಹಾರ ಮಾಡುತ್ತವೆ. ಹೊರಗಡೆಯವರು ನಮ್ಮಲ್ಲಿ ಪೆಟ್ರೋಲನ್ನು ಕೊಂಡರೆ ಸುಂಕ ಕಮ್ಮಿ ಎಂದು ಹೀಗೆ ಮಾಡಿದರೆ ನಮ್ಮ ಸರ್ಕಾರಕ್ಕೆ ಬರುವ ಕಂದಾಯವನ್ನು ನಾವೇ ಲುಕ್ಸಾನುಮಾಡಿಕೊಂಡಂತಾಗುತ್ತದೆ. ಹೀಗಿರುವಾಗ "ಮೋಟಾರ್ ಸಂಚಾರಮಾಡುವವರು ಟಿಕೆಟ್ ಕೊಂಡುಕೊಳ್ಳುವವರ ಮೇಲೆ ತೆರಿಗೆ ಬೀಳುತ್ತದೆಂದು ಹೂಡಿರತಕ್ಕ ವಾದ ಅರ್ಥವಿಲ್ಲದ ವಾದವೆಂದು ನಾನು ಹೇಳುತ್ತೇನೆ. ಹಾಗೆ ಮಾಡಿದರೆ ನಮ್ಮ ಸರ್ಕಾರಕ್ಕೆ ಎಷ್ಟು ನಷ್ಟವಾಗುತ್ತದೆಂಬ ಪ್ರಶ್ನೆಯನ್ನೇ ಅವರು ಎತ್ತಲಿಲ್ಲ.

ಬೆಂಗಳೂರಿನಿಂದ ಪೂನಾಕ್ಕೆ ರೈಲ್ವೆ ಇದೆ. ನಾರ್ತ್ ಕೆನರ, ಸೌತ್ ಕೆನರ, ಬಳ್ಳಾರಿ ಇತ್ಯಾದಿಗಳಿಗೆ ಹೋಗಲು ರೈಲು ಇಲ್ಲ. ಆದರೆ ಈ ಲಾರಿ ವ್ಯವಹಾರ ನಡೆಯತಕ್ಕದ್ದೆಲ್ಲಾ ಸಂಸ್ಥಾನದ ಒಳಗಡೆಯಲ್ಲ. ಈ ತೆರಿಗೆಯನ್ನು ನಾವು ಹಾಕದೆ ಬಿಟ್ಟರೆ ನಮ್ಮ ಸರ್ಕಾರಕ್ಕೆ ಪೂರ್ತಿ ಲುಕ್ಸಾನಾಗುತ್ತದೆ. ಹೀಗೆ ಹೊರಗಿನ ಲಾರಿಗಳಿಗೂ ಈ ಪೆಟ್ರೋಲ್ ಸುಂಕ ಹಾಕಬೇಡಿ ಎಂದು ಹೇಳತಕ್ಕ ವಾದದ ಅರ್ಥವೇ ನನಗೆ ಆಗುತ್ತಿಲ್ಲ. ಹೀಗೆ ಹೊರಗಡೆಯಿಂದ ಬಂದುಹೋಗತಕ್ಕ ಲಾರಿಗಳು ತೆಗೆದುಕೊಂಡುಹೋಗುವ ಪೆಟ್ರೋಲಿನಿಂದ ಲುಕ್ಸಾನು ಹೊರಗಿನವರಿಗೆ ಆಗುವುದಿಲ್ಲ. ಆ ಲುಕ್ಸಾನು ನಮಗೆ ಆಗುತ್ತದೆ. ನಮ್ಮ ವ್ಯವಸಾಯಗಾರನಿಗೆ ಈ ಪೆಟ್ರೋಲ್ ತೆರಿಗೆಯಿಂದ ಅಂಥ ತೊಂದರೆಯೇನೂ ಆಗುವುದಿಲ್ಲವೆಂದು ತಿಳಿಸಿ ನಾನು ಈ ಮಸೂದೆಗೆ ಬೆಂಬಲ ನೀಡುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಮಾನ್ಯ ರೆವೆನ್ಯೂ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಈಗ ಸಭೆಯ ಮುಂದೆ ಮಂಡಿಸಿರತಕ್ಕ The Mysore Motor Spirit (Taxation on Sales) (Amendment)

ಮಸೂದೆಯನ್ನು ವಿರೋಧಮಾಡುತ್ತ, ನಾನು ಈ ತೆರಿಗೆ ವಿಧಿಸತಕ್ಕದ್ದು ಹೇಗೆ ವಿರುದ್ಧವಾಗಿದೆ, ಹೀಗೆ ತೆರಿಗೆ ವಿಧಿಸುವ ಬಗ್ಗೆ ಮೂಲಭೂತ ತತ್ವಗಳೇನಿರುತ್ತವೆ ಎಂಬ ಬಗ್ಗೆ ಪ್ರಾತನಾಡಿ, ಅನಂತರ ಈ ಸಂದರ್ಭದಲ್ಲಿ ಈ ತೆರಿಗೆ ಹಾಕತಕ್ಕದ್ದು ಸೂಕ್ತವೇ ಅಥವಾ ಅಲ್ಲವೇ ಎಂಬುದನ್ನು ತಿಳಿಸಬೇಕೆಂದು ಇಷ್ಟಪಡುತ್ತೇನೆ.

ಮೊದಲನೆಯದಾಗಿ ಈ ತೆರಿಗೆ ಮಸೂದೆಯನ್ನು ನಮ್ಮ ಮುಂದೆ ಇಡುತ್ತ ಸಂಸ್ಥಾನದ ಆಯವ್ಯಯದ ಬಗ್ಗೆ ಒದಗಿಸಿರುವ ಖೋತಾ ಹಣವನ್ನು ಭರ್ತಿ ಮಾಡಿಕೊಳ್ಳತಕ್ಕ ಬಗ್ಗೆ ಈ ತೆರಿಗೆಯನ್ನು ತಂದಿದ್ದೇವೆ ಎಂದು ಹೇಳಿದ್ದಾರೆ. ಆ ಒಂದು ದೃಷ್ಟಿಯಿಂದ ನೋಡುವುದಾದರೂ ಈ ತೆರಿಗೆಯನ್ನು ಹಾಕಿ ಆ ಡಿಫಿಸಿಟ್ಟನ್ನು ತುಂಬಿಕೊಳ್ಳುವ ಅವಕಾಶವಾದರೂ ಇದೆಯೇ ಎಂದು ನೋಡಿದರೆ, ಅದೂ ಕೂಡ ಇಲ್ಲ. ಇದರ ಜೊತೆಗೆ ಈ ಬಡ್ಜೆಟ್ಟನ್ನು ತಯಾರುಮಾಡತಕ್ಕಂಥ ಈ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿ ಏನಿದೆಯೆಂಬುದನ್ನು ನೋಡಿದರೆ, ಕಳೆದ ಆರು ವರ್ಷಗಳಿಂದಲೂ ಅನೇಕ ಯೋಜನೆಗಳನ್ನು ಅಭಿವೃದ್ಧಿಯೋಜನೆಗಳೆಂದು ಹೇಳುತ್ತ ಅವುಗಳನ್ನು ದೇಶದ ಮುಂದೆ ಹೆಸರಿಗೆ ಮಾತ್ರ ಇಡುತ್ತಿದ್ದಾರೆಯೇ ಶಿವಾಯಿ ಅವುಗಳೊಂದೂ ಇಲ್ಲಿನವರೆಗೆ ಕಾರ್ಯಗತವಾಗಿರುವುದಿಲ್ಲ. ಇಂಥ ಯೋಜನೆಗಳಿಂದ ಏನು ಪ್ರಯೋಜನ? ಇಂಥ State of affairs ಗಳಿಗೇ ಹಣವನ್ನು ಪೂರಾ ಖರ್ಚುಮಾಡಿ ವರ್ಷೇವರ್ಷೇ ಬಡ್ಜೆಟ್ಟನ್ನು ಡಿಫಿಸಿಟ್ ಎಂದು ತೋರಿಸುತ್ತಿದ್ದಾರೆ. ಇಂಥ ಡಿಫಿಸಿಟ್ಟುಗಳನ್ನು ಭರ್ತಿಮಾಡಿಕೊಳ್ಳಲು ಈ ತೆರಿಗೆಗಳನ್ನು ಎತ್ತುತ್ತಿದ್ದೇವೆ ಎಂದು ಅವರು ಹೇಳತಕ್ಕದ್ದು ಪೂರಾ ಅನುಮಾನಾಸ್ಪದವಾಗಿದೆ. ಈ ತೆರಿಗೆಯನ್ನು ಎತ್ತಲು ಎಲ್ಲೆಲ್ಲಿ ಕೊಟ್ಯಾಂತರ ರೂಪಾಯಿಗಳ ಉತ್ಪತ್ತಿಯಿದೆಯೋ ಅಂಥ ಕಡೆಗೆ ಇವರ ದೃಷ್ಟಿಯೇ ಹರಿಯುವುದಿಲ್ಲ. ಏಕೋ ಏನೋ ಇವರ ಮನೋಭಾವ ಅವರ ಕಡೆಗೇ ಹರಿಯುವುದಿಲ್ಲ!

Mr. SPEAKER.—It looks as though you are supporting the Bill. (Laughter!)

ಶ್ರೀ ಎಸ್. ಗೋಪಾಲಗೌಡ.—ನಾನಾದರೂ ಸಹ ತೆರಿಗೆಗಳನ್ನೇ ಹಾಕಬಾರದೆಂದೇನೂ ಹೇಳುವುದಿಲ್ಲ. ತೆರಿಗೆಗಳನ್ನು ಕೊಡಬೇಕೆಂದು ಆರ್ಡರ್ ಮಾಡತಕ್ಕವರು ನೀವು, ಅದನ್ನು ಕೊಡತಕ್ಕವರು ನಾವು. ಹಾಗೆ ನಾವು ಇದುವರೆಗೂ ನಿಮಗೆ ಕೊಟ್ಟಿರತಕ್ಕ ಹಣವನ್ನು ನೀವು ಒಂದು ವಿತರಣೆಯಿಂದ ಸರಿಯಾಗಿ ಖರ್ಚು ಮಾಡದೆ ಇರುವುದರಿಂದ, ಈಗ ನೀವು ಈ ಒಂದು ಹೊಸ ತೆರಿಗೆಯನ್ನು ಕೇಳುವುದಕ್ಕೆ ನಿಮಗೆ ಹಕ್ಕಿಲ್ಲ ಎಂದು ನಾನು ಹೇಳುತ್ತೇನೆ.

11-30 A.M.

ನೀವು ಇದು ಬಹಳ ಸಣ್ಣ ತೆರಿಗೆ, ಬರೀ ಶ್ರೀಮಂತರ ಮೇಲೆ, ನೂರಕ್ಕೆ 10 ಜನರಮೇಲೆ ಮಾತ್ರ ಬೀಳತಕ್ಕ ತೆರಿಗೆ, ಇದೊಂದನ್ನು ಕೊಟ್ಟರೆ ಏನಾಗುತ್ತದೆ, ಬರೀ ವಿರೋಧಮಾಡುವುದಕ್ಕೋಸ್ಕರ ವಿರೋಧ ಮಾಡುತ್ತಿದ್ದಾರೆ ಎಂದು ಪ್ರಶ್ನಿಸುತ್ತೀರಿ. ನಿಜ, ನಾವು ವಿರೋಧ ಮಾಡುವುದಕ್ಕೆ ಇರುವುದು; ವಿರೋಧ ಮಾಡಿಯೇ ಮಾಡುತ್ತೇವೆ. ನಿಮ್ಮ ಆರ್ಥಿಕ ನೀತಿ, ನಮ್ಮ ಪಕ್ಷದ ಮುಖಂಡರು ಹೇಳಿದಹಾಗೆ ಮತ್ತು ಶ್ರೀ ಪಟ್ಟಾಭಿರಾಮರ್ಯರವರು ಹೇಳಿದಹಾಗೆ, ಸಮರ್ಪಕವಾಗಿಲ್ಲ. ನೀವು ಆದಾಯ ಮಾಡುವುದರಲ್ಲಿ ಯಾವ ತತ್ವವನ್ನು ಆಧಾರವಾಗಿಟ್ಟುಕೊಂಡು ಹೋಗುತ್ತಿದ್ದೀರೋ ಮತ್ತು ಖರ್ಚುಮಾಡುವುದರಲ್ಲಿ ಯಾವ ನಿಯಮವನ್ನನುಸರಿಸಿ ಖರ್ಚುಮಾಡುತ್ತಿದ್ದೀರೋ ಅದು ನಿಮಗೆ ಮಾತ್ರ ಸರಿಯಾಗಿದೆ ಅಷ್ಟೆ. ಕಾಂಗ್ರೆಸ್ಸಿನ ಆಡಳಿತದ ಬಗ್ಗೆ ಒಬ್ಬ ಕವಿಗಳು ಶ್ರೀಮಾನ್ ಗೋವಿಂದಪೈ ಹೇಳಿರುವ ಮಾತು ಒಪ್ಪುತ್ತದೆ.

" ವ್ಯಾಕರಣವ ಭುಜಿಸರಯ್ಯಾ ಹಸಿದವರು।
ಕಾವ್ಯ ಕಾವ್ಯನೀರೀಂಘುರ್ಕೈ ಬಾಯಾರಿದವರು॥
ಕೋಟಿ ಹೊನ್ನೀರಾಗೆ ನೂಲಿಲ್ಲ; ಅಗಳಿಲ್ಲ।
ತಮಗೆ ತಮ್ಮವರಿಗೆಂಬುದೇ ಕಾರ್ಯಹೇತು॥

ಸಂಸ್ಕೃತಿ ಪ್ರಚಾರವೆಂದು ಹೇಳಿ 5 ಲಕ್ಷ ರೂಪಾಯಿಗಳನ್ನು ಖರ್ಚು ಹಾಕುತ್ತೀರಿ. ಇತ್ತ ಪೆಟ್ರೋಲಿನ ಮೇಲೆ ತೆರಿಗೆಹಾಕಿ 4 ಲಕ್ಷ ರೂಪಾಯಿಗಳನ್ನು ಉತ್ಪತ್ತಿ ಮಾಡಲು ಹೋಗುತ್ತೀರಿ! ಇದೆಲ್ಲಾ ಏನು ತೋರಿಸುತ್ತದೆ! ಬಡವರು ಕಷ್ಟಪಟ್ಟು ಕೊಟ್ಟಿರುವ ದುಡ್ಡನ್ನು ಖರ್ಚುಮಾಡುವುದರಲ್ಲಾದರೂ ಒಂದು ಮಿತವ್ಯಯ ಬೇಕು. ಹಾಗೆ ಮಾಡದಿದ್ದರೆ, ನಿಮಗೆ ಹೊಸಹೊಸ ತೆರಿಗೆಗಳನ್ನು ಹಾಕುವುದಕ್ಕೆ ಹಕ್ಕಿಲ್ಲ. ಇವೊತ್ತು ತಾವು ಕೋಟಿಗಟ್ಟಲೆ ಹಣವನ್ನು ತೆಗೆದುಕೊಳ್ಳುವ ನೀತಿಯನ್ನು ಅನುಸರಿಸಿಕೊಂಡು ಬರುತ್ತಿಲ್ಲ. ಇದಕ್ಕೆ ಕಾರಣವೇನೋ ಸ್ಪಷ್ಟಪಡುತ್ತಿಲ್ಲ. ಸರ್ಕಾರದ ಹಣಕಾಸಿನ ರಚನೆ ಹೇಗಿರಬೇಕೆಂದರೆ—ಇದಕ್ಕೊಂದು concrete example ಕೊಟ್ಟು ಹೇಳುವುದಾದರೆ—ಆಲದ ಮರ ನೀರನ್ನು ಬೇರಿನಿಂದ ಯಥೇಚ್ಛವಾಗಿ ತೆಗೆದುಕೊಳ್ಳುತ್ತದೆ; ಮತ್ತೆ ತನ್ನ ಬಿಳಲುಗಳನ್ನು ನೆಲಕ್ಕೆ ಬಿಡುತ್ತದೆ. ತಮ್ಮ ತೆರಿಗೆಯ ನೀತಿಯೂ ಇದೇರೀತಿ ಇರಬೇಕು. ಇದಕ್ಕೆ ವಿರುದ್ಧವಾಗಿದೆ ತಮ್ಮ ನೀತಿ. ಜಾಲಿಯಮರ ಹೇಗೆ ಮರಳುಗಾಡಿನಲ್ಲಿನ ಅಲ್ಪಸ್ವಲ್ಪ ನೀರನ್ನೂ ಉಪಯೋಗಿಸಿಕೊಂಡು ಬೆಳೆದರೂ ಮುಳ್ಳುಕಟ್ಟಿಕೊಂಡು ಉಪಯೋಗಕ್ಕಾಗದೆ ಕಾಡು ಗಿಡವಾಗಿ ಉಳಿಯುತ್ತದೆಯೋ ಹಾಗೆ ತಾವು ಆಡಳಿತ ನಡೆಸುತ್ತಿದ್ದೀರಿ. ನಮ್ಮದು ಬಡದೇಶವೆಂದು ಮೊದಲೇ ಹೇಳುತ್ತಿದ್ದೀರಿ. ಕಂದಾಯ ಕೊಡುವುದಕ್ಕೆ ಜನರಿಗೆ ಶಕ್ತಿಯಿಲ್ಲದೆಹೋಗಿದೆ. ನಮ್ಮ ಆರ್ಥಿಕಸ್ಥಿತಿ ದುಸ್ಥಿತಿಯಾಗಿದೆ. ಜೀವನ ಮಾಡುವುದೇ ದುರ್ಭರವಾಗಿದೆ. ಆಹಾರ ಪರಿಸ್ಥಿತಿ ಉತ್ಕಟವಾಗಿದೆ. ಯಾರಿಗೆ ಸಾಮಾಜಿಕ ಅಭದ್ರತೆಯಿದೆ, ಯಾರಿಗೆ ಆರ್ಥಿಕ ಅಭದ್ರತೆಯಿದೆ ಅವರನ್ನು ಉತ್ತಮಪಡಿಸುವುದಕ್ಕೆ, ದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ದೇಶದಲ್ಲಿ ಸುಖ ಸಂತೋಷವನ್ನು ಹೆಚ್ಚಿಸುವುದಕ್ಕೆ ತೆರಿಗೆಗಳನ್ನು ಕೇಳುತ್ತಿದ್ದೇವೆ, ಖೋತಾ ಸರಿಪಡಿಸುವುದಕ್ಕೆ ತೆರಿಗೆಗಳನ್ನು ಕೇಳುತ್ತಿದ್ದೇವೆ, ತೆರಿಗೆ ಕೊಡದೆಇದ್ದರೆ ಹೇಗೆ ದೇಶ ನಡೆಯುತ್ತದೆಂದು ಒಂದು ವಾದ ಇಡುತ್ತೀರಿ. ಆದರೆ ಈ ಕಾರ್ಯ ಈ ಕಾಯಿದೆಯಿಂದ ಸಾಧನೆಯಾಗುತ್ತದೆಯೇ? ಈ ಕಾನೂನಿನಿಂದ ನಾಲ್ಕು ಲಕ್ಷ ರೂಪಾಯಿಗಳು ಬಂದರೆ ನಿಮಗೆ ಸಾಕೇ? 157·33 ಲಕ್ಷ ರೂಪಾಯಿಗಳ ಖೋತಾ ಇದೆ; ಇನ್ನೂ ಸರಿಯಾಗಿ ನಮ್ಮ ಮುಖಂಡರು ಲೆಕ್ಕ ಮಾಡಿದಂತೆ ಲೆಕ್ಕಮಾಡಿ ಹೇಳಿದರೆ 2½ ಕೋಟಿ ರೂಪಾಯಿಗಳೆಂದು ಹೇಳಬಹುದು. ಹೀಗಿರುವಾಗ ಇಂಥ ಸಣ್ಣಸಣ್ಣ ಕಿರುಕುಳ ತೆರಿಗೆಗಳನ್ನು ತಂದುಹಾಕುತ್ತೀರಲ್ಲ! ಇದು ಕೂಡದು. ಜನರಿಗೆ ಇಂಥ ತೆರಿಗೆಗಳನ್ನು ಕೊಡುವುದಕ್ಕೆ ಮೊದಲು ತಾವು ಒಂದು ಭರವಸೆ, ಒಂದು ಆಶ್ವಾಸನ ಕೊಡಬೇಕು. ಜನರಲ್ಲಿ ವಿಶ್ವಾಸ ಪಡೆಯಬೇಕು. ತಾವು ಖರ್ಚು ಮಾಡುವ ಹಣ ಮಿತವ್ಯಯದಿಂದ ಸರಿಯಾದ ಕೆಲಸಗಳಿಗೆ ಖರ್ಚಾಗುತ್ತಿದೆಯೆಂಬುದನ್ನು ತೋರಿಸಿಕೊಡಬೇಕು. ಇದುವರೆಗೆ ತಾವು ಅದನ್ನು ತೋರಿಸಿಕೊಟ್ಟಿಲ್ಲ. ಮೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ, ಟ್ರ್ಯಾಕ್ಟರ್

(ಶ್ರೀ ಎಸ್. ಗೋಪಾಲಗೌಡರು.)

ಆರ್ಗನೈಸೇಷನ್ ಎಂಬುದಕ್ಕೆ. ಇದರ ಗತಿಯೇನಾಗಿದೆ ಎಂಬುದು ತಮಗೇ ಗೊತ್ತು! ಎಷ್ಟೋ ರೇಡಿಯೋ ಸೆಟ್ಟುಗಳನ್ನು ಕೊಂಡಿಟ್ಟಿದ್ದೀರಿ; ಅವುಗಳಲ್ಲಿ ಎಷ್ಟು ಖರ್ಚಾಗಿವೆ, ಎಷ್ಟು ಉಳಿದಿವೆ, ಉಳಿದುವುಗಳ ಗತಿ ಏನಾಗಿವೆಯೆಂಬುದನ್ನು ಹೇಳಿಲ್ಲ! ಹೀಗೆ ಯಥೇಚ್ಛವಾಗಿ ಹಣ ಖರ್ಚುಮಾಡಿದ್ದೀರಿ, ಉನ್ನತಿಯ ಹೆಸರಲ್ಲಿ! ಸುಮ್ಮನೆ ಹಣವನ್ನು ಖರ್ಚು ಮಾಡುತ್ತಿದ್ದೀರೇ ಹೊರತು ಪರಿಣಾಮದಲ್ಲಿ ಎಷ್ಟರಮಟ್ಟಿಗೆ ಅದರಿಂದ ಜನತೆಗೆ ಉಪಯೋಗವಾಗಿದೆಯೆಂಬುದನ್ನು ಯೋಚನೆ ಮಾಡುತ್ತಿಲ್ಲ. ತಾವು ಈ ಅಸೆಂಬ್ಲಿಯಲ್ಲಿ ಬಹು ಸಂಖ್ಯಾತರಾಗಿರಬಹುದು. ಆದರೆ ದೇಶದ ಜನರು ತಮ್ಮ ರೀತಿ ನೀತಿಗಳನ್ನೂ, ತಮ್ಮ ಆಡಳಿತ ಪದ್ಧತಿಯನ್ನೂ ಎಷ್ಟು ಕಟುವಾಗಿ ಖಂಡಿಸುತ್ತಿದ್ದಾರೆಂಬುದು ಈಗಲ್ಲದಿದ್ದರೂ ನಾಳೆಯಾದರೂ ತಮಗೇ ಗೊತ್ತಾಗುತ್ತದೆ. ನಾವು ತಮಗೆ ಬೆಂಬಲ ನೀಡಬೇಕಾದರೆ, ಸಹಕಾರ ಹಸ್ತವನ್ನು ನೀಡಬೇಕಾದರೆ, ನಿಮ್ಮ ಈಗಿನ ಆರ್ಥಿಕ ನೀತಿ ಉತ್ತಮವಾಗಬೇಕು ಮತ್ತು ಬದಲಾವಣೆಯಾಗಬೇಕು ಮತ್ತು ವಿರೋಧ ಪಕ್ಷದವರಿಗೆ ಸಂಸ್ಥಾನದ ಹಣಕಾಸಿನ ಆಡಳಿತ ನೀತಿಯ ಅಂತರ್ಯದಲ್ಲಿ ಏನು ಗುಟ್ಟಿದೆಯೆಂಬುದನ್ನು ತಿಳಿಯಪಡಿಸುವುದಕ್ಕೆ ಮತ್ತು ತಜ್ಞರು ನೋಡಿ ಪರಿಶೀಲನೆ ನಡೆಸುವುದಕ್ಕೆ, ವಿಮರ್ಶೆಮಾಡುವುದಕ್ಕೆ ಮತ್ತು ಸೂಕ್ತ ಸಲಹೆ ಮಾಡುವುದಕ್ಕೆ ಒಂದು ಅವಕಾಶ ಕಲ್ಪಿಸಿಕೊಡಬೇಕು. ಏಕೆಂದರೆ, ನಮ್ಮ ಮುಖಂಡರು ಹೇಳಿದಹಾಗೆ ಈ ಬಿಲ್ಲು ಒಂದು ಪ್ರಾರಂಭ, ಅಷ್ಟೆ. It is the beginning. ಇನ್ನು ಮುಂದೆ ಇಂಥ ತೆರಿಗೆಗಳು ಅನೇಕವಾಗಿ ಬರಬಹುದೆಯೆಂಬುದನ್ನು ತೋರಿಸುತ್ತದೆ. ಆದ್ದರಿಂದ ಎಲ್ಲಿ, ಯಾವರೀತಿ, ಯಾರಮೇಲೆ, ಎಷ್ಟು ತೆರಿಗೆಗಳನ್ನು ವಿಧಿಸಬೇಕೆಂಬುದನ್ನು ವಿರೋಧಪಕ್ಷದವರೂ ಮತ್ತು ತಾವೂ ಕಲೆತು ವಿಮರ್ಶೆಮಾಡಬೇಕೇ ಹೊರತು, ಅದಿಲ್ಲದೆ ಇಂಥ taxation measures ನ್ನು ನಾವು ಒಪ್ಪುವುದಕ್ಕಾಗುವುದಿಲ್ಲ, ಅದಕ್ಕೆ ಬೆಂಬಲ ಕೊಡುವುದಕ್ಕಾಗುವುದಿಲ್ಲ. ಇವುಗಳಿಂದ ದೇಶ ಅಭಿವೃದ್ಧಿಯಾಗುತ್ತದೆಂಬ ನಂಬಿಕೆ ನಮಗಿಲ್ಲ. ಈ ಕಾರಣಗಳಿಂದ ನಾನೂ ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

(Sri B. Hutche Gowda rose)

Sri K. HANUMANTHAIYA.—It may be arranged like this. I make a suggestion. The Hon'ble Minister in charge of the Bill may be allowed to speak now. Then Sri Hutche Gowda may speak. Finally I will wind up the debate.

Mr. SPEAKER.—Yes.

ಶ್ರೀ ಕಡಿದಾಳ್ ಮಂಜಪ್ಪ.—ಅಧ್ಯಕ್ಷರೆ, ನಾನಾಗಲೇ ತಿಳಿಸಿದಹಾಗೆ, ಈ ತೆರಿಗೆ ಮೈಸೂರು ಸಂಸ್ಥಾನಕ್ಕೆ ಮಾತ್ರ ಹೊಸದಾಗಿ ಬಂದ ತೆರಿಗೆಯಲ್ಲ. ಭಾರತದ ಇತರ ಪ್ರಾಂತಗಳಲ್ಲೂ ಕೂಡ ಈ ತೆರಿಗೆ ಜಾರಿಯಲ್ಲಿದೆ. ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಈ ತೆರಿಗೆಯಿಂದ ನೂರು ಜನರಲ್ಲಿ 90 ಜನರಿಗೆ ತೊಂದರೆಯಾಗುತ್ತದೆಂದು ಹೇಳಿ ಒಂದು ವಾದವನ್ನಿಟ್ಟಿದ್ದಾರೆ. ಆ ವಾದದ ಅರ್ಥ ನನಗಂತೂ ಆಗುವುದಿಲ್ಲ. ಬಸ್ಸಿನಲ್ಲಿ ಬಡವರು ಹೆಚ್ಚಾಗಿ ಪ್ರಯಾಣ ಮಾಡುತ್ತಾರೆಯೇ, ಶ್ರೀಮಂತರು ಹೆಚ್ಚಾಗಿ ಪ್ರಯಾಣಮಾಡುತ್ತಾರೆಯೇ? ಸಾಮಾನ್ಯ ರೈತರಲ್ಲಿ ನೂರಕ್ಕೆ 10 ಕ್ಕಿಂತಲೂ ಜಾಸ್ತಿ ಜನ ಬಸ್ಸಿನಲ್ಲಿ ಪ್ರಯಾಣಮಾಡುವುದಿಲ್ಲ. ಶೇಕಡ 75 ಜನ ಪ್ರಯಾಣಿಕರು ಬಡಜನರಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯ ಅನುಭವದಿಂದ ನಾನು ಹೇಳುತ್ತಿದ್ದೇನೆ. ಅಲ್ಲೂ ಬೇಕಾದಷ್ಟು ರೈತರಿದ್ದಾರೆ. ನಾನು ಮೊದಲೇ ಹೇಳಿದಹಾಗೆ, ಬಹುಮಟ್ಟಿಗೆ ಇದು ಶ್ರೀಮಂತರಮೇಲೆಯೇ ಬೀಳುತ್ತದೆ. ನಾನದಕ್ಕೇ 'ಬಹುಮಟ್ಟಿಗೆ' ಎಂಬ ಪದವನ್ನು ಉಪಯೋಗಿಸಿದ್ದೇನೆ.

ಶ್ರೀ ಇಮಾಂಸಾಹೇಬರು ತತ್ವದ ಮೇಲೆ ಈ ತೆರಿಗೆಯನ್ನು ವಿರೋಧಿಸುತ್ತೇವೆಂದು ಹೇಳಿದರು. ಅದಾವ ತತ್ವವೋ ಅವರದು, ನನಗರ್ಥವಾಗುವುದಿಲ್ಲ. ನೀರಾವರಿ ಯೋಜನೆಗಳ ಪ್ರಶ್ನೆ ಬಂದಾಗ ನೀರಾವರಿ ಯೋಜನೆಗೆ ಹೆಚ್ಚು ಹಣ ಖರ್ಚುಮಾಡಬೇಕೆಂದು ತಾವೇ ಹೇಳುತ್ತಾರೆ, ಕೆರೆ ಜೀರ್ಣೋದ್ಧಾರದ ಪ್ರಶ್ನೆ ಬಂದಾಗ ಹೆಚ್ಚು ಕೆರೆಗಳನ್ನು ಜೀರ್ಣೋದ್ಧಾರಮಾಡಬೇಕೆಂದೂ ತಾವೇ ಹೇಳುತ್ತಾರೆ. ರಸ್ತೆಗಳ ಪ್ರಶ್ನೆ ಬಂದಾಗಲೂ, ರಸ್ತೆಗಳೆಲ್ಲಾ ಕೆಟ್ಟುಹೋಗಿವೆ, ಎಲ್ಲ ರಸ್ತೆಗಳನ್ನೂ ಚೆನ್ನಾಗಿಟ್ಟಿರಬೇಕು. ಚೆನ್ನಾಗಿಟ್ಟಿರುವುದೊಂದೇ ಅಲ್ಲ, ಅದನ್ನು ಕಾಂಕ್ರೀಟ್ ಮಾಡಿಸಬೇಕು. ಮೈಲಿಗೆ 60-70 ಸಾವಿರ ರೂಪಾಯಿಗಳೇ ಆದರೂ ಖರ್ಚುಮಾಡಬೇಕು ಎಂದು ಅದೇ ಸದಸ್ಯರು ವಾದಿಸುತ್ತಾರೆ.

Mr. SPEAKER.—Not even tar road!

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಕಾಂಕ್ರೀಟ್ ರಸ್ತೆಗಳೇ ಆಗಬೇಕಂತೆ! ಸ್ಕೂಲಿನ ಪ್ರಶ್ನೆ ಬಂದಾಗ ಸ್ಕೂಲು ಕಟ್ಟಡಗಳು ಸಾಲದು, ಹೆಚ್ಚು ಹೆಚ್ಚು ಸ್ಕೂಲು ಕಟ್ಟಡಗಳನ್ನು ಕಟ್ಟಿಸಬೇಕೆಂದು ಅವರೇ ವಾದಮಾಡುತ್ತಾರೆ; ಆಸ್ಪತ್ರೆಗಳ ವಿಷಯ ಎತ್ತಿದರೆ, ನಮ್ಮ ಆಸ್ಪತ್ರೆಗಳಲ್ಲಿ ಸೌಕರ್ಯಗಳು ಸಾಲದು ಹೆಚ್ಚು ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು ಎಂಬ ಮನವಿಯೂ ಅವರದೇ; ಲಿಫ್ಟ್ ಇರಿಗೇಷನ್ ವಿಷಯದಲ್ಲಂತೂ ಮೈಸೂರು ಸಂಸ್ಥಾನದಲ್ಲಿ ಎಲ್ಲಾ ಹಳ್ಳಿಗಳಿಗೂ ಕೂಡ ವಿದ್ಯುಚ್ಛಕ್ತಿಯ ಸೌಲಭ್ಯ ಲಭಿಸುವಂತಾಗಬೇಕು, ನೀರಾವರಿ ಸೌಕರ್ಯಕ್ಕೆ ವಿದ್ಯುಚ್ಛಕ್ತಿಯನ್ನು ಪ್ರತಿಯೊಂದು ಹಳ್ಳಿಗೂ ಒದಗಿಸಬೇಕೆಂದು ಉಜ್ವಲವಾಗಿ ಭಾಷಣ ಮಾಡುತ್ತಾರೆ. ಕ್ಷಾಮ ನಿವಾರಣಾ ವಿಚಾರ ಬಂದಾಗಲಂತೂ ಒಂದೊಂದು ತಾಲ್ಲೂಕಿಗೂ ಒಂದೊಂದು ಜಿಲ್ಲೆಗೂ ಪೈಪೋಟಿ!! ಕಮ್ಯೂನಿಟಿ ಪ್ರಾಜೆಕ್ಟ್‌ನ್ನೂ ಕೇಳದೆ ಬಿಡುವವರಿಲ್ಲ. ಮೊನ್ನೆ ತಾನೆ ನಾನು ವಿನಯಪೂರ್ವಕವಾಗಿ ಅರಿಕೆಮಾಡಿಕೊಂಡಿದ್ದೇನೆ, ನನಗೆ ಯಕ್ಷಿಣಿ ವಿದ್ಯೆಯಾಗಲಿ, ಮಂತ್ರ ಮಾಡುವುದಕ್ಕಾಗಲಿ ಬರುವುದಿಲ್ಲ ಎಂದು.

ಒಬ್ಬ ಸದಸ್ಯರು.—ಬಾಯಲ್ಲೇ ಹೇಳುತ್ತಿದ್ದೀರಲ್ಲಾ!!

ಶ್ರೀ ಕಡಿದಾಳ್ ಮಂಜಪ್ಪ.—ಬಾಯಲ್ಲಿ ಹೇಳುವವರು ತಾವು! ಬಾಯಲ್ಲಿ ಹೇಳುವುದೊಂದು, ಕಾರ್ಯತಃ ಮಾಡುವುದೊಂದು ನಿಮ್ಮದು. ಉದ್ದುದ್ದವಾಗಿ ಭಾಷಣ ಮಾಡುವುದಕ್ಕೂ, Administration treatise ಓದುವುದಕ್ಕೂ Administration ನಡೆಸುವುದಕ್ಕೂ ವ್ಯತ್ಯಾಸವಿದೆ. Administration, as a few of the Hon'ble Members know, requires some other qualities apart from these two.

ಶ್ರೀ ಎಸ್. ಗೋಪಾಲಗೌಡ.—ನಿಮ್ಮಲ್ಲಿ ಯಾರಾರಿಗೆ ಈಗ ಆ quality ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಬೇಕಾದರೆ ಅದೆಲ್ಲಕ್ಕೂ ಉತ್ತರ ಕೊಡುತ್ತೇನೆ. ಆದರೆ ಕಾಲ ಸಾಲದು.

ಆ ಮೇಲೆ ಈ ಐದು ವರ್ಷಗಳಲ್ಲಿ ಜನತೆಯ ಜೀವನದ ಅಂತಸ್ತನ್ನು ಉತ್ತಮ ಪಡಿಸಿದ್ದೀರಾ ಎಂದು ಶ್ರೀ ಇಮಾಂ ಸಾಹೇಬರ ಸವಾಲು. ತಾವು ಅಧಿಕಾರದಿಂದ ನಿವೃತ್ತರಾಗುವ ವೇಳೆಗೆ ಎಷ್ಟು ಸ್ಕೂಲುಗಳಿದ್ದುವು, ಎಷ್ಟು ಕಾಲೇಜುಗಳಿದ್ದುವು, ಎಷ್ಟು ಆಸ್ಪತ್ರೆಗಳಿದ್ದುವು, ಎಷ್ಟು ರಸ್ತೆಗಳಾಗಿದ್ದುವು, ಎಷ್ಟು ಸಿಮೆಂಟ್ ಕಾಂಕ್ರೀಟ್ ರಸ್ತೆಗಳಿದ್ದುವು, ಎಷ್ಟು ನೀರಾವರಿ ಯೋಜನೆಗಳಿದ್ದುವು! ಈಗ ಎಷ್ಟೆಷ್ಟಿವೆಯೆಂಬುದನ್ನು ನಾವು ಹೇಳಬೇಕಾಗಿಲ್ಲ. ಅಂಕಿ ಅಂಶಗಳಿವೆ. ತಾವೇ ನೋಡಿಕೊಳ್ಳಬಹುದು. ಇವೆಲ್ಲವೂ ಜನರ ಜೀವನದ ಅಂತಸ್ತನ್ನು ಉತ್ತಮಮಾಡದೆ ನಿರ್ಜೀವವನ್ನಾಗಿ ಮಾಡುತ್ತವೆಯೇ ಎಂದು ಕೇಳುತ್ತೇನೆ. ದೇಶದ ಸಾರ್ವತ್ರಿಕ ಸಂಪತ್ತು ಜಾಸ್ತಿಯಾದರೆ ವ್ಯಕ್ತಿಯೂ ಉನ್ನತ ಸ್ಥಿತಿಗೆ ಬರುತ್ತಾನೆ, ಅವನ ಜೀವನದ ಅಂತಸ್ತೂ ಉತ್ತಮವಾಗುತ್ತದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಮೊದಲು ವಾರಕ್ಕೆ ಒಂದು ದಿವಸ ಉಪವಾಸಮಾಡುತ್ತಿದ್ದರು, ಈಗ ವಾರಕ್ಕೆ ಮೂರು ದಿವಸ ಉಪವಾಸವಿರುವಂತೆ ಮಾಡಿದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಆ ಕಡೆಯಿಂದ ಮಾನ್ಯ ಸದಸ್ಯರು ಮಾತನಾಡಬೇಕಾದರೆ, ಬಡವರ ಮೇಲಿನ ಮಮತೆಯೆಂಬುದು ತಮಗೇ ಜಹಗೀರಾಗಿರುವಂತೆ ತಿಳಿದುಕೊಂಡಿದ್ದಾರೆ. ನಮಗೂ ಮಮತೆಯಿದೆ; ನಾನೇನೂ ಆಗರ್ಭಶ್ರೀಮಂತನಲ್ಲ, ಮೊನ್ನೆಯಾರನ್ನೋ ಕೇಳಿದ ಹಾಗೆ ಬಾಯಲ್ಲಿ ಬೆಳ್ಳಿಯ ಚಮಚ ಇಟ್ಟುಕೊಂಡು ಹುಟ್ಟಿದವನಲ್ಲ:

Sri Mulka GOVINDA REDDY.—But you have become tools.

Sri Kadidal MANJAPPA.—You need not teach political philosophy. We had understood political philosophy before we entered politics.

ಬಡವರ ಕಷ್ಟಸುಖಗಳನ್ನು ತಮಗಿಂತ ಚೆನ್ನಾಗಿ ತಿಳಿದುಕೊಂಡಿದ್ದೇವೆ. ಸ್ವಂತ ಅನುಭವದಿಂದ ಎಂದು, ಶ್ರೀ ಇಮಾಂ ಸಾಹೇಬರು ಬಡವರ ವಿಚಾರ ಏನೋ ಹೇಳಿದರು. ನಾನಾದರೋ ಬಡತನವನ್ನು ವೈಯುಕ್ತಿಕವಾಗಿ ಅನುಭವಿಸಿದ್ದೇನೆ.

ಶ್ರೀ ಮಹಮದ್ ಇಮಾಂ.—ನಮಗೆ ಅನುಮಾನ!

ಶ್ರೀ ಕಡಿದಾಳ್ ಮಂಜಪ್ಪ.—'ಬಡವರಿಗೆ fresh amenities ಕೊಡುವಹಾಗಿದ್ದರೆ, ದೇಶಾಭ್ಯುದಯ ಕಾಮಗಾರಿಗಳಿಗಾಗಿದ್ದರೆ, ದೇಶಕ್ಕೆ ಪ್ರಯೋಜನವಾಗುವ ಹಾಗಿದ್ದರೆ ಇದಕ್ಕೆ ಒಪ್ಪಿಗೆ ಕೊಡುತ್ತಿದ್ದೆವು ಎಂದು ಹೇಳಿದರು. ತುಂಗಾನದಿಗೆ ಅಣೆಕಟ್ಟು ಹಾಕಿದ್ದೇವೆ. ನುಗು ನದಿಗೆ ಹಾಕಿದ್ದೇವೆ, ಇವೆಲ್ಲ ಏಕೆ! ಅದನ್ನೆಲ್ಲಾ ಮಾಡಿ ಹೊಳೆಗೆ ಹಾಕುತ್ತೇವೆಯೆ? ಬಡವರ ಉದ್ಧಾರಕ್ಕಲ್ಲವೆ! ದೇಶಾಭ್ಯುದಯವಾಗುವುದಿಲ್ಲವೇ ಇವುಗಳಿಂದ!

ಶ್ರೀ ಇಮಾಂರವರು ಸೇಲ್ಸ್‌ಟ್ಯಾಕ್ಸು ಮತ್ತು ಪ್ರೊಹಿಬಿಷನ್ ವಿಚಾರ ಪ್ರಸ್ತಾಪಿಸಿದರು. ಮಾನ್ಯ ಸ್ನೇಹಿತರು ಪಾನನಿರೋಧ ಸಮಿತಿಯ ಅಧ್ಯಕ್ಷರಾಗಿ ಅವರೇನು ವರದಿಮಾಡಿದ್ದರೆಂಬುದನ್ನು ನೋಡಿದರೆಯೇ ಗೊತ್ತಾಗುತ್ತದೆ: ವರ್ಷಕ್ಕೆ ಶೇಕಡ 20ರಷ್ಟು ಅಂಗಡಿಗಳನ್ನು ಕಡಮೆಮಾಡಿ 5 ವರ್ಷದಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆತರಬೇಕೆಂದು ಅವರ ವರದಿಯಲ್ಲಿ ಹೇಳಿದ್ದಾರೆ. ಇದರಿಂದ ಉಂಟಾಗತಕ್ಕ ನಷ್ಟವನ್ನು ಭರ್ತಿಮಾಡಿಕೊಳ್ಳಲಿಕ್ಕೆ ಸೇಲ್ಸ್‌ಟ್ಯಾಕ್ಸ್ ಹಾಕಬೇಕೆಂದು ಅವರೇ ಹೇಳಿದ್ದಾರೆ. ಅದರ ಜೊತೆಗೆ ಬಸ್ ಸರ್ವಿಸ್‌ಗಳನ್ನು ಹೊಟೇಲ್‌ಗಳನ್ನು ಹರಾಜುಮಾಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದ ಹಾಗೆ ನನಗೆ ಜ್ಞಾಪಕವಿದೆ.

ಶ್ರೀ ಜೆ. ಮಹಮದ್ ಇಮಾಂ.—Nationalise ಮಾಡಬೇಕೆಂದು ಹೇಳಿದ್ದೇವೆ.

ಶ್ರೀ ಕಡಿದಾಳ್ ಮಂಜಪ್ಪ.—ಈಗಲೂ ನೀವು ಹೇಳಿದಂತೆ Nationalise ಮಾಡವುದನ್ನು ಲಾ-ಸೆಕ್ರಿಟೇರಿಯೇಟ್‌ನವರು ಯೋಚನೆ ಮಾಡುತ್ತಿದ್ದಾರೆ.

ಆಮೇಲೆ ಈ ತೆರಿಗೆಯನ್ನು 'A drop in the ocean' ಎಂದು ಹೇಳಿದರು. "It is these drops that make the ocean" ಎಂಬುದನ್ನು ಮಾನ್ಯ ಮಿತ್ರರು ತಿಳಿಯಲಿ.

ಆಮೇಲೆ, ನಾವು ಸಹಕಾರಹಸ್ತವನ್ನು ನೀಡುವುದಕ್ಕೆ ಸಿದ್ಧರಾಗಿದ್ದೇವೆ, ತಾವು ತಿರಸ್ಕಾರಮಾಡುತ್ತಿದ್ದೀರಿ ಎಂದು ನಿರೂಪಿಸಿದರು. ನಾವು ತಿರಸ್ಕಾರ ಮಾಡಿಲ್ಲ. ಮೊನ್ನೆ ಕೇಂದ್ರ ಸರ್ಕಾರದವರು ಒಂದು ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಟಿ ಎಂಬುದನ್ನು ಸ್ಥಾಪನೆ ಮಾಡಿದ್ದಾರೆ. ಅವರು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನೂ ಕೂಡ ಪರಿಶೀಲಿಸುತ್ತಾರೆಂದು ಹೇಳಿದ್ದಾರೆ. ಆ ವಿಚಾರದಲ್ಲಿ ಸರ್ಕಾರದ ಅಭಿಪ್ರಾಯವೇನೆಂಬುದನ್ನು ಮುಖ್ಯಮಂತ್ರಿಗಳು ತಿಳಿಸುತ್ತಾರೆ.

"ಈ ಸರ್ಕಾರ ಖರ್ಚನ್ನು ಕಡಮೆಮಾಡುತ್ತಾರೆಂಬ ಭರವಸೆ ನಮಗುಂಟಾಗಿಲ್ಲ, ಆದ್ದರಿಂದ ನಾವು ಇದಕ್ಕೆ ಒಪ್ಪಿಗೆಕೊಡುವುದಕ್ಕಾಗುವುದಿಲ್ಲವೆಂದು" ಹೇಳಿದರು. ಪ್ರತಿ ನಿಮಿಷದಲ್ಲೂ ಕೂಡ ಖರ್ಚನ್ನು ಕಡಮೆಮಾಡತಕ್ಕ ಆಲೋಚನೆಯನ್ನೇ ನಾವು ಮಾಡುತ್ತಿದ್ದೇವೆ. ಆಡಳಿತ ಬಾಬಿನಲ್ಲಿ ಸಿಬ್ಬಂದಿಗಳಿಗಾಗಿ ಎಷ್ಟು ಖರ್ಚಾಗುತ್ತಿದೆ, ಇತರ ಕೆಲಸಕಾರ್ಯಗಳಿಗೆ ಎಷ್ಟು ಖರ್ಚಾಗುತ್ತಿದೆಯೆಂದು ತಾವು ನೋಡಬೇಕು. ಪಬ್ಲಿಕ್‌ವರ್ಕ್ಸ್ ಇಲಾಖೆಯೊಂದನ್ನೇ ಉದಾಹರಣೆಯಾಗಿ ಕೊಡುವುದಾದರೆ, ಮೈಸೂರು ಸಂಸ್ಥಾನದಲ್ಲಿ ಈ ಇಲಾಖೆಗೆ ಶೇಕಡ 8ರಷ್ಟು ಮಾತ್ರ ಖರ್ಚಾಗುತ್ತಿದೆ. ಬಾಕಿ ಸಂಸ್ಥಾನಗಳಲ್ಲಿ ಎಷ್ಟಿದೆಯೆಂಬುದನ್ನು ತಾವೇ ನೋಡಿ. ಒಂದು ಕಡೆ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚಾಗಿ ಮಾಡಿಕೊಳ್ಳಬೇಕೆಂದು ತಾವೇ ಅಪ್ಪಣೆಮಾಡುತ್ತಿದ್ದೀರಿ. ಖರ್ಚು ಕಡಮೆಮಾಡಬೇಕೆಂದರೆ, ನೀರಾವರಿ ಯೋಜನೆಗಳನ್ನು ನಿಲ್ಲಿಸುವುದಕ್ಕೂ ಆಗುವುದಿಲ್ಲ; ಆಸ್ಪತ್ರೆಗಳನ್ನು ಮುಚ್ಚುವುದಕ್ಕೂ ಆಗುವುದಿಲ್ಲ; ಸ್ಕೂಲುಗಳನ್ನೂ ಮುಚ್ಚುವುದಕ್ಕೂ ಆಗುವುದಿಲ್ಲ: ಪೋಲೀಸ್ ಇಲಾಖೆಯನ್ನು ರದ್ದುಮಾಡುವುದಕ್ಕಾಗುವುದಿಲ್ಲ. $8\frac{1}{4}$ ಕೋಟಿ ರೂಪಾಯಿಗಳು ಸಂಬಳಕ್ಕೆ ಖರ್ಚಾಗುತ್ತಿದೆ! ಈ ಯಂತ್ರ ನಿರ್ಮಾಣಮಾಡಿದವರು ಕಾಂಗ್ರೆಸ್ ಸರ್ಕಾರವಲ್ಲ. ಕಾಂಗ್ರೆಸ್ ಸರ್ಕಾರ ಬರುವುದಕ್ಕಿಂತಲೂ ಮುಂಚಿತವಾಗಿ ತಮ್ಮ ಕಾಲದಿಂದಲೂ ಬಂದಿದೆ. ರಿಟ್ರೆಂಚ್ ಮಾಡಿ ಎಂದು ಹೇಳುತ್ತೀರಿ. ರಿಟ್ರೆಂಚ್‌ಮಾಡಿದ ಕೂಡಲೆ ನಿರುದ್ಯೋಗ ಸಮಸ್ಯೆ! ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಇಂದು ಹೇಳಿದ ಹಾಗೆ, ಸಾವಿರಾರು ಜನರನ್ನು ರಿಟ್ರೆಂಚ್‌ಮಾಡಿ ಕೆಲಸವಿಲ್ಲದ ಹಾಗೆ ಮಾಡಿದ್ದಾರೆಂದು ಅವರೇ ಆಕ್ಷೇಪಿಸುತ್ತಾರೆ. ಆದ್ದರಿಂದ ರಿಟ್ರೆಂಚ್ ಮಾಡಕೂಡದು, ಆಗತಕ್ಕ ಉಪಯೋಗಗಳೆಲ್ಲಾ ಆಗಬೇಕು, ತೆರಿಗೆ ಹಾಕಬಾರದು, ಖರ್ಚನ್ನು ಕಡಮೆಮಾಡಬೇಕು ಎಂದು ಹೇಳುತ್ತಿದ್ದಾರೆ!!

ಶ್ರೀ ಎಸ್. ಗೋಪಾಲಗೌಡ.—ಅದಕ್ಕೇ ಕಮಿಟಿ ಮಾಡಿ. ನಮ್ಮ ಮಾತಿಗೆಲ್ಲಾ ತಾವು ತಪ್ಪು ಅರ್ಥ ಕಲ್ಪಿಸುತ್ತಿದ್ದೀರಿ!

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಗೋಪಾಲ ಗೌಡರು ಮಾತನಾಡುತ್ತಾ "ನೀವು ಬರೀ ಯೋಜನೆ ಗಳನ್ನು ಹಾಕುವುದರಲ್ಲೇ ನಿರತರಾಗಿದ್ದೀರಿ ಯಾವ ಯೋಜನೆಯೂ ಕಾರ್ಯಗತವಾಗಿಲ್ಲ" ಎಂದು ಹೇಳಿದರು. ಸರ್ಕಾರದವರು ಅವರಿಗೆ ಒದಗಿಸಿರತಕ್ಕ ಅಂಕಿಅಂಶ ಗಳನ್ನು ಸ್ವಲ್ಪ ಶ್ರಮ ತೆಗೆದುಕೊಂಡು ಅವರು ನೋಡಿ ದ್ದರೆ, ಎಷ್ಟು ಮಟ್ಟಿಗೆ ಕಾರ್ಯಗತವಾಗಿದೆಯೆಂಬುದು ಸ್ಪಷ್ಟವಾಗುತ್ತಿತ್ತು.

ಆ ಮೇಲೆ 'ಬಡವರ ಮೇಲೆ ತೆರಿಗೆ ಹಾಕುವುದನ್ನು ಯೋಚನೆ ಮಾಡುತ್ತೀರೇ ಹೊರತು ಕೋಟಿಗಟ್ಟಲೆ ಹಣ ಸಿಕ್ಕುವ ಅವಕಾಶಗಳಿವೆ, ಆ ಕಡೆಗೆ ನಿಮ್ಮ ಗಮನ ಬೀಳಲಿಲ್ಲ' ಎಂದು ಹೇಳಿದರು. ಶ್ರೀಮಂತರ ಮೇಲೆ ಹೆಚ್ಚಿಗೆ ತೆರಿಗೆ ಬೀಳಬೇಕೆಂಬುದರಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಅದನ್ನೀಗ ಮಾಡುತ್ತಲೇ ಇದ್ದೇವೆ. ಪೆಟ್ರೋಲ್ ತೆರಿಗೆ ಶ್ರೀಮಂತರ ಮೇಲೆ ಹೆಚ್ಚಿಗೆ ಬೀಳ ತಕ್ಕ ತೆರಿಗೆ. ಅವರು ಶ್ರೀಮಂತರ ಮೇಲೆ ಮಾತ್ರ ಬೀಳು ವುದು ಯಾವ ತೆರಿಗೆ ಎಂದು ಸ್ಪಷ್ಟವಾಗಿ ಹೇಳಿದ್ದರೆ ಒಪ್ಪಬಹುದಾಗಿತ್ತು. ಹಾಗಿಲ್ಲದೆ, ನಮ್ಮನೆ ಅಲ್ಲಿ ಗಣಿ ಇದೆ, ದ್ರವ್ಯವಿದೆ ಎಂದು ಹೇಳುತ್ತಾರೆ, ಎಲ್ಲಿದೆ ತೋರಿಸಿ ಎಂದರೆ ಮಾತ್ರ ತೋರಿಸುವುದಿಲ್ಲ. ಇದರಿಂದೇನು ಪ್ರಯೋಜನ? ನಮ್ಮ ಆರ್ಥಿಕ ನೀತಿ ಸರಿಯಾಗಿಲ್ಲವೆಂದು ಹೇಳಿದರು. ಇತರ ಎಲ್ಲಾ ಸೋಷಿಯಲಿಸ್ಟಿಕ್ ಸಂಸ್ಥಾನ ಗಳಲ್ಲಿ ಯಾವ ನೀತಿಯನ್ನನುಸರಿಸಿಕೊಂಡು ಬರುತ್ತಿ ದ್ದಾರೋ ಅದೇ ನೀತಿಯನ್ನು ಇಂಡಿಯಾ ಸರ್ಕಾರ ದವರೂ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಇಂಗ್ಲೆಂಡು ಮತ್ತು ಬಾಕಿ ಸೋಷಿಯಲಿಸ್ಟಿಕ್ ದೇಶಗ ಳಲ್ಲಿಯೂ ಚಕ್ಕು ಕಡಮೆ ಇದೇ ನೀತಿಯನ್ನವಲಂಬಿಸಿ ಕೊಂಡು ಬರುತ್ತಿದ್ದಾರೆ.

ಟ್ರಾಕ್ಟರ್ ಆರ್ಗನೈಸೇಷನ್ ವಿಚಾರದಲ್ಲಿ. ಪ್ರಸ್ತಾಪ ಮಾಡಿದರು. ಇದನ್ನೇನೂ ನಾವು ಹೊಸದಾಗಿ ಸ್ಥಾಪನೆ ಮಾಡಲಿಲ್ಲ. ಪ್ರತಿಪಕ್ಷದ ಮುಖಂಡರ ಕಾಲ ದಲ್ಲಿ ಇದು ಬಂದಿದ್ದುದು, ನಾವು ಮಾಡಿದ್ದಲ್ಲ. It is a legacy handad down to us. ಟ್ರಾಕ್ಟರ್ ಆರ್ಗನೈಸೇಷನ್‌ಗೆ ಆಗತಕ್ಕ ಖರ್ಚನ್ನು ಕಡಮೆಮಾಡು ವುದಕ್ಕೆ ಸಿದ್ಧವಾಗಿದ್ದೇವೆ. ಇನ್ನಾವಾವ ಬಾಬಿನಲ್ಲಿ ಖರ್ಚು ಕಡಮೆ ಮಾಡಬಹುದೋ ಅದಕ್ಕೂ ಸಿದ್ಧವಾಗಿದ್ದೇವೆ. ಆದುದರಿಂದ ಎದುರು ಪಕ್ಷದ ವಾದದಲ್ಲಿ ಅಷ್ಟೊಂದು ತಿರುಳಿಲ್ಲ. ನನ್ನ ಭಾಷಣವನ್ನು ಕೇಳಿದ ಮೇಲೆ ಅವರು ತಮ್ಮ ನಿರ್ಧಾರವನ್ನು ಬದಲಾಯಿಸಿ ಈ ಮಸೂದೆಗೆ ಬೆಂಬಲ ಕೊಡುತ್ತಾರೆ ಎಂದು ನಂಬಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ತೆರಿಗೆ ಮಸೂದೆಯನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುತ್ತೇನೆ. ಈಗಾಗಲೇ ನನ್ನ ಮಿತ್ರರು ಇದರಲ್ಲಿರುವ ಅಂಶಗಳನ್ನು ವಿಶದೀಕರಿಸಿ ಹೇಳಿದ್ದಾರೆ. ಅವರು ಹೇಳಿದುದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಶ್ರೀ ಪಟ್ಟಾಭಿರಾಮಯ್ಯರವರು ಹೇಳಿದ ಹಾಗೆ, ಒಂದು ರಚನಾತ್ಮಕ ದೃಷ್ಟಿಯಿಂದ ನಾವು ಹೇಳುತ್ತಿದ್ದೇವೆಯೇ ಹೊರತು ಬರಿಯ ವಿರೋಧ ಮಾಡಬೇಕೆಂಬ ದೃಷ್ಟಿಯಿಂದ ವಿರೋಧ ಮಾಡುತ್ತಿಲ್ಲ. ನಿಜವಾಗಿಯೂ ಈ ತೆರಿಗೆಯು ಅವಶ್ಯಕತೆಯಿದೆಯೇ, ಇದು ಸರಿಯೇ, ಇಷ್ಟು ತೆರಿಗೆ ವಿಧಿಸಬೇಕಾದ ಕಾರಣ ವಿದೆಯೇ, ಎನ್ನುವ ದೃಷ್ಟಿಯಿಂದ ಮಾತನಾಡುತ್ತೇನೆ. ಮಾನ್ಯ ಸಚಿವರು ಮಾತನಾಡಿದ ಮೇಲೆ ನನ್ನ ಅಭಿ ಪ್ರಾಯವನ್ನು ಬದಲಾಯಿಸುವುದಕ್ಕೆ ಬದಲಾಗಿ ಇದನ್ನು ವಿರೋಧಿಸಲು ಇನ್ನೂ ತೀವ್ರತೆ ಬರುತ್ತಿದೆ. ಮುಖ್ಯ ವಾಗಿ ಈ ತೆರಿಗೆಯನ್ನು ಏಕೆ ಯಾರ ಮೇಲೆ ವಿಧಿಸಿ ದ್ದಾರೆ? ಬಡವರ ಮೇಲಲ್ಲವೆಂದು ಅವರು ಹೇಳುತ್ತಾರೆ. ಯಾವ ದೇಶವೇ ಆಗಲಿ ಎಲ್ಲಿ ಸಂಚಾರ ಸೌಕರ್ಯ ಹೆಚ್ಚಾಗಿರುತ್ತದೆಯೋ ಆ ದೇಶ ಮುಂದಕ್ಕೆ ಬರುತ್ತದೆ, ಇಲ್ಲದಿದ್ದರೆ ಬರುವುದಿಲ್ಲ. ಅಮೇರಿಕಾದೇಶದಲ್ಲಿ ಹೆಚ್ಚು ಸಂಚಾರಸೌಕರ್ಯವಿರುವುದರಿಂದ ಅದು ಅಷ್ಟು ಅಭಿ ವೃದ್ಧಿಗೆ ಬಂದಿದೆ. ಯಾವ ದೇಶದಲ್ಲಿ ಇಷ್ಟು ಪೆಟ್ರೋಲ್ ತೆರಿಗೆಯಿದೆ? ಈ ಎರಡಾಣೆ ಹೆಚ್ಚು ಹಾಕಿದರೆ ಇನ್ನೆಲ್ಲೂ ಇಲ್ಲದಿರುವಷ್ಟಾಗುತ್ತದೆ. ಪಾಕಿಸ್ಥಾನದಲ್ಲಿ ಎಲ್ಲ ಕ್ಕಿಂತಲೂ ಪೆಟ್ರೋಲ್ ಬೆಲೆ ಜಾಸ್ತಿ. ಗ್ಯಾಲನ್‌ಗೆ ರೂ. 3-3-0 ಇದೆ. ಈ ತೆರಿಗೆ ಹಾಕಿದ ಮೇಲೆ ಚಿತ್ರದುರ್ಗದಲ್ಲೂ ರೂ. 3-4-0 ಆಗುತ್ತದೆ. ಬೇಕಾದರೆ ಇತರ ದೇಶಗಳಲ್ಲಿ ಎಷ್ಟೆಷ್ಟಿದೆಯೆಂಬ ಅಂಕಿಅಂಶಗಳನ್ನು ಕೊಡುತ್ತೇನೆ. ಪಾಕಿಸ್ಥಾನದಲ್ಲಿ ವಿನಾ ಇನ್ನೆಲ್ಲೂ ಇಷ್ಟು ತೆರಿಗೆಯಿಲ್ಲ. ಇತರ ಕೆಲವು ದೇಶಗಳಲ್ಲಿ ಇದರ ಅರ್ಧದಷ್ಟು ಬೆಲೆಯಿದೆ ಪೆಟ್ರೋಲಿಗೆ. ಈ ಮಸೂದೆ ಯನ್ನು ನಮ್ಮ ಪ್ರಗತಿಯನ್ನು ಮೊಟಕುಮಾಡುವುದಕ್ಕೆ ತಂದಹಾಗಿದೆ. ಮೋಟಾರು ಬಸ್ಸುಗಳಲ್ಲಿ ದೊಡ್ಡ ದೊಡ್ಡವರು ಹೋಗುತ್ತಾರೆಂದು ಮಂತ್ರಿಗಳು ಹೇಳಿ ದರು. ಶೇಕಡ 25ರಷ್ಟು ಜನರು ಕೂಡ ಹೋಗುವುದಿಲ್ಲ ವೆಂದು ಹೇಳಿದರು. ಮರಾಮತ್ ಮಂತ್ರಿಗಳೇ ಹೀಗೆ ಹೇಳಿದರೆ, ನಮ್ಮ ದೇಶದಲ್ಲಿ ಜನರು ಹೊರಗೇ ಹೋಗು ವುದಿಲ್ಲ. ಶಿವಮೊಗ್ಗ ಜಿಲ್ಲೆ ಹಿಂದೆ ಹೇಗಿತ್ತು. ಈಗ ಹೇಗಿದೆ. ಹೀಗಾದರೆ ಇನ್ನು ಹತ್ತು ವರ್ಷಗಳಲ್ಲಿ ಇನ್ನೂ ಹಿಂದೆ ಹೋಗುತ್ತದೆ. ಈ ರೀತಿಯ ಮಂತ್ರಿಮಂಡಲ ವಿದ್ದರೆ ನಮ್ಮ ದೇಶವನ್ನು ದೇವರೇ ಕಾಪಾಡಬೇಕು. ಕಂದಾಯ ಸ್ವಲ್ಪಸ್ವಲ್ಪವಾಗಿ ಹೆಚ್ಚುತ್ತಿದೆ; ಆದರೆ, ನಮ್ಮ ದೇಶದ ಜನರ ಜೀವನದ ಮಟ್ಟ ಹೆಚ್ಚುತ್ತಿದೆಯೆ, ಹೊಸ ತೆರಿಗೆಯನ್ನು ಹೊರುವುದಕ್ಕೆ ಶಕ್ತಿ ಜನರಿಗಿದೆಯೆ ಎಂಬುದನ್ನು ಯೋಚನೆಮಾಡಬೇಕು. ಉದಾಹರಣೆಗೆ, ಬಸ್ಸುಗಳನ್ನು ನಾವು ರಾಷ್ಟ್ರೀಕರಣಮಾಡುತ್ತೇವೆಂದು ಮಾಡಿದರು. ಬಸ್ಸುಗಳನ್ನು ತೆಗೆದುಕೊಂಡರು. ಆರು ತಿಂಗಳಲ್ಲಿ ಶೇಕಡ 30ರಷ್ಟು ಲಾಭ ತೆಗದುಕೊಂಡಿದ್ದೇ ವೆಂದು ಹೇಳಿದರು. ಆದರೆ ಈ ಹೊತ್ತು ಏನಾಗಿದೆ! ನಿಜವಾಗಿ ಅದರಿಂದ ಅನುಕೂಲವಿದೆಯೆ? ಲೆಕ್ಕ ತೆಗೆದು ಕೊಂಡರೆ ಅದರಿಂದಾಗುತ್ತಿರುವ ನಷ್ಟವನ್ನು ನಮ್ಮ ಸಂಸ್ಥಾನದ ಜನರೇ ಅನುಭವಿಸುತ್ತಿದ್ದಾರೆ. ಕೇವಲ 25 ಸಾವಿರ ರೂಪಾಯಿ ಲಾಭ ಬಂದಿದೆ, ಮುಂದಿನ ವರ್ಷ ಇದಕ್ಕೆ ಮೂರೂವರೆಲಕ್ಷ ಖರ್ಚು ಬೇರೆ ತೋರಿಸಿ ದ್ದಾರೆ.

Mr. SPEAKER.—What is the total depreciation amount?

Sri B. HUTCHE GOWDA.—I am concerned with the profit and loss account.

ಮೂರು ವರ್ಷಗಳಲ್ಲಿ 33 ಬಸ್ಸುಗಳನ್ನು 'ಕಂಡೆಮ್' ಮಾಡಿದ್ದಾರೆ. ಇನ್‌ಕಮ್‌ಟ್ಯಾಕ್ಸ್ ಲೆಕ್ಕಹಾಕುವುದರಲ್ಲಿ ಯಾವನಾದರೂ ಖಾಸಗಿಯವನ ಹತ್ತಿರ ಒಂದು ಬಸ್ಸಿ ದ್ದರೆ ಕನಿಷ್ಠಪಕ್ಷ ಆರು ಸಾವಿರ ರೂಪಾಯಿ ಇನ್‌ಕಮ್ ಟ್ಯಾಕ್ಸ್ ಲೆಕ್ಕಕ್ಕೆ ಹಾಕುತ್ತಾರೆ. ಈ ರೀತಿ ಆರು ಸಾವಿರ ರೂಪಾಯಿಗಳಂತೆ ಲಾಭವನ್ನು ಸರ್ಕಾರ ದವರು ತೆಗೆದುಕೊಂಡಿದ್ದಾರೆಯೆ ಎಂದು ಕೇಳು ತ್ತೇನೆ. ಒಳ್ಳೆಯ ರಸ್ತೆಗಳು, ಹೈರೋಡು

ಗಳು, ಸಿಮೆಂಟ್‌ರೋಡುಗಳು, ತಾರ್‌ರೋಡುಗಳು, ಹೊಸ ಬಸ್ಸುಗಳು ಎಲ್ಲವನ್ನೂ ಮೊನಾಪಲಿ ಇಟ್ಟುಕೊಂಡು ನಡೆಸಬೇಕಾದರೇ ಹೀಗೆ ನಷ್ಟವಾಗುವುದೆಂದರೆ, ಹಳ್ಳಿಗಳ ಕಡೆಯ ರಸ್ತೆಗಳಲ್ಲಿ ಬಸ್ ಇಟ್ಟುಕೊಂಡು ಬೇರೆಯವರು ಹೇಗೆ ಲಾಭ ಸಂಪಾದನೆ ಮಾಡಬೇಕು? ನ್ಯಾಯವಾಗಿ ಇವರೇ ಎರಡರಷ್ಟು ಲಾಭ ಮಾಡಬೇಕು, ಇಷ್ಟೆಲ್ಲಾ ಅನುಕೂಲವಿದ್ದು ಇವರು ಲಾಭ ಮಾಡಿದ್ದಾರೆಯೆ? ಹಿಂದಿನ ಸರ್ಕಾರದವರು ಬಿಟ್ಟುಹೋದ 'ಲೆಗೆಸಿ' ಎಂದು ಹೇಳುತ್ತಾರೆ, ಇವರೂ ಮುಂದೆ ಬರುವ ಸರ್ಕಾರಕ್ಕೆ ಈ 'ಲೆಗೆಸಿ' ಬಿಡುವುದಕ್ಕೆ ಹೀಗೆ ಮಾಡುತ್ತಿದ್ದಾರೆಯೆ? ನಮ್ಮ ದೇಶದ ಜನರು ಇಷ್ಟು ಹೊರುವುದಕ್ಕೆ ಸಾಧ್ಯವಿಲ್ಲ. ಸಾಮಾನ್ಯವಾಗಿ ಈಗ ಯಾವ ಹಳ್ಳಿಗೆ ಹೋಗಲಿ, ಜನ ನಮ್ಮ ಊರಿಗೆ ಬಸ್ಸು ಬರುವಹಾಗೆ ಮಾಡಿ ಎಂದು ಕೇಳುತ್ತಾರೆ. ಬಸ್ಸುಗಳಲ್ಲಿ ಪ್ರಯಾಣಮಾಡುವವರು ಸಾಮಾನ್ಯವಾಗಿ ಬಡವರೇ. ಕಾರುಗಳಿಗೆ ತೆರಿಗೆಹಾಕಬೇಕೆಂದು ಉದ್ದೇಶವಿದ್ದರೆ, ಕಾರುಗಳಿಗೆ ಎಂದು ಮಾಡಲಿ. ಆದರೆ ಪೆಟ್ರೋಲಿಗೆ ಹಾಕಿದರೆ ಜನಸಾಮಾನ್ಯರಿಗೆ ಈ ತೆರಿಗೆ ಬೀಳುತ್ತದೆ. ಹಿಂದೆ ಮೈಲಿಗೆ ಆರು ಕಾಸಿದ್ದುದನ್ನು ಎಂಟು ಕಾಸು ಮಾಡಿದರು. ಇವರು ಹೀಗೆ ಮಾಡಿದ್ದರಿಂದ ಖಾಸಗಿಯ ಬಸ್ಸಿನವರೂ ಹೆಚ್ಚುಮಾಡಿದರು. ನಾಳೆ ಎಂಟು ಕಾಸಿನಿಂದ ಒಂದಾಣೆ ಮಾಡುವುದಕ್ಕೆ ಸರ್ಕಾರದ ಯೋಚನೆಯಿದೆಯೋ ಏನೊ? ಯಾಕೆ ಇಷ್ಟು ತೆರಿಗೆ ತೆರಬೇಕಾಗುತ್ತದೆ ಎಂದು ಕೇಳಿದರೆ: 'ಬೇಕಾದಷ್ಟು ಕೆರೆ, ರಸ್ತೆ, ಆಸ್ಪತ್ರೆ, ವಿದ್ಯುಚ್ಛಕ್ತಿ ಬೇಕೆಂದು ಜನ ಕೇಳುತ್ತಾರೆ, ಅದಕ್ಕೆ ಅವರು ಹೆಚ್ಚು ತೆರಿಗೆ ತೆರಬೇಕು' ಎಂದು ಉತ್ತರ ಹೇಳುತ್ತಾರೆ. ಇದರ ಜೊತೆಗೆ ಎಲ್ಲೆಲ್ಲಿ ಹಣ ವ್ಯರ್ಥವಾಗುತ್ತಿದೆ ಎಂದು ನಾವು ಹೇಳಿದ್ದೇವೆಯೋ ಅದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ಇನ್ನೂ ಮುಂದಿನ ಮಸೂದೆ ಇದೆ !

ಶ್ರೀ ಬಿ. ಹುಚ್ಚೇಗೌಡ.—ಇನ್ನು ಕೈಗಾರಿಕೆಗಳನ್ನು ನೋಡಿದರೆ, ಲಕ್ಷಾಂತರ ರೂಪಾಯಿಗಳನ್ನು ಕೈಗಾರಿಕೆಗಳ ಮೇಲೆ ಹಾಕಿದ್ದಾರೆ. ಅವುಗಳ ಆಡಳಿತದಲ್ಲಿ ದಕ್ಷತೆಯಿಲ್ಲ, ಖರ್ಚು ಹೆಚ್ಚಾಗುತ್ತಿದೆ, ಉತ್ಪತ್ತಿ ಕಡಮೆಯಾಗುತ್ತಿದೆಯೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ. ನ್ಯಾಯವಾದ ಖರ್ಚೆಂದರೆ ಕೊಡುವುದು ನ್ಯಾಯ. ಆದರೆ ಈಗ ಹಾಗಿಲ್ಲ. ಎಲ್ಲಾ ಬಾಬುಗಳಲ್ಲಿಯೂ ಖರ್ಚಾಗುತ್ತಿರುವುದರಲ್ಲಿ ಎಷ್ಟೋ ಖೋತಾ ಮಾಡಬಹುದು. ಇನ್ನೂ ಯಾವ ಯಾವ ವಿಧದಲ್ಲಿ ರಿಟ್ರೆಂಚ್ ಮಾಡಬಹುದು ಎಂದು ನೋಡಿಕೊಂಡು ಉತ್ಪತ್ತಿ ಎಲ್ಲಿ ಕಡಮೆಯಿದೆ, ಇದನ್ನು ಹೇಗೆ ಹೆಚ್ಚು ಮಾಡುವುದು ಎಂಬುದನ್ನು ನೋಡಿ, ಇದಕ್ಕೆಲ್ಲಾ ಏನು ಮಾಡಬೇಕೋ ಮಾಡಿ, ಆದರೂ ಸಾಲದೇಯಿದ್ದರೆ ಆ ಮೇಲೆ ಇಂಥಾ ಮಸೂದೆಗಳನ್ನು ತಂದರೆ ನ್ಯಾಯ. ಹಾಗಿಲ್ಲದೆ, ನಿಜವಾಗಿ ಸಾಮಾನ್ಯ ಜನರು, ಬಸ್ಸಿನಲ್ಲಿ ಪ್ರಯಾಣಮಾಡುವ ಜನರ ಮೇಲೆ ಬೀಳತಕ್ಕ ಇಂಥಾ ತೆರಿಗೆಯನ್ನು ಹೇರಿದರೆ ಹೇಗೆ? ಬಸ್ಸಿನಲ್ಲಿ ಹೋಗುವುದಕ್ಕೆ ಬದಲು ನಡೆದುಕೊಂಡು ಹೋಗಲಿ, ಎತ್ತಿನಗಾಡಿಯಲ್ಲಿ ಹೋಗಲಿ ಎಂದು ಹೇಳುವುದು ಯಾವ ನ್ಯಾಯ?

ಅಧ್ಯಕ್ಷರು.—ಒಬ್ಬ ಸದಸ್ಯರು ಹೀಗೆ ಹೇಳುತ್ತಾರೆಂದು ಅವರು ಹೇಳಿದರು, ಅಷ್ಟೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲು)—ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾಗಿದ್ದಾಗ, ಅವರ ಕಾಲದಲ್ಲಿ, ಎಷ್ಟು ಮೈಲಿ ರಸ್ತೆ ಮಾಡಿದ್ದಾರೆ, ಸರ್ಕಾರವನ್ನು ಎಷ್ಟು ಸಾರಿ ಹಣಕಾಸಿನ ಸಹಾಯ ಕೇಳಿದ್ದಾರೆ.........................

Mr. SPEAKER.—There is no time. The Member may go on.

ಶ್ರೀ ಬಿ. ಹುಚ್ಚೇಗೌಡ.—ಈಗ ಸರ್ಕಾರದವರು ಏಳೆಂಟು ಹಣಕಾಸಿನ ಬಿಲ್ಲುಗಳನ್ನು ತಂದಿದ್ದಾರೆ. ಅವುಗಳ ಸಾಧಕಬಾಧಕಗಳನ್ನು ಹೇಳಿದ್ದೇವೆ. ಪಾನನಿರೋಧದ ವಿಚಾರ ಹೇಳಿದರೆ, ಹಿಂದಿನ ಸರ್ಕಾರಗಳಿದ್ದಾಗ ಮಾಡಿದ್ದು ಎಂದು ಹೇಳುತ್ತಾರೆ. ಸೇಲ್ಸ್ ಟ್ಯಾಕ್ಸ್ ಕೂಡ ಅವರೇ ಪ್ರಾರಂಭ ಮಾಡಿದ್ದು ಎಂದು ಹೇಳುತ್ತಾರೆ. ಅವರೇನು ಆ ಹಣವನ್ನು ತೆಗೆದುಕೊಳ್ಳಿ, ಈ ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿದರೇ? ಎಕ್ಸೈಜು ರೆವಿನ್ಯೂ ಕಡಮೆ ಬಂದಿಲ್ಲ, ಆದರೂ ಇದರ ಜೊತೆಗೆ ಸೇಲ್ಸ್ ಟ್ಯಾಕ್ಸೂ ಹಾಕಿದರು. ಸೆಂಟ್ರಲ್ ಎಕ್ಸೈಜಿಗೆ ಹೋಗಿರುವ ಬಾಬುಗಳಿಂದ ಮೊದಲು ರೆವಿನ್ಯೂ ಸುಮಾರು 38-40 ಲಕ್ಷ ರೂಪಾಯಿ ಇತ್ತು; ಈ ಹೊತ್ತು ನಾಲ್ಕು ಕೋಟಿ ರೂಪಾಯಿ ಆಗುತ್ತಿದೆ. ಇನ್‌ಕಂಟ್ಯಾಕ್ಸ್ ಹೆಚ್ಚಾಗಿದೆ. ಇದೂ ಹೋಯಿತು. ಇದಕ್ಕೆ ನಮಗೆ ಯಾರು ಹಣ ಕೊಡುತ್ತಾರೆ? ಯಾವ ಬಾಬಿನಲ್ಲಿ ಹೆಚ್ಚು ಸಂಪಾದನೆಗೆ ಅವಕಾಶವಿದೆಯೋ ಅಲ್ಲಿ ಮಾಡುವುದಿಲ್ಲ. ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಏಕೆ ಕೇಳಬಾರದು? ಒಟ್ಟಿನಲ್ಲಿ ನಾವು ಹೇಳುವುದಿಷ್ಟೆ. ಇನ್ನು ಮೇಲೆ ಒಂದು ಕಾಸು ಕೂಡ ಹೊಸ ತೆರಿಗೆಯನ್ನು ಸಾಮಾನ್ಯ ಜನರ ಮೇಲೆ ವಿಧಿಸುವುದಕ್ಕೆ ಸಾಧ್ಯವಿಲ್ಲ. ಬೇಕಾದರೆ ಸೆಂಟ್ರಲ್ ಎಕ್ಸೈಜು ಹೆಚ್ಚು ಮಾಡಿಕೊಂಡಿರುವುದರಲ್ಲಿ ತೆಗೆದುಕೊಳ್ಳಲಿ. ಈ ಒಂದೇ ವಿಚಾರದಲ್ಲಿ ಹಣಕಾಸಿನ ಸಂಬಂಧದಲ್ಲಿ ಸರ್ಕಾರದ ನೀತಿಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶವಿದೆ. ಅವರು ಹೇಳಿದಂತೆ ಹಣಕಾಸಿನ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಿ ಆ ಸಮಿತಿ ಕೂಲಂಕಷವಾಗಿ ಪರಿಶೀಲನೆ ಮಾಡಿ ತೀರ್ಮಾನಕ್ಕೆ ಬಂದ ಹೊರತು, ನಾವು ಯಾವುದಕ್ಕೂ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈ ತೆರಿಗೆಯನ್ನು ಈಗ ವಿಧಿಸಿದರೆ ಅನೇಕರು ಬಸ್ಸುಗಳನ್ನು ನಡೆಸುವುದನ್ನೇ ಬಿಟ್ಟುಬಿಡುತ್ತಾರೆ. ಇದರಲ್ಲಿ ಲಾಭವಿಲ್ಲದಿದ್ದರೆ ಏಕೆ ಬಸ್ ಲೈಸೆನ್ಸಿಗಾಗಿ ಅಷ್ಟು ಅರ್ಜಿಗಳು ಬರುತ್ತವೆ ಎಂದು ಕೇಳಿದರು. ವ್ಯವಸಾಯ ಮಾಡಿಕೊಂಡಿರುವ ರೈತ ಮಳೆ ಸರಿಯಾಗಿ ಆಗದೇ ಹೋದರೆ ವ್ಯವಸಾಯವನ್ನೇ ಬಿಟ್ಟುಬಿಟ್ಟು ಇನ್ನೇನು ಮಾಡಬೇಕು? ಯಾವುದಾದರೂ ಉದ್ಯೋಗದಲ್ಲಿದ್ದರೆ ಅದರಲ್ಲಿ ತೊಂದರೆಯಾದರೂ ಅದನ್ನು ಬಿಟ್ಟು ಏನು ಮಾಡುವುದು? ಅದೊಂದು ಕಸಬಾಗಿಟ್ಟುಕೊಂಡಿರುತ್ತಾರೆ. ಸರ್ಕಾರಿ ಉದ್ಯೋಗದಲ್ಲಿರುವವರು ಕೇವಲ 25 ರೂಪಾಯಿ ಸಂಬಳ ಬರುತ್ತಿದ್ದರೂ, ಹೆಚ್ಚು ಕೊಡಿ ಎಂದು ಕೇಳುತ್ತಾರೆ. ಕೊಡದೇಯಿದ್ದರೂ ಎಷ್ಟೇ ಅವರಿಗೆ ಕಷ್ಟವಾದರೂ ತಮ್ಮ ಉದ್ಯೋಗ ಬಿಡುವಹಾಗಿಲ್ಲ. ಹೀಗೆ ಅರ್ಜಿಗಳು ಬರುತ್ತವೆ, ಬೇಕಾದಷ್ಟು ಜನರು ಬರುತ್ತಾರೆ. ಆದುದರಿಂದ ಅದು ಲಾಭದಾಯಕ ಎಂದು ಹೇಳುವುದು ನ್ಯಾಯವಲ್ಲ. ಆದುದರಿಂದ ಸರ್ಕಾರದವರು ಈ ಮಸೂದೆಯನ್ನು ವಾಪಸು ತೆಗೆದುಕೊಂಡು ಬೇರೆಯ ರೀತಿಯಲ್ಲಿ ಅವರ ಬಡ್ಜೆಟ್ಟಿನ ಖೋತಾವನ್ನು ಕಡಮೆಮಾಡಲು ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ.

(ಶ್ರೀ ಬಿ. ಹುಚ್ಚೇಗೌಡ.)

ನಮ್ಮ ಮಾನ್ಯ ಮಂತ್ರಿಗಳು ಹೀಗೆ ಅವರ ಭಾಷಣದಲ್ಲಿ ತಿಳಿಸಿದ್ದಾರೆ.

"The balance of the deficit could be further reduced in the course of the year by a careful husbanding of our resources."

12 Noon.

ಇದರಂತೆ ತಾವು ನಡೆಸಿದರೆ ತಮಗೆ 16 ಲಕ್ಷ ರೂಪಾಯಿಗಳು ಬರುತ್ತವೆ. ತಾವು ಈ ಮಸೂದೆಯಲ್ಲಿ ಹೇಳಿರುವಂತೆ ಒಂದು ಆಣೆ ಇರತಕ್ಕ ತೆರಿಗೆಯನ್ನು 2 ಆಣೆಗೆ ಜಾಸ್ತಿ ಮಾಡಿದರೆ 8 ಲಕ್ಷ ರೂಪಾಯಿಗಳು ಬರುತ್ತವೆ. ಈಗಾಗಲೇ ನಾನು ಹೇಳಿರತಕ್ಕ ಕಾರಣಗಳಿಗಾಗಿ ತಾವು ಈಬಗ್ಗೆ ಒಂದು ಸಮಿತಿಯನ್ನು ನೇಮಕಮಾಡಬೇಕೆಂದೂ, ಅಲ್ಲಿಯವರೆಗೂ ಈ ಮಸೂದೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದೂ ತಿಳಿಸಿ, ನಾನು ಇದನ್ನು ವಿರೋಧಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಸ್ವಾಮಿ, ಈಗ ನಡೆದಿರತಕ್ಕ ಚರ್ಚೆಗಳನ್ನೆಲ್ಲಾ ನಾನು ಮನಸ್ಸಿಟ್ಟು ಕೇಳಿದ್ದೇನೆ. ಪ್ರತಿಪಕ್ಷದ ಮಾನ್ಯ ಸದಸ್ಯರನೇಕರು ಮಾಡಿರತಕ್ಕ ಆರೋಪಣೆಗಳ ಬಗ್ಗೆ ನನ್ನ ಮಿತ್ರರಾದ ಮಾನ್ಯ ರೆವೆನ್ಯೂ ಮಂತ್ರಿಗಳೂ ಮತ್ತೂ ಸರ್ಕಾರೀ ಪಕ್ಷದವರೂ ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ ಒಂದು ವಿಚಾರವನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂದು ತಮ್ಮ ಅಪ್ಪಣೆಯನ್ನು ಪಡೆದು, ಈಗ ಮಾತನಾಡಲು ನಿಂತಿದ್ದೇನೆ.

ಪ್ರತಿಪಕ್ಷದ ಮುಖಂಡರೂ ಮತ್ತು ಮಾನ್ಯ ಶ್ರೀ ಕೆ. ಪಟ್ಟಾಭಿರಾಮ್‌ರವರೂ "ನಾವೆಲ್ಲ ನಿಮಗೆ ಒಂದು ಸ್ನೇಹ ಹಸ್ತ ನೀಡಬೇಕೆಂದಿದ್ದೇವೆ, ಇದನ್ನು ತಾವು ನಿರಾಕರಿಸಬೇಡಿ" ಅನ್ನುವ ಒಂದು ವಾದಹೂಡಿದ್ದಾರೆ. ಬಹುಶಃ ಇಲ್ಲಿರತಕ್ಕ ಎಲ್ಲ ಮಾನ್ಯ ಸದಸ್ಯರಿಗೂ ನಾನು ಸಂಸ್ಥಾನದಲ್ಲಿ ಒಂದು ಸ್ನೇಹ, ಸೌಹಾರ್ದಗಳನ್ನು ಎಲ್ಲರಲ್ಲಿಯೂ ಬೆಳೆಸತಕ್ಕ ಬಗ್ಗೆ ಎಷ್ಟು ನಿಸ್ಪೃಹತೆಯಿಂದ ಪ್ರಯತ್ನಪಡುತ್ತಿದ್ದೇನೆ ಎಂಬುದು ವೇದ್ಯವಾಗಿರಬಹುದು. ಆದರೆ, ನಾನು ಈ ಪ್ರಯತ್ನದಲ್ಲಿ ಇನ್ನೂ ಜಯಶಾಲಿಯಾಗದಿರಬಹುದು—"ತಾವು ಈಗ ಒಂದು ಸಮಿತಿಯನ್ನು ನೇಮಕಮಾಡದೇಹೋದರೆ ನಮ್ಮ ಸಹಕಾರವನ್ನೂ ಮತ್ತು ನಮ್ಮ ಒಂದು ಸ್ನೇಹ ಹಸ್ತವನ್ನೂ ತಾವು ಸ್ವೀಕರಿಸಿದಂತೆ ಆಗಲಲ್ಲ" ಎಂದು ಅವರು ಎಷ್ಟೇ ಒಳ್ಳೆಯ ಭಾಷೆಯಲ್ಲಿ ಹೇಳಿದ್ದಾಗ್ಯೂ ಕೂಡ ಅದು ಸ್ನೇಹವನ್ನು ಬಯಸತಕ್ಕವರಿಗೆ ಒಂದು ಅಲ್ಟಿಮೇಟಂ ಕೊಟ್ಟಹಾಗೆ ಇದೆ. ಅವರು ಭಾಷಣಗಳಲ್ಲಿ ಈ ನಮ್ಮ ಪ್ರತಿಪಕ್ಷದವರು, ಮೈಸೂರು ಸರ್ಕಾರದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ, ಈ ಸರ್ಕಾರದಲ್ಲಿ ಜನರಿಗೆ ನಂಬಿಕೆಯಿಲ್ಲ, ಎಂಬುದಾಗಿ ಏನೇನೋ ಪದಗಳನ್ನು ಉಪಯೋಗಿಸಿ ಮನನೋಯಿಸುವಂತಹ ರೀತಿಯಲ್ಲಿ ಪದಗಳನ್ನೆಲ್ಲಾ ಹಾಡಿ ಕೊನೆಯಲ್ಲಿ ಹೀಗೊಂದು ಸಮಿತಿಮಾಡಿ ಎಂದು ಹೇಳಿದರೆ ಇದರಿಂದ ಏನು ಅರ್ಥವಾಗುತ್ತದೆಂಬುದನ್ನು ಅವರೇ ಯೋಚಿಸಬಹುದು. ಹಿಂದಿನ ಕಾಂಗ್ರೆಸ್ ಮಂತ್ರಿಮಂಡಲದವರೂ ಮತ್ತು ಈಗಿರತಕ್ಕ ಮಂತ್ರಿಮಂಡಲದವರೂ ಸಂಸ್ಥಾನದ ಹಣಕಾಸಿನ ಪರಿಸ್ಥಿತಿಯನ್ನೆಲ್ಲ ಕುಲಗೆಡಿಸಿದ್ದಾರೆ, ಅದನ್ನೆಲ್ಲಾ ನೋಡಿ ಪರಿಶೀಲನೆ ಮಾಡುವುದಕ್ಕಾಗಿ ಈ ಒಂದು ಸಮಿತಿಯನ್ನು ನೇಮಕಮಾಡಬೇಕೆಂಬ ಉದ್ದೇಶಕ್ಕಾಗಿಯೇ ಇದನ್ನು ಹೇಳಿದ್ದಾರೆಂದು ಎಲ್ಲರಿಗೂ ಎದ್ದು ಕಾಣುತ್ತಿದೆ. ಆದರೆ ಇಂಥ ಆರೋಪಣೆಗಳಿಗಾಗಲಿ ಅಥವಾ ಆಕ್ಷೇಪಣೆಗಳಿಗಾಗಲಿ ನಾವು ಅರ್ಹರಲ್ಲವೆಂದು ಹೇಳಬೇಕಾಗಿದೆ. ಹಿಂದಿನ ಮಂತ್ರಿಮಂಡಲದವರು ಹೆಚ್ಚಾಗಿ ದುಡ್ಡನ್ನು ಖರ್ಚುಮಾಡಿದ್ದಾರೆಂದು ಹೇಳಿದ್ದಾರೆ. ಹಾಗೆ ಮಾಡಿದ್ದರಿಂದಲೇ ಈ ದಿವಸ ಜನರ ಜೀವನದ ಮಟ್ಟ ಏರಲು ಒಂದು ಸದವಕಾಶವಾಯಿತು ಎಂಬ ಅಂಶವನ್ನು ಅಂಕಿಅಂಶಗಳೇ ಎತ್ತಿ ತೋರಿಸುತ್ತಿವೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಪದವನ್ನು ಉಪಯೋಗಿಸಬೇಕಾಗಿದೆ. ಅದು ಏನೆಂದರೆ, ನೋಡುವುದರಲ್ಲಿ ಬಹುಶಃ ಇತ್ತೀಚೆಗೆ ಇವರೆಲ್ಲರೂ ಓದುವುದನ್ನೇ ಮರೆತುಬಿಟ್ಟಿದ್ದಾರೋ ಏನೋ ಎನ್ನುವಂತೆ ಕಾಣುತ್ತಿದೆ. I am afraid whether they have lapsed into illiteracy. ಬಡ್ಜೆಟ್ ಪುಸ್ತಕವನ್ನು ಅಚ್ಚುಹಾಕಿಸಿ ಕೊಟ್ಟಿದ್ದರೂ ಅದರಲ್ಲಿರತಕ್ಕ ವಿಷಯಗಳನ್ನು ಓದದೆ ಮಂತ್ರಿಗಳು ಹೇಳುವುದು ಅರ್ಥವಾಗುವುದಿಲ್ಲ ಎಂದು ಹೇಳುವುದು ಯಾವ ನ್ಯಾಯ ? ಈ ರೀತಿಯ ಆಕ್ಷೇಪಣೆಗಳಿಗೆ ಅವಕಾಶವಿಲ್ಲದಂತೆ ನಮ್ಮ ಸರ್ಕಾರವೇ ಅಲ್ಲ, ಎಲ್ಲ ಸರ್ಕಾರಗಳೂ ಮಾಡುತ್ತಿರುವಂತೆ, ನಾವೂ ಯಾವ ಮುಚ್ಚುಮರೆಯೂ ಇಲ್ಲದಂತೆ ಎಲ್ಲವನ್ನೂ ಅಚ್ಚು ಹಾಕಿಸಿ ಅವುಗಳನ್ನು ಅವಗಾಹನೆಗೆ ಕೊಟ್ಟಿದ್ದಾಗ್ಯೂ ಅವುಗಳನ್ನು ಓದದೆ ಹೀಗೆಲ್ಲಾ ಸುಮ್ಮನೆ ಆರೋಪಣೆ ಮಾಡುವುದು ಸರಿಯೇ ಎಂಬುದನ್ನು ಅವರೇ ಆಲೋಚಿಸಿ ನೋಡಲಿ. ಚುನಾವಣೆಗಳ ಕಾಲದಲ್ಲಾಗಿದ್ದರೇನೋ ಅವರು ಹೀಗೆ ಭಾಷಣಮಾಡಬಹುದಾಗಿತ್ತು. ಆದರೆ ಅಂತಹ ಚುನಾವಣೆಗಳೂ ಕೂಡ ಈಗ ಇಲ್ಲ. ಇನ್ನು 5 ವರ್ಷ ಕಳೆದಮೇಲೆ ತಾವು ಹಾಗೆ ಮಾಡಬಹುದು. ಆದರೆ ಈಗ ಹಣವೆಲ್ಲ ಏತಕ್ಕಾಗಿ ಖರ್ಚಾಗಿರುತ್ತದೆ ಎಂಬುದನ್ನು ತಿಳಿಸತಕ್ಕದ್ದು ನನ್ನಮೇಲೆ ಬಿದ್ದಿರತಕ್ಕ ಜವಾಬ್ದಾರಿ. ದೇಶದ ಎಲ್ಲಾ ಕಡೆಗಳಲ್ಲೂ, ಜಿಲ್ಲೆಜಿಲ್ಲೆಗಳಲ್ಲೂ ಪ್ರವಾಸಮಾಡಿ ಜನರಿಗೆ ಸಮಜಾಯಿಷಿ ಕೊಟ್ಟಿದ್ದೇನೆ. ಈಗ ಆಗಿರತಕ್ಕ ಖರ್ಚುವೆಚ್ಚಗಳನ್ನೆಲ್ಲಾ ಅವರು ಒಪ್ಪಿಕೊಂಡಿದ್ದಾರೆ. ಎಲ್ಲ ಜನರ ವಿಶ್ವಾಸವನ್ನೂ ಮತ್ತು ಶಾಸನಬದ್ಧವಾದ ಜನರ ಪ್ರೀತಿ ವಿಶ್ವಾಸಗಳನ್ನೂ ಈ ಮಂತ್ರಿಮಂಡಲ ಸಂಪಾದಿಸಿಕೊಂಡಿರುತ್ತದೆಯೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಈ ಮಂತ್ರಿಮಂಡಲ ದೇಶದಲ್ಲಿರತಕ್ಕ ಎಲ್ಲ ಜನರ ಪ್ರೀತಿ ವಿಶ್ವಾಸಗಳನ್ನೂ ಗಳಿಸಿಕೊಂಡಿದೆ. ಆದರೆ ತಾವೇನೋ ಇಲ್ಲ ನಮ್ಮನ್ನು ಆಕ್ಷೇಪಣೆಮಾಡಬಹುದು. ನಾನು ಈ ದಿವಸ ಒಬ್ಬ ಮಂತ್ರಿಯಾಗಿದ್ದರೂ, ಕಾಂಗ್ರೆಸ್ ಮುಖಂಡನಂತೆ ವರ್ತಿಸದೆ, ದೇಶದಲ್ಲಿರತಕ್ಕ ಒಬ್ಬ ಸಾಮಾನ್ಯ ಪ್ರಜೆಯಂತೆ ನಾನು ಮುಂದುವರಿಯುತ್ತಿದ್ದೇನೆ. ಈ ಸರ್ಕಾರದ ವಿಚಾರವಾಗಿ ಜನರ ಅಭಿಮತವೇನಿದೆ ಎಂಬುದನ್ನು ಕೇಳಿದ್ದೀರಾ ಎಂದು ಒಂದು ವಿಚಾರವೆತ್ತಿದ್ದಾರೆ. ಈಗಿರತಕ್ಕ ಸರ್ಕಾರದ ಬಗ್ಗೆ ಜನರ ಅಭಿಪ್ರಾಯವೇನಿರುತ್ತದೆಯೆಂಬುದನ್ನು ನಾನು ತಿಳಿದುಕೊಂಡಿದ್ದೇನೆ, ಮತ್ತು ಈ ಸರ್ಕಾರ ಜನರಿಂದ ಎಷ್ಟರಮಟ್ಟಿಗೆ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡಿರುತ್ತದೆಯೆಂಬ ಅಂಶ ತಮಗೂ ಗೊತ್ತಿದೆ. ಅದನ್ನು ತಾವು ನೋಡಿದ್ದೀರಿ. ಇದಕ್ಕಿಂತ ಹೆಚ್ಚಿಗೆ ನಾನು ಇನ್ನೇನು ಹೇಳಲಿ ?

ಶ್ರೀ ಎಸ್. ಗೋಪಾಲಗೌಡ.—ಏನು ? ತಮಗೆ ತಾವೇ ಶಹಭಾಸ್‌ಗಿರಿ ಕೊಟ್ಟುಕೊಳ್ಳಬಹುದೆ !

ಶ್ರೀ ಕೆ. ಹನುಮಂತಯ್ಯ.—ಹೌದು. ತಾವು ಧೂಳಿನಲ್ಲಿ ರಸ್ತೆಯ ಒಂದು ಪಕ್ಕದಲ್ಲಿ ನಿಂತುಕೊಂಡಿರುವಾಗ,

ಈ ಸರ್ಕಾರದಲ್ಲಿ ವಿಶ್ವಾಸವಿಟ್ಟಿರತಕ್ಕಂಥ ಐದಾರು ಸಾವಿರ ಜನರಿಗೆ ನನ್ನ ಸ್ನೇಹಹಸ್ತವನ್ನು ನೀಡಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ಹೌದು. ನೀವು ಆಸ್ಪತ್ರೆಗೆ ಹಣ ಕೊಟ್ಟಿದ್ದೀರಿ ಎಂದು ಅವರೂ ಬಂದಿದ್ದರು.

ಶ್ರೀ ಕೆ. ಹನುಮಂತಯ್ಯ.—ಇರಲಿ, ನಾನೀಗ ಆ ಪ್ರಸ್ತಾಪಕ್ಕೆ ಹೋಗುವುದಿಲ್ಲ. ಈ ದಿವಸ ನಾನು ನಿಮ್ಮ ಸ್ನೇಹಹಸ್ತವನ್ನು ಸ್ವಾಗತಿಸುತ್ತೇನೆ. ನನಗೂ ಕೂಡ ತಮ್ಮೆಲ್ಲರಲ್ಲೂ ಸ್ನೇಹ ವಿಶ್ವಾಸಗಳನ್ನು ಬೆಳೆಸಬೇಕೆಂಬ ಆಸೆ ಇದ್ದೇ ಇದೆ. ತಾವು ಏನೇ ಆಕ್ಷೇಪಣೆಗಳನ್ನು ಮಾಡಿದರೂ ಚಿಂತೆಯಿಲ್ಲ. ಆ ರೀತಿ ನಾವು ಸ್ನೇಹವಿಶ್ವಾಸಗಳನ್ನು ಬೆಳೆಸಬೇಕಾದರೆ ನಾವೆಲ್ಲರೂ ಕಲೆತು ಮಾತನಾಡಬೇಕು. ನೀವೂ ಬನ್ನಿ, ಅದನ್ನು ಆಲೋಚನೆಮಾಡೋಣ ಎಂದು ಹೇಳಿದ್ದೆ. ಆದರೆ ಈ ದಿವಸ ಈ ಶಾಸನಸಭೆಯಲ್ಲಿ ಎದ್ದು ನಿಂತುಕೊಂಡು ಈ ರೀತಿಯಾಗಿ ಒಂದು ಸಮಿತಿಯನ್ನು ರಚನೆಮಾಡಬೇಕು ಎಂದು ಭಾಷಣರೂಪವಾಗಿ ನಾನಾಗಲಿ ತಾವಾಗಲಿ ಹೀಗೊಂದು ಅಲ್ಟಿಮೇಟಂ ಕೊಡತಕ್ಕದ್ದಕ್ಕೆ ಬದಲಾಗಿ, ನೀವು ನಾವೂ ಕಲೆತು ಪ್ರತ್ಯೇಕವಾಗಿ ಮಾತನಾಡೋಣ. ಹಿಂದಿನ ಸರ್ಕಾರವೇ ಆಗಲಿ ಅಥವಾ ಈಗಿರತಕ್ಕ ಸರ್ಕಾರವೇ ಆಗಲಿ ಹಣವನ್ನು ಪೋಲುಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ವಿಮರ್ಶೆಮಾಡೋಣ. ಯಾವಯಾವ ಬಾಬಿನಲ್ಲಿ ಈ ಖರ್ಚುವೆಚ್ಚಗಳನ್ನು ಕಡಮೆಮಾಡಬಹುದು ಎಂಬುದನ್ನು ಆಲೋಚನೆಮಾಡೋಣ. ಅನಂತರ ಹಾಗೆ ನಾವು ಮಾಡತಕ್ಕ ಪರ್ಯಾಲೋಚನೆಯ ಫಲವಾಗಿ ಅಂಥ ಒಂದು ಸಮಿತಿಯನ್ನು ನೇಮಕಮಾಡತಕ್ಕದ್ದು ಅಗತ್ಯವೆಂದು ನಿಮಗೂ ನನಗೂ ಎಲ್ಲರಿಗೂ ಕಂಡುಬಂದರೆ, ಅದನ್ನು ನೇಮಕಮಾಡೋಣ. ಆದರೆ ಇಂಥ ಮಾರ್ಗಗಳನ್ನೆಲ್ಲಾ ಬಿಟ್ಟು ಕೊನೆಯ ಕಾಲದಲ್ಲಿ ಹೀಗೆ ಒಂದು ಅಲ್ಟಿಮೇಟಂ ಕೊಡುವುದು ಸರಿಯಾದುದೇ ಎಂಬುದನ್ನು ಮಾನ್ಯ ಶ್ರೀ ಕೆ. ಪಟ್ಟಾಭಿರಾಮನ್ ರವರೂ ಆಲೋಚಿಸಲಿ. ಒಂದು ಮಂತ್ರಿಮಂಡಲ ಒಂದು Finance Billನ್ನು ಸಭೆಯ ಮುಂದಿಟ್ಟಿರತಕ್ಕ ಕಾಲದಲ್ಲಿ ಯಾವುದಾದರೂ ಒಂದು ಸಲಹೆ ಬಂದರೆ ಅದನ್ನು ಒಪ್ಪಿಕೊಂಡು ಆ Finance Billನ್ನು/ ಹಿಂದಕ್ಕೆ ತೆಗೆದುಕೊಂಡಿರುವ ಸಂಪ್ರದಾಯವನ್ನು ಎಷ್ಟು ಕಡೆ ಕೇಳಿದ್ದಾರೆ ಅಥವಾ ನೋಡಿದ್ದಾರೆಂಬುದನ್ನು ಅವರೇ ಹೇಳಲಿ. ಒಂದು Finance Billನ್ನು ಅದರಲ್ಲೂ ವರ್ಷದ ಕೊನೆಯಲ್ಲಿ pass ಮಾಡಬೇಕಾದಂತಹ ಸಮಸ್ಯೆ ಇರುವಾಗ ಆ ಕೊನೆಯ ದಿನದಲ್ಲಿ ಈ ರೀತಿ ಒಂದು ಸಮಿತಿ ನೇಮಕಮಾಡಿದರೆ ನಾವು ಸಹಕರಿಸುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳಿದರೆ, ಅದು ಹೇಗಾಗುತ್ತದೆಂದರೆ, ವರ್ಷವೆಲ್ಲಾ ಬೇಕಾದಷ್ಟು ಸ್ನೇಹ ಬೆಳೆಸಿ, ಪ್ರೀತಿ ವಿಶ್ವಾಸಗಳಿಂದಿದ್ದು ಕೊನೆಯಲ್ಲಿ 'ಒಂದು ಕಪ್ ಕಾಫಿ ಕೊಡಲಲ್ಲ—ಹಾಗೆ ನೀನು ಕೊಡದೇ ಇದ್ದುದರಿಂದ ನಿನಗೂ ನನಗೂ ಸ್ನೇಹವಿಲ್ಲ' ಎಂದರೆ ಹೇಗಾಗುತ್ತದೋ ಇದೂ ಹಾಗೆಯೇ ಆಗುತ್ತದೆ. ಸ್ನೇಹ ಎಂಬುದು ತನ್ನಷ್ಟಕ್ಕೆ ತಾನೇ ಒಂದು ಪ್ರವಾಹದಂತೆ ಹರಿಯಬೇಕು. ಹಾಗೆ ಹರಿದು ಅದು ದೇಶಕ್ಕೆ ಪ್ರಯೋಜನ ಮಾಡಬೇಕು. ಯಾವುದೋ ಒಂದು ಸಣ್ಣ ವಿಷಯ ತೆಗೆದುಕೊಂಡು, ಆ ವಿಷಯ ಇದ್ದರೆ ಉಂಟು, ಇಲ್ಲದಿದ್ದರೆ ಇಲ್ಲ ಎಂದು ಹೇಳಿದರೆ ಕಷ್ಟಪರಿಸ್ಥಿತಿ ಬರುತ್ತದೆ. ಇಂಥ ಸಣ್ಣ ವಿಷಯಕ್ಕಾಗಿ ಯಾರನ್ನೂ ಕಷ್ಟಕ್ಕೆ ಸಿಕ್ಕಿಸಬಾರದು. ಹಾಗೆ ಮಾಡುವುದು ನಿಜವಾದ ಸ್ನೇಹದ ಕುರುಹಲ್ಲ. ಆದಕಾರಣ ಒಂದು ಸಮಿತಿಯನ್ನು ನೇಮಕ ಮಾಡುವ ವಿಷಯವನ್ನು ಕಲೆತು ಮಾತನಾಡೋಣ. I will keep an open mind. ಇಷ್ಟು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ತಾವು ಕೇಳಿದ ಸಲಹೆಯನ್ನು ಕಾರ್ಯಗತ ಮಾಡತಕ್ಕ ವಿಚಾರದಲ್ಲಿ ಹಿಂದಿನ ಮಂತ್ರಿಮಂಡಲದ ಮೇಲಾಗಲಿ, ಈಗಿರತಕ್ಕ ಮಂತ್ರಿಮಂಡಲದ ಮೇಲಾಗಲಿ ಒಂದು ದೋಷಾರೋಪಣೆಯನ್ನು ಕಲ್ಪಿಸುವ ಸಂದರ್ಭ ಇದ್ದಿದ್ದೇ ಆದರೆ ಅದನ್ನು ಸಾವಕಾಶವಾಗಿ ಆಲೋಚನೆ ಮಾಡುವುದಕ್ಕೆ ನನಗೂ ಕೂಡ ಕಾಲಾವಕಾಶ ಬೇಕು. ಹಾಗೆ ಆಲೋಚನೆ ಮಾಡತಕ್ಕದ್ದಾದರೂ ಅಗತ್ಯ.

Sri L. SIDDAPPA (Channagiri).—We are asking for full publicity.

Sri K. HANUMANTHAIYA.—It is a public document. Everything that can be done by way of publicity has been completely done. Nothing has been unsaid.

ಆದುದರಿಂದ ಈ ಕಮಿಟಿಯ ವಿಷಯವನ್ನು ನಮ್ಮ ವಿರೋಧಪಕ್ಷದವರಾಗಲಿ, ಶ್ರೀಮಾನ್ ಪಟ್ಟಾಭಿರಾಮನ್ ರವರಾಗಲಿ ಮನಸ್ಸಿಗೆ ಬಹಳವಾಗಿ ಹಚ್ಚಿಕೊಳ್ಳುವ ಅಗತ್ಯವಿಲ್ಲ. ನಾನು ಮೊದಲೇ ಹೇಳಿದ ಹಾಗೆ, ಈ ಬಿಲ್ಲುಗಳು ಪಾಸಾದಮೇಲೆ ಅವೆಲ್ಲಾ ಯೋಚನೆ ಮಾಡುವಂತಹವು. ನಮ್ಮ ಹಣ ಕಾಸಿನ ಪರಿಸ್ಥಿತಿಯನ್ನು ಒಂದು ಸಮಾಧಾನ ಪರಿಸ್ಥಿತಿಗೆ ತರಬೇಕೆಂಬ ಯಾವ ಆಕಾಂಕ್ಷೆಯಿದೆಯೋ, ಆ ಆಕಾಂಕ್ಷೆಗೆ ನಾವೆಲ್ಲರೂ ಸಮಭಾಗಿಗಳೆಂದು ಒಪ್ಪುತ್ತೇನೆ. ಆ ಆಕಾಂಕ್ಷೆ ಒಂದೇ ಆಗಿರುವಾಗ ಅದನ್ನು ಕಾರ್ಯ ರೂಪಕ್ಕೆ ತರತಕ್ಕ ವಿಧಾನದಲ್ಲಿ ನಾವು ಮನಸ್ತಾಪ ಅಂಟಿಸಿಕೊಳ್ಳಬಾರದು. ಕಲೆತು ಮಾತನಾಡಬೇಕೆಂದು ಹೇಗೆ ಶ್ರೀಮಾನ್ ಗೋಪಾಲಗೌಡರು ಹೇಳಿದ್ದಾರೆಯೋ ಆ ರೀತಿ ಮಾತನಾಡುವುದಕ್ಕೆ ನಾನು ಸದಾ ಸಿದ್ಧನಾಗಿದ್ದೇನೆ.

ಇನ್ನು ಇದು ಡೆಫಿಸಿಟ್ ಬಡ್ಜೆಟ್ ಆಗಿದೆ ಎಂಬುದರ ವಿಚಾರದಲ್ಲಿ ಬಹಳ ಆಕ್ಷೇಪಣೆಯಿದೆ. ಪ್ರತಿಪಕ್ಷದವರನೇಕರು ಇದನ್ನು ಪ್ರಸ್ತಾಪಿಸಿದ್ದಾರೆ. ಈಗ ಹೆಚ್ಚಿಗೆ ಕಾಲವಿಲ್ಲದಿರುವುದರಿಂದ, ನಾನು ಅವರು ಹೇಳಿದ ಒಂದೊಂದು ವಿಷಯವನ್ನೂ ಪ್ರಸ್ತಾಪಿಸಿ ಮಾತನಾಡುವುದಿಲ್ಲ.

ಈಗ ಈ ಪಾಂಚವಾರ್ಷಿಕ ಯೋಜನೆ ಮತ್ತು ಅದರ ಅಂಗವಾದ ದೇಶದ ಅಭಿವೃದ್ಧಿ ಕಾರ್ಯಗಳು ಹೆಚ್ಚು ಹೆಚ್ಚಾಗಿ ತೀವ್ರತೆಯಿಂದ ನಡೆಯಬೇಕೆಂಬ ಉದ್ದೇಶದಿಂದ deficit financing ಆದರೂ ಆಗಲಿ ಎಂಬ ನೀತಿಯನ್ನು ಇಂಡಿಯಾ ದೇಶದ ಎಲ್ಲ ಸರ್ಕಾರಗಳೂ ಅನುಸರಿಸುತ್ತಿವೆ. ಈ ರೀತಿ ಡೆಫಿಸಿಟ್ ಫೈನಾನ್ಸಿಂಗ್ ಇರುವುದರಿಂದ ಸಾಲ ತೆಗೆದುಕೊಳ್ಳಬೇಕು, ಆಮೇಲೆ ಸಾಲ ತೀರಿಸಬೇಕು. ಈ ರೀತಿ ಡೆಫಿಸಿಟ್ ಫೈನಾನ್ಸಿಂಗ್ ತತ್ವವನ್ನು ಕೇಂದ್ರ ಸರ್ಕಾರದವರು ಮತ್ತು ಅರ್ಥಶಾಸ್ತ್ರವನ್ನು ಅಭ್ಯಾಸಮಾಡಿ ತಿಳಿದವರೆಲ್ಲರೂ ಕೂಡ ತಾತ್ಕಾಲಿಕವಾಗಿ ಅನುಷ್ಠಾನಕ್ಕೆ ತರುವುದು ಸೂಕ್ತವೆಂಬ ವಾತಾವರಣವನ್ನಿಟ್ಟುಕೊಂಡಿರುವಾಗ, ಆ ವಾತಾವರಣಕ್ಕನುಗುಣವಾಗಿ ನಮ್ಮ ಈ ಬಡ್ಜೆಟ್ಟನ್ನೂ ರಚನೆಮಾಡಿದ್ದೇವೆ. ತಾವೇ ಹೇಳಿದ್ದೀರಿ, ಅಭಿವೃದ್ಧಿ ಕಾರ್ಯಗಳಿಂದ (Nation Building activities) ಜನಜೀವನದ ಮಟ್ಟ ಹೆಚ್ಚುತ್ತದೆ ಎಂದು. ಆ ರೀತಿಯಾಗಿ ಮಾಡದೆ, ಅಭಿವೃದ್ಧಿ ಕಾರ್ಯಗಳಿಗೆ ಒಂದು ಕಾಸೂ

(ಶ್ರೀ ಕೆ. ಹನುಮಂತಯ್ಯ.)

ಕೊಡದೆಹೋಗಿದ್ದರೆ ಈ ರೀತಿಯ ಡಿಫಿಸಿಟ್ಟೇ ಇರುತ್ತಿರಲಿಲ್ಲ. ಈ ರೀತಿ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ಒಳ್ಳೆಯದು, ಅದು ದೇಶದ ಹಿತಕ್ಕನುಗುಣವಾಗಿದೆಯೆಂಬ ನೀತಿಯಿಂದ ಎಷ್ಟು ಖರ್ಚನ್ನು ಹೆಚ್ಚುಮಾಡಬೇಕೋ ಅಷ್ಟನ್ನೂ ಮಾಡಿದ್ದರಿಂದ ಡಿಫಿಸಿಟ್ ಬಡ್ಜೆಟ್ ಆಯಿತು. ತಾವೇ ನೋಡಿ, ವಿದ್ಯಾಭ್ಯಾಸದ ಬಾಬಿಗೆ ಹೋದವರ್ಷ 335 ಲಕ್ಷ ಕೊಟ್ಟಿತ್ತು; ಈಸಾರಿ 22 ಲಕ್ಷ ರೂಪಾಯಿಗಳಷ್ಟು ಜಾಸ್ತಿ ಮಾಡಿದೆ. ಹಾಗೆಯೇ ವ್ಯವಸಾಯದ ಇಲಾಖೆಗೆ 8 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟಿದ್ದೇವೆ. ಪಶುವೈದ್ಯ ಇಲಾಖೆಗೆ 4 ಲಕ್ಷ ರೂಪಾಯಿಗಳು ಹಾರ್ಟಿಕಲ್ಚರ್ ಇಲಾಖೆಗೆ 2 ಲಕ್ಷ ರೂಪಾಯಿಗಳು ರೇಷ್ಮೆ ಇಲಾಖೆಗೆ 2½ ಲಕ್ಷ ರೂಪಾಯಿಗಳು; ಇಂಡಸ್ಟ್ರೀಸ್ ಮತ್ತು ಸಪ್ಲೈಸ್ ಇಲಾಖೆಗೆ 9 ಲಕ್ಷ ರೂಪಾಯಿಗಳು; ಇವೆಲ್ಲಕ್ಕಿಂತಲೂ ಹೆಚ್ಚಾಗಿ ವೈದ್ಯ ಇಲಾಖೆ ಜನಾರೋಗ್ಯ ಇಲಾಖೆಗಳಿಗೆ—ಮಲೇರಿಯಾ ಮತ್ತು ಇತರ ಎಲ್ಲ ರೋಗಗಳನ್ನೂ ತಡೆಗಟ್ಟುವ ಹಾಗೂ ನಿವಾರಣೆಮಾಡಿ ಜನರ ಆರೋಗ್ಯವನ್ನು ಕಾಪಾಡತಕ್ಕ ಈ ಇಲಾಖೆಗಳಿಗೆ—25 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈ ರೀತಿಯಾಗಿ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಒಟ್ಟು 93,15,000 ರೂಪಾಯಿಗಳನ್ನು ಹೋದ ವರ್ಷಕ್ಕಿಂತಲೂ ಹೆಚ್ಚಾಗಿ ಒದಗಿಸಿದ್ದೇವೆ. ಇವನ್ನು ಬಿಟ್ಟರೆ ಡಿಫಿಸಿಟ್ಟೇ ಇಲ್ಲ. ಒಂದು ಕಡೆ ವೈದ್ಯಕೀಯ ಸೌಕರ್ಯ, ವಿದ್ಯಾಸೌಕರ್ಯ ಹೆಚ್ಚಾಗಬೇಕೆಂದು ಹೇಳುವುದು, ಆದರೆ ಅದಕ್ಕೆ ತಕ್ಕಂತೆ ಹಣವನ್ನು ಒದಗಿಸುವುದಿಲ್ಲವೆಂದು ಹೇಳಿದರೆ, ನಮ್ಮ ಮನಸ್ಸಿನಲ್ಲಿ ಪ್ರಜಾಸೇವೆ ಮಾಡಬೇಕೆಂದು ನಿಸ್ಪೃಹತೆಯಿಂದ ಕೂಡಿದ ಆಸೆಗೆ ಮೋಸ ಮಾಡಿದಂತಾಗುತ್ತದೆ. ಈ ರೀತಿಯಾದ ಮನಸ್ಸು, ಆಸೆ ಏನಿದೆ ಅದನ್ನು ತಾವು ಪರಿಪೋಷಣೆ ಮಾಡಬೇಕೇ ಹೊರತು ಅದಕ್ಕೆ ವ್ಯತಿರಿಕ್ತವಾಗಿ ಹೇಳುವುದು ಸರಿಯಲ್ಲ. ಈ ರೀತಿ 93 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರಿಂದ ಈ ಕೆಲವು ತೆರಿಗೆಗಳನ್ನು ಹಾಕಬೇಕಾಯಿತು.

ಆ ಮೇಲೆ ತೆರಿಗೆ ಹಾಕುವುದರಲ್ಲೂ ಒಂದು ವಾದ ಬಂತು. ಸುಮ್ಮನೆ 3 ಲಕ್ಷದ, 4 ಲಕ್ಷದ ತೆರಿಗೆಗಳನ್ನೇಕೆ ಹಾಕುತ್ತೀರಿ ಎಂದು ಹೇಳಿದರು. ಇದನ್ನು ವಿಚಾರಮಾಡೋಣ. ಹೊಸ ರಾಜ್ಯಾಂಗ ಬಂದಮೇಲೆ ನಮ್ಮ elastic sources of revenue ಗಳೆಲ್ಲವೂ ಕೇಂದ್ರಕ್ಕೆ ಹೋದುವು. ಇನ್ನು state listನಲ್ಲಿ ಉಳಿದಿರುವುಗಳಲ್ಲಿ ಹೆಚ್ಚು ವರಮಾನ ಬರವಂಥವು ಯಾವುವೂ ಇಲ್ಲ. ಇದು ಈಗ ಸರಿಯೇ ಅಲ್ಲವೇ ಎನ್ನುವ ವಾದ ಬೇಡ. ಏಕೆಂದರೆ ಕಾನ್ಸ್ಟಿಟ್ಯೂಷನ್ Pass ಆಗಿದೆ; ಅದಕ್ಕನುಗುಣವಾಗಿ ಮಾಡಿದ್ದೇವೆ. ಬಹುಶಃ ಇನ್‌ಕಂಟ್ಯಾಕ್ಸ್ ಆಗಲಿ ರೈಲ್ವೆಗಳಾಗಲಿ ಇಂದು ನಮ್ಮಲ್ಲೇ ಇದ್ದರೆ ಸುಮಾರು ಒಂದೆರಡು ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಸಂಪಾದನೆ ಮಾಡಿಕೊಳ್ಳಬಹುದಾಗಿತ್ತು. ಆದರೆ ಇವೆಲ್ಲಾ ಕೇಂದ್ರಕ್ಕೆ ಹೋಗಿವೆ. ಗಣಿಗಳೂ ಅಷ್ಟೇ. ಗಣಿಗಳು ಸಂಪೂರ್ಣವಾಗಿ State list ನಲ್ಲಿದ್ದರೆ, ಯಾವ ರೀತಿಯಾಗಲಾದರೂ ಚಿನ್ನದ ಗಣಿಯಿಂದ ಒಂದು ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಬಹುದಾಗಿತ್ತು. ಆದುದರಿಂದ ಈ ರೀತಿಯಾಗಿ ಆರ್ಥಿಕ ರಾಜ್ಯಾಂಗ ವ್ಯವಸ್ಥಾಕ್ರಮದಲ್ಲಿ ಹೆಚ್ಚಿನ ಆದಾಯ ಪಡೆಯಬಹುದಾದ ಬಾಬುಗಳು ಕೇಂದ್ರಕ್ಕೆ ಹೋಗಿವೆ. ಉಳಿದಿರುವುದು ಸಣ್ಣಪುಟ್ಟ ಕೆಲವು. ಆದುದರಿಂದ ಇವುಗಳಿಂದಲೇ ಅಲ್ಲಿ ಒಂದು ಲಕ್ಷ, ಇಲ್ಲಿ ಎರಡು ಲಕ್ಷ ಎಂದು ತೆಗೆದುಕೊಂಡು ಕ್ರೋಡೀಕರಿಸಿ ನಮ್ಮ ಬಡ್ಜೆಟ್ಟನ್ನು ಸರಿತೂಗಿಸಿಕೊಳ್ಳಬೇಕೇ ಹೊರತು 'ಅದು ಒಂದು ಲಕ್ಷ ಮಾತ್ರ, ಅದನ್ನು ಬಿಟ್ಟುಬಿಡಿ; ಇದು 2 ಲಕ್ಷ ಮಾತ್ರ, ಇದನ್ನೂ ಬಿಟ್ಟುಬಿಡಿ' ಎಂದು ಹೇಳಿಕೊಂಡು ಒಂದೊಂದನ್ನೂ ಬಿಟ್ಟುಕೊಂಡು ಬಂದರೆ ಕೊನೆಗೆ ಬರುವುದು ಸೊನ್ನೆ!! ಒಂದೊಂದನ್ನೂ ಸ್ವಲ್ಪ ಸ್ವಲ್ಪವಾಗಿ ಕೂಡಿಸಿಕೊಂಡು ಬಂದರೆ ಅದೇ 60—70 ಲಕ್ಷ ರೂಪಾಯಿಗಳಾಗುತ್ತದೆ. ಈ ದೃಷ್ಟಿಯಿಂದ ಈ ತೆರಿಗೆ ಹಾಕಿದ್ದಾರೆ. ಹೆಚ್ಚಿನ ತೆರಿಗೆಗಳನ್ನು ಹಾಕುವುದಕ್ಕೆ ಈಗಿರತಕ್ಕ ರಾಜ್ಯಾಂಗದ ಪ್ರಕಾರ ನಮಗೆ ಅವಕಾಶವಿಲ್ಲ. ಆದ್ದರಿಂದ ಶ್ರೀಮಾನ್ ಮಂಜಪ್ಪನವರು ಹೇಳಿದ ಹಾಗೆ, ಹನಿಗಳಿಂದ ಹಳ್ಳ, ಹಳ್ಳಗಳಿಂದ ನದಿ, ನದಿಗಳಿಂದ ಸಮುದ್ರವಾಗುವ ಈ ಪ್ರಕೃತಿ ನಿಯಮಕ್ಕನುಗುಣವಾಗಿ ಈ ತೆರಿಗೆಗಳನ್ನು ಹಾಕಿದ್ದೇವೆಂದು ನಾನು ಹೇಳಬೇಕಾಗಿದೆ.

ವಿರೋಧ ಪಕ್ಷದವರಿಗೆ ನಾವು ಸ್ನೇಹ ಹಸ್ತವನ್ನು ನೀಡಿ, 'ಕಲೆತು ಪರ್ಯಾಲೋಚನೆ ಮಾಡೋಣ, ಸೆಲೆಕ್ಟ್ ಕಮಿಟಿಯಲ್ಲಿ ಸೇರೋಣ' ಎಂದು ಯಾವ ರೀತಿ ಹೇಳಿದರೂ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಶ್ರೀಮಾನ್ ಇಮಾಂರವರು, ನಾನು ಹಿಂದೆಯೇ ಒಮ್ಮೆ ಹೇಳಿದ ಹಾಗೆ, ಪ್ರತಿಯೊಂದು ವಿಷಯದಲ್ಲೂ ಕೂಡ ದೇಶದಲ್ಲಿ ಜನಜೀವನಕ್ಕೆ ಉಪಯುಕ್ತವಾದ ಇಲಾಖೆಗಳೆಲ್ಲಾ ಹಾಳಾಗಿ ಹೋಯಿತು; situation is deteriorating ಎಂದು ಸುಮ್ಮನೆ extreme language ನ್ನು ಉಪಯೋಗಿಸುತ್ತಿದ್ದಾರೆ. ಇದರ ಜೊತೆಗೆ ಪಾನನಿರೋಧವನ್ನು ತೆಗೆದುಹಾಕಿ ಕುಡಿತಕ್ಕೆ ವ್ಯವಸ್ಥೆ ಮಾಡಿ ಎಂದು ಹೇಳಿದ್ದಾರೆ. ಅವರು ಇರುವುದು ಚಿತ್ರದುರ್ಗ ಜಿಲ್ಲೆ. ಅಲ್ಲಿ ಪಾನವಿರೋಧ ಇದೆ. ಈಗ ಅಲ್ಲಿ ಕುಡಿತಕ್ಕೆ ವ್ಯವಸ್ಥೆಯಿಲ್ಲ. ಇಂಥ ಸಂದರ್ಭದಲ್ಲಿ ಅವರ ಮಾತನ್ನು ಕೇಳಿಕೊಂಡು ಆ ಡಿಸ್ಟ್ರಿಕ್ಟಿನಲ್ಲಿ ಪಾನನಿರೋಧವನ್ನು ರದ್ದುಮಾಡಿದರೆ ಇನ್ನೆಂಥ ಮಾತುಗಳು ಅವರ ಬಾಯಿಂದ ಹೊರಡುತ್ತವೆಯೋ ಎಂಬ ಹೆದರಿಕೆ ನನಗುಂಟಾಗಿದೆ.

Sri J. MOHAMED IMAM.—Indecent argument !!

ಶ್ರೀ ಕೆ. ಹನುಮಂತಯ್ಯ.—ಆ ರೀತಿ ಹೇಳುವುದಕ್ಕೆ ನನಗೂ ವ್ಯಥೆಯಾಗುತ್ತಿದೆ. ಆದರೆ, ನಾವು ಎಷ್ಟು ಸ್ನೇಹ ಸೌಹಾರ್ದಗಳನ್ನು ಉಪಯೋಗಿಸಿದರೂ ಕೂಡ ಅವರು ಭಾಷೆ ಉಪಯೋಗಿಸತಕ್ಕದ್ದು—ಸಂಸ್ಕೃತಿ ಪ್ರಚಾರಬೇಡವೆಂದು ಯಾವ ಭಾಷೆ ಉಪಯೋಗಿಸಿದರೋ ಆ ಭಾಷೆ. ನಿಜ. ವಿರೋಧಪಕ್ಷದ ಕೆಲವು ಮುಖಂಡರುಗಳಿಗೆ ನಾನೂ ಕೂಡ ಸಹಾನುಭೂತಿ ತೋರಿಸಬೇಕಾಗುತ್ತದೆ. ಅವರು ತಮ್ಮ ಜೀವಮಾನದ ಮುಕ್ಕಾಲು ಭಾಗವನ್ನು ಸರ್ಕಾರದ ಆಶ್ರಯದಲ್ಲೇ ಕಳೆದರು. ವಿರೋಧ ಪಕ್ಷದಲ್ಲಿ ಕುಳಿತು ಎಷ್ಟು ಕಷ್ಟಪಡಬೇಕು, ಯಾವ ರೀತಿ ದುಡಿಯಬೇಕು ಎಂಬುದಿನ್ನೂ ಅವರಿಗೆ ಹೊಸದು. ಅವರು ತಿಳಿದುಕೊಂಡಿರುವುದೆಲ್ಲಾ ಬೈಗಳನ್ನು ಉಪಯೋಗಿಸುವುದು, ಬಂದ ಬಿಲ್ಲುಗಳನ್ನೆಲ್ಲಾ ವಿರೋಧಮಾಡುವುದು; ಇದೇ ಪ್ರತಿಪಕ್ಷದ ನೀತಿ ಎಂದು ತಿಳಿದುಕೊಂಡಿರುವಂತೆ ಕಾಣುತ್ತದೆ. ಇವರ ರೀತಿ ನೀತಿ ನೋಡಿದರೆ ಹೇಗಿದೆಯೆಂದರೆ—ಮದ್ರಾಸಿನ ಕಡೆ ಒಂದು ಪದ್ಧತಿ ಇದೆ; ಯಾರಾದರೂ ಸತ್ತು ಹೋದರೆ ಅವರ ಮನೆಯವರು ಅಳದೆ ದುಡ್ಡು ಕೊಟ್ಟು ಅಳತಕ್ಕವರನ್ನು ಕರೆದುಕೊಂಡು ಬಂದು ಅಳಿಸುತ್ತಾರೆ. ಈ ರೀತಿ ಅಳತಕ್ಕದ್ದನ್ನೇ ಕಸಬು

ಮಾಡಿಕೊಂಡಿರತಕ್ಕ ಜನ ಈಗಲೂ ಅಲ್ಲಿದ್ದಾರೆ. ಆ ಕಸಬು ಯಾವ ರೀತಿಯಿದೆಯೋ ಹಾಗೆಯೇ ಬೈಯ್ಯುವುದನ್ನೇ ಒಂದು ಕಸಬನ್ನಾಗಿ ಅವಲಂಬಿಸತಕ್ಕದೇ ಇವರುಗಳ ನೀತಿಯಾಗಿದೆಯೆಂದು ನಾನು ತಿಳಿದಿದ್ದೇನೆ.

Sri L. SIDDAPPA.—I do not know what has come over the Leader of the House. He is going off the head.

ಶ್ರೀ ಕೆ. ಹನುಮಂತಯ್ಯ.—ಆದ್ದರಿಂದ ವಿರೋಧ ಪಕ್ಷದವರ ಮಾತುಗಳು ಮತ್ತು ವಾದಗಳಿಗೆ ಒಂದು ಮಿತಿಯಿದ್ದರೆ ಅವರು ಎಂತಹ ಸ್ನೇಹವನ್ನು ಬಯಸುತ್ತಾರೋ ಆ ಸ್ನೇಹ ಬೆಳೆಯುವುದಕ್ಕೆ ಸಹಾಯವಾಗುತ್ತದೆಂದು ಹೇಳುತ್ತೇನೆ.

Mr. SPEAKER.—The question is :

"That the Mysore Motor Spirit (Taxation on Sales) (Amendment) Bill, 1953, be taken into consideration."

The Motion was adopted.

Sri J. MOHAMED IMAM.—I demand a poll, Sir.

Mr. SPEAKER.—The purpose of a vote, either by division or by voices, being merely to determine the sense of the House, where the vote by voices clearly indicates that the difference between the number of members who vote for and those who vote against a question is overwhelmingly large, a division would be naturally unnecessary, unless it be in exceptional cases. I feel it is not necessary.

Now the Bill will be taken up clause by clause. Clause 2. There are no amendments.

The question is :

"That Clause 2 stand part of the Bill."

The Motion was adopted.

Clause 2 was added on to the Bill.

Mr. SPEAKER.—Clause 1. The question is :

"That Clause 1 stand part of the Bill."

The Motion was adopted.

Clause 1 was added on to the Bill.

Title and Preamble.

Mr. SPEAKER.—The question is :

"That the Title and Preamble stand part of the Bill."

The motion was adopted.

The Title and the Preamble were added on the Bill.

Motion to pass.

Sri KADIDAL MANJAPPA.—Sir, I beg to move :

"That the Mysore Motor Spirit (Taxation on Sales) (Amendment) Bill, 1953, be passed."

Sri B. HUTCHE GOWDA.—I rise to oppose, Sir.

Mr. SPEAKER.—The motion is moved. The question is :

"That the Mysore Motor Spirit (Taxation on Sales) (Amendment) Bill, 1953, be passed."

The motion was adopted.

BUSINES OF THE HOUSE.

Sri J. MOHAMED IMAM (Jagalur).—I would like to know the further programme. We have got a much more important Bill which requires a good deal of time.

Mr. SPEAKER.—How long do you require ?

Sri J. MOHAMED IMAM.—We require at least four hours. We cannot pass these fiscal measures so high-heartedly. We can meet this afternoon, if it is necessary, or we can take it up tomorrow.

Mr. SPEAKER.—No, we cannot take it up tomorrow.

Sri J. MOHAMED IMAM.—It is the duty of the Government to have brought it earlier. If it is not possible to take it up tomorrow, I would suggest we meet in the evening and go on till midnight. For the Finance Bill in England, they were locked up for 36 hours, both day and night. There is no formality and there is no restriction.

Mr. SPEAKER.—Do you not think that, if we continue to sit till one o'clock, we may be in a position to complete the business ?

Sri J. MOHAMED IMAM.—I do not like our liberties to be curtailed so far as fiscal measures are concerned. This is a very important matter. It involves the entire destiny of the State. We cannot behave light-heartedly. I want full time for this Bill. Otherwise we will be failing in our duty.

Mr. SPEAKER.—Supposing the Bill is referred to a Select Committee ?

Sri J. MOHAMED IMAM.—There is no meaning in referring it to a Select Committee. We want time even then.

Mr. SPEAKER.—You will have time tomorrow after the Bill comes back.

Sri J. MOHAMED IMAM.—We oppose the Bill. I have no objection to meet this evening at about three-thirty and go on till mid-night if necessary. But I must have my say.

Sri A. G. RAMACHANDRA RAO (Minister for Law and Education).—The motion might be moved.

Sri J. MOHAMED IMAM.—I have got a parliamentary objection to raise.

Sri K. HANUMANTHAIYA (Chief Minister).—How can the Leader of the Opposition take objection to the moving of the Motion ?

Mr. SPEAKER.—It is 12-30 P.M. and it is time for us to leave the House. This is the first point. With a view to co-operate and go on with the discussions, the request seems to be reasonable.

Sri K. HANUMANTHAIYA.—I understand that by agreement the House has met this morning. It was in pursuance of this understanding we have met. Therefore the extension of time does not arise.

Mr. SPEAKER.—It was expected that these two bills which deal with financial matters will be over by 12-30 P.M. That business is not over. Why not we meet at 2-30 P.M.?

Sri A. BHEEMAPPA NAIK (Molakalmuru).—Why not we have a morning session tomorrow ?

Mr. SPEAKER.—That cannot be done for the simple reason that there is a proposal to refer this Bill to the Select Committee. In that case the Select Committee's report must be in our hands by tomorrow. So this must be over by today. To meet sometime in the afternoon seems to be very reasonable.

Sri K. HANUMANTHAIYA.—If it is the desire of the House to meet today, you can fix a convenient time to suit all the Members.

Mr. SPEAKER.—What time will be convenient to the House ?

Sri K. HANUMANTHAIYA.—Would it be possible for us to meet at 2-30 P.M.; if it is later in the day, it will have to be after 4-30 P.M. or 5 P.M.

Mr. SPEAKER.—Any time that suits the House.

Sri J. MOHAMED IMAM.—After four-thirty or five I have no objection.

Mr. SPEAKER.—We shall have some agreed time at four or four-thirty ?

Sri K. HANUMANTHAIYA.—Let it be at four-thirty.

Mr. SPEAKER.—So, we shall meet at four-thirty. The House will now rise to meet again at 4-30 P.M. today

---

The House adjourned at Thirty Minutes past Twelve of the Clock and reassembled at Thirty Minutes past Four of the Clock.

[MR. SPEAKER in the Chair.]

4-30 P.M.

THE MYSORE ELEMENTARY EDUCATION AND MOTOR VEHICLES TAXATION AND TOLLS (AMENDMENT) BILL, 1953.

Motion to consider.

Sri A. G. RAMACHANDRA RAO (Minister for Law and Education).—Sir, I am asked by the Finance Minister to move this Bill on his behalf because he has some very urgent engagement to fulfil. This sitting of

the House now was not expected. He will be coming shortly. Meanwhile I beg permission to move the Bill.

Mr. SPEAKER.—It was at his request that 4-30 was fixed.

Sri A. G. RAMACHANDRA RAO.—Yes, Sir. I move:

"That the Mysore Elementary Education and Motor Vehicles Taxation and Tolls (Amendment) Bill, 1953, be taken into consideration."

*Sri J. MOHAMED IMAM (Jagalur).—Sir, I rise to a point of order. The preliminary objection I submit is that this Bill cannot be taken up on two grounds; the first is that I have a serious objection for taking up the amendment of the Elementary Education (Amendment) Bill. The copies of the Bill have been given to us today and it is stated in the Statement of Objects and Reasons that this amendment has been brought forward as a taxation measure in order to reduce the deficit in the Budget Estimates for 1953-54. If we go through the Elementary Education Act, you will find that the object of levying education cess is with a definite purpose. I will read the relevant clauses:

"The amount of all collections from education cess levied in that district except such amount as was expended for purposes other than elementary education shall be credited to a fund which shall be called the Elementary Education Fund."

The second condition is:

"The Government has to utilise this fund for carrying out the puposes of this Act throughout or any part of Mysore."

According to the Elementary Education Act the conditions for levying education cess are two; first of all, whatever amount is collected by way of cess must be credited to a fund and that fund must be utilised for the purpose of carrying out the purpose of this Act. But the Statement of Objects and Reasons which is a part of the Bill discloses that this measure is meant to reduce the deficit. In such a case, the collections by way of education cess will get merged in general finances. There is no provision for this nor can we appropriate the collections from education cess by this Act to general finances for the purpose of reducing the deficit. In view of the Statement of Objects and Reasons, I submit that this amendment cannot stand and is not tenable. If the Government want to make use of this education cess for wiping out the deficit, they must bring another Act or they must change the Statement of Objects and Reasons which they cannot do now because the Bill along with the Statement of Objects and Reasons has been published in the Official Gazette and now it is too late. I therefore submit that the Bill as it stands cannot be taken up. That is the first point.

The second is two amendments have been brought together in the same Bill. One amendment relates to the Elementary Education Act and the second amendment relates to Motor Vehicles Act. I think this is against practice. In fact individual amendments ought to have been brought forward and there ought to have been two Bills. So it is not legal to club together both the amendments in one Bill and ask us to vote on both the amendments at one and the same time. It may be argued that this is in consonance with the Finance Bill that is introduced in Parliament. But this is not a Finance Bill nor is it stated anywhere that this is a Finance Bill. In fact, it is a Bill which aims to amend the two Acts and as such there ought to have been two separate Bills. If we are asked to vote at the same time on both the amendments, then we will be at a great handicap. On these two grounds I submit that Government cannot move this Bill before the House; it cannot stand and is not maintainable.

*Asterisk indicates that the speech has not been revised by the member concerned.

Sri A. G. RAMACHANDRA RAO.—The two points raised by my Hon'ble friend have no basis. The preamble clearly states "to reduce the deficit in the Budget Estimates for 1953-54". The Budget Estimates are made for all departments and are put together and shown. In the total there would be a deficit of 157 lakhs and in each department there will be a deficit. After all, this cess for which we have brought proposals gives us about five or six lakhs. In fact we are spending for primary education alone 150 or 160 lakhs. Therefore to describe that it is to make up the deficit in that particular estimate is nothing at all. It goes for the purpose of meeting the expenditure under that head to which my friend drew my attention. There is no irreconcilability or incongruity in the matter. Providing a fund and looked from another angle, filling up the deficit are the same thing put together in two different languages.

Coming to the next point—it is a well known parliamentary practice that a number of amending Bills can be brought under one measure. Here what we have done is we have brought proposals for amending the schedules of two Acts. It is in conformity with the well-known practice not only at Delhi but also in the House of Commons to which we all owe our allegiance in the matter of convention to be followed. Therefore both the points of order raised by my friend have no basis.

Mr. SPEAKER.—The Statement of Objects and Reasons does not form part of the Bill and the publication of the same along with the Bill is just to give an indication of what the Bill stands for. That is all. And one Bill may amend any number of Acts and the mover of one Bill may move any number of Bills and it may be by the same Minister as per Rule 2. So the Hon'ble Minister can go on.

Sri A. G. RAMACHANDRA RAO.—While moving this amendment, I beg to invite the attention of this House to the fact that the necessity for such a taxation measure and the urgency for it has been stressed by the Rajpramukh in his Address and it was debated at great length during Budget discussion, and further we went into the details of the whole thing when cut motions were moved and so I do not think that even now any arguments or repetition of the same will be necessary to convince the necessity for these measures. Therefore if any fresh points are made out I am ready to answer.

The main purpose is to amend the schedules of the Acts by proposing light measures of taxation. I may at this stage state that regarding the Schedule to the Motor Vehicles Taxation and Tolls Bill, there is some argument for scrutiny. After the consideration motion is passed, I propose that it might be gone into by a Select Committee also. At this stage, I do not think I need go further arguing again into the details which have been discussed at great length. I move and put it before the House for their consideration.

Mr. SPEAKER.—Motion moved:

> "That the Mysore Elementary Education and Motor Vehicles Taxation and Tolls (Amendment) Bill, 1953, be taken into consideration."

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈಗ ಈ ಎಜ್ಯುಕೇಷನ್‌ಸೆಸ್ಸನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಸರ್ಕಾರದವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆಯಿಂದ ರೈತನಿಗೆ ಎಷ್ಟು ಅನ್ಯಾಯವಾಗುತ್ತದೆಯೆಂಬ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಈಗಾಗಲೇ ಜಮೀನನ್ನು ಇಟ್ಟುಕೊಂಡಿರತಕ್ಕ ರೈತನು ತಾನು ಕೊಡುತ್ತಿರುವ ಜಮೀನ್ ಕಂದಾಯದ ಹಣದಲ್ಲಿ ಪ್ರತಿಯೊಂದು ರೂಪಾಯಿಗೂ ಸುಮಾರು ಎರಡೂಕಾಲಾಣೆ ಸೆಸ್ಸನ್ನು ಕೊಡುತ್ತಿದ್ದಾನೆ. ಆ ಸೆಸ್ಸುಗಳು ಯಾವುವೆಂದರೆ: ಲೋಕಲ್ ಸೆಸ್ ಒಂದಾಣೆ, ರೈಲ್ವೆಸೆಸ್ಸು ಮೂರು ಕಾಸು ಎಜ್ಯುಕೇಷನ್ ಸೆಸ್ ಆರು ಕಾಸು, ಹೆಲ್ತ್ ಸೆಸ್ ಆರುಕಾಸು. ಹೀಗೆ ರೈತ ಈ ದಿವಸ ತಾನು ಕೊಡಬೇಕಾಗಿರತಕ್ಕ ಪ್ರತಿಯೊಂದು ರೂಪಾಯಿ ಜಮೀನ್ ಕಂದಾಯದ ಮೇಲೂ ಎರಡೂ ಕಾಲಾಣೆ ತೆರಿಗೆಯನ್ನು ತೆರುತ್ತಿದ್ದಾನೆ. ಈಗ ನಾವು ಈ ತಿದ್ದುಪಡಿ ಕಾನೂನಿಗೆ ಒಪ್ಪಿಗೆಯನ್ನು ಕೊಟ್ಟರೆ,

ಈ ಕಾನೂನು ಪ್ರಕಾರ ರೈತನು ತಾನು ಕೊಡತಕ್ಕ ಪ್ರತಿಯೊಂದು ರೂಪಾಯಿನ ಜಮೀನ್ ಕಂದಾಯದ ಮೇಲು 3ಆಣೆ ಸೆಸ್ಸನ್ನು ಕೊಡಬೇಕಾಗುತ್ತದೆ. ಹೀಗೆಯೆ ನಾವು ಲೆಕ್ಕ ಹಾಕುತ್ತ ಹೋದರೆ ರೈತನು ತಾನು ಕೊಡುವ ರೂಪಾಯಿನ ಕಂದಾಯದ 5 ಭಾಗವನ್ನು ಸೆಸ್ಸು ರೂಪವಾಗಿ ಕೊಡಬೇಕೆಂದು ಗೊತ್ತಾಗುತ್ತದೆ. ಹೀಗೆ ರೈತನು ಸರ್ಕಾರಕ್ಕೆ ಇಷ್ಟೆಲ್ಲಾ ಸೆಸ್ಸಿನ ರೂಪವಾಗಿ ಹಣವನ್ನು ಕೊಡುತ್ತಿದ್ದಾಗ್ಯೂ ಆತನು ಸರ್ಕಾರಕ್ಕೆ ಕೊಡಬೇಕಾದ ತೆರಿಗೆಗಳು ಇನ್ನೂ ಅನೇಕವಾಗಿವೆ. ಗ್ರಾಮದಲ್ಲಿರತಕ್ಕವನೂ ಸಹ ಈ ದಿವಸ ಮಾರಾಟ ತೆರಿಗೆಯನ್ನು ಕೊಡಬೇಕಾಗಿದೆ. ಆತನ ವ್ಯವಸಾಯಕ್ಕೆ ಅತ್ಯಗತ್ಯವಾಗಿ ಬೇಕಾಗಿರತಕ್ಕ ಕಬ್ಬಿಣದ ಗುಳದಿಂದ ಹಿಡಿದು, ಆತನ ಸಂಸಾರಕ್ಕೆ ಬೇಕಾಗುವ ಎಣ್ಣೆ, ಬಟ್ಟೆ ಇತ್ಯಾದಿ ಪ್ರತಿಯೊಂದು ವಸ್ತುವನ್ನು ಕೊಂಡುಕೊಳ್ಳುವಾಗಲೂ ಆತನು ಸೇಲ್ಸ್‌ಟ್ಯಾಕ್ಸನ್ನು ತೆರಬೇಕಾಗಿವೆ. ಇದರ ಜೊತೆಗೆ ಸೆಂಟ್ರಲ್ ಎಕ್ಸೈಜ್ ಬೇರೆಕೊಡುತ್ತಿದ್ದಾನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಅವಶ್ಯಕ ವಸ್ತುಗಳ ಮೇಲೆ ಮಾರಾಟದ ತೆರಿಗೆಯನ್ನು ವಿಧಿಸಿರುವುದಿಲ್ಲ. ಸೀಮೆ ಎಣ್ಣೆಗೆ ಸೇಲ್ಸ್‌ಟ್ಯಾಕ್ಸ್ ಇಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಆದರೇನು? ಈ ದಿವಸ ಕೇವಲ ಗ್ರರೀಬನಾಗಿರತಕ್ಕವನೂ ಸಹ ಬೆಂಕಿ ಕಡ್ಡಿ, ಸೀಮೆಎಣ್ಣೆ ಹೀಗೆ ಪ್ರತಿಯೊಂದಕ್ಕೂ ಟ್ಯಾಕ್ಸ್ ತೆರುತ್ತಿದ್ದಾನೆ. ಏನೋ ತಾವು ಹೇಳಿದಂತೆ ಸೀಮೆ ಎಣ್ಣೆಗೆ ಸೇಲ್ಸ್‌ಟ್ಯಾಕ್ಸನ್ನು ಇತ್ತೀಚೆಗೆ ಹಾಕದೆಇರಬಹುದು. ವ್ಯವಸಾಯಕ್ಕೆ ಬೇಕಾದ ಗುಳದಿಂದ ಹಿಡಿದು ಆತನು ಬಳಸತಕ್ಕ ಪ್ರತಿಯೊಂದು ವಸ್ತುವಿಗೂ ಸೇಲ್ಸ್ ಟ್ಯಾಕ್ಸನ್ನು ತೆರುತ್ತಿದ್ದಾನೆ. ಹೀಗೆ ಆತನು ಉಪಯೋಗಿಸುವ ಪ್ರತಿಯೊಂದು ವಸ್ತುವಿಗೂ ಮಾರಾಟ ತೆರಿಗೆಯನ್ನು ತೆರುತ್ತಿದ್ದಾನೆ. ಇದರಲ್ಲಿ ಎಲ್ಲೋ ಅಲ್ಪ ಸ್ವಲ್ಪ ವಸ್ತುಗಳಿಗೆ, ಅವಶ್ಯಕವೆಂದು ಭಾವಿಸುವ ವಸ್ತುಗಳಿಗೆ ಮಾರಾಟ ತೆರಿಗೆಯನ್ನು ಹಾಕದಿರಬಹದು.

ಇನ್ನು ಸ್ಥಳೀಯ ಸಂಸ್ಥೆಗಳು ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿರುತ್ತವೆಯೋ ಅಲ್ಲೆಲ್ಲಾ ಆತನು ಮೊಹತರ್ಫಾಕಂದಾಯವನ್ನೂ ಕೂಡ ಕೊಡುತ್ತಿದ್ದಾನೆ. ಈ ಮೊಹತರ್ಫ ಕಂದಾಯದ ಮೇಲೂ ಒಂದು ರೂಪಾಯಿಗೆ 2 ಆಣೆಗಳಂತೆ ಎಜುಕೇಷನ್ ಸೆಸ್ಸು ಕೊಡಬೇಕಾಗಿದೆ. ಇದರ ಜೊತೆಗೆ ಹೆಲ್ತ್ ಸೆಸ್ ಬೇರೆ ತೆರಬೇಕಾಗಿದೆ. ಹೀಗೆ ಪ್ರತಿಯೊಂದು ವಿಧದಲ್ಲೂ ರೈತನು ತಾನು ಬೆಳೆಯತಕ್ಕ ಪದಾರ್ಥದಲ್ಲಿ ಬಂದ ವರಮಾನದಲ್ಲಿ ತನ್ನ ಜೀವನವನ್ನು ಕಳೆದುಕೊಂಡು ಇಷ್ಟು ವಿಧವಾಗಿ ಸೆಸ್ ಕೊಡುತ್ತಿದ್ದಾನೆ, ಅವನ ವರಮಾನದಲ್ಲಿ ಬಹುಭಾಗ ಸರ್ಕಾರದವರ ಬೊಕ್ಕಸಕ್ಕೆ ಸೇರುತ್ತದೆ.

ರೈತನಿಗೆ ಹೀಗೆ ತೆರಿಗೆಗಳನ್ನು ಕೊಡುವುದಕ್ಕೆ ಶಕ್ತಿಯಿದೆಯೋ ಇಲ್ಲವೇ ಎಂಬದನ್ನು ಯೋಚನೆಮಾಡೋಣ. 1914ರಿಂದ 1919ರವರೆಗೆ ನಡೆದಂಥ ಮೊದಲನೆಯ ಯುದ್ಧದ ಸಂದರ್ಭದಲ್ಲಿ ಧಾರಣೆವಾಸಿಗಳು ಸ್ವಲ್ಪ ಚೆನ್ನಾಗಿತ್ತು. ಅಲ್ಲಿಂದೀಚೆಗೆ 1930ನೆಯ ಇಸವಿಯಲ್ಲಿ depression ಕಾಲ. 1930ನೆಯ ಇಸವಿಯಲ್ಲಿ ನಾನೇ 3ರೂ. 8 ಆಣೆಗೆ ಒಂದು ಪಲ್ಲ ಬತ್ತವನ್ನು ಮಾರಿದ್ದೆ. ಆಗಲೂ ಇದೇ ಕಂದಾಯ, ತೆರಿಗೆ, ರೈಲ್ವೆ ಸೆಸ್ಸು, ಎಜುಕೇಷನ್ ಸೆಸ್ಸು ಕೊಡುತ್ತಿದ್ದೆವು. ಆಗ ಬರುತ್ತಿದ್ದ ಆದಾಯದಲ್ಲಿ ಕಂದಾಯ, ತೆರಿಗೆ, ಸೆಸ್ಸು ವಗೈರೆ ಕೊಟ್ಟರೆ ಕೇವಲ ಸ್ವಲ್ಪ ಉಳಿಯುತ್ತಿತ್ತು. ಎಷ್ಟೋ ಜನರು ಜಮೀನನ್ನು ಮಾರಿಕೊಂಡು ಹೋದರು ಅಂಥ ಸಂದರ್ಭದಲ್ಲಿ ಸರ್ಕಾರ ಯಾವ ವಿಧವಾದ ಸಹಾಯವನ್ನೂ ರೈತನಿಗೆ ನೀಡಲಿಲ್ಲ. ರೈತನ ಕಡೆ ತಿರುಗಿಯೂ ನೋಡಲಿಲ್ಲ. ರೈತನ ಮಕ್ಕಳು ಹೊಟ್ಟೆಗಿಲ್ಲದವರಾಗಿ ಸರ್ಕಾರದಲ್ಲಿ ಕೆಲಸಕ್ಕೆ ಸೇರಿಕೊಂಡರೆ ಏನೋ ಜೀವನಮಾಡಬಹುದೆಂಬ ಭಾವನೆಯಿತ್ತು. ಹೀಗೆ ಆಗಿದ್ದರೂ, ಈಗ ರೈತನು ಬೆಳೆಯುವ ಪದಾರ್ಥಕ್ಕೆ ಸ್ವಲ್ಪ ದುಡ್ಡು ಹೆಚ್ಚಿಗೆ ಬಂತೆಂದು ಹೇಳಿ ಅದನ್ನು ಕಿತ್ತುಕೊಳ್ಳಬೇಕೆಂಬ ಭಾವನೆ ಇಟ್ಟುಕೊಂಡಿದ್ದರೆ ಅದನ್ನು ಮುಂಚೆ ಬಿಟ್ಟುಬಿಡಬೇಕು. ಹತ್ತಿಪ್ಪತ್ತು ವರ್ಷಗಳ ಕಾಲ ಬಂದ ಕಷ್ಟಗಳನ್ನೆಲ್ಲಾ ಸಹಿಸಿಕೊಂಡು ಪದಾರ್ಥಗಳನ್ನು ಎಷ್ಟು ಕಡಮೆ ಬೆಲೆಗೆ ಮಾರಿದರೂ ಕಂದಾಯ ವಗೈರೆ ಕಟ್ಟಿಕೊಂಡು ತಾಳ್ಮೆಯಿಂದಿದ್ದವನಿಗೆ, ಈಗ ನಾಲ್ಕು ಕಾಸು ಬರುವಂತಾಯಿತೆಂದು ಹೇಳಿ ಪುನಃ ಈ ರೀತಿ ಹೊಸ ತೆರಿಗೆಗಳನ್ನು ಹಾಕಿ ಆದಷ್ಟು ವಸೂಲುಮಾಡೋಣ ಎಂಬ ಭಾವನೆಯನ್ನು ಸರ್ಕಾರದವರು ಬಿಟ್ಟುಬಿಡಬೇಕು. ಅವನು ಬೆಳೆದ ಬೆಳೆಗೆ ನ್ಯಾಯವಾದ ಬೆಲೆಕೊಡುತ್ತೇವೆಂಬ ಭರವಸೆಯನ್ನು ಇವತ್ತು ಆತನಿಗೆ ಕೊಡದಿರುವಾಗ ಈ ರೀತಿ ಹೆಚ್ಚಿಗೆ ಕಂದಾಯ ಹಾಕುವುದು ಸರಿಯಲ್ಲ. ನಿನ್ನೆಯದಿನ ಡಿಮ್ಯಾಂಡ್‌ಗಳ ಮೇಲೆ ಚರ್ಚೆಮಾಡುವ ಕಾಲದಲ್ಲಿ ರೈತನು ವ್ಯವಸಾಯದಲ್ಲಿ ಒಂದು ಜೂಜು ಆಡುತ್ತಿದ್ದಾನೆ ಎಂದು ಹೇಳಿದರು. ಅದು ನ್ಯಾಯವಾಗಿದೆ. ಮುಂಗಾರಿನ ಬೆಳೆಗೆ ಕಾಲಕ್ಕೆ ಸರಿಯಾದ ಮಳೆ ಆಗದಿದ್ದಲ್ಲಿ ಅವನ ಕೈಗೆ ಒಂದು ಕಾಳೂ ಸಿಕ್ಕುವುದಿಲ್ಲ. ಭೂಮಿ ವ್ಯವಸಾಯ ಮಾಡಿ ಚೆನ್ನಾಗಿ ಬೆಳೆ ಬೆಳೆದು ಹೊಟ್ಟೆ ತುಂಬ ಊಟಮಾಡೋಣ ಎಂದು ನೆಮ್ಮದಿಯಿಂದ ಅವನಿರಲು ಸಾಧ್ಯವೇ? ಇಂಥ ಸನ್ನಿವೇಶದಲ್ಲಿ ಯಾರೋ ಗೊಬ್ಬರಕೊಟ್ಟು ನೂರಾರು ರೂಪಾಯಿಗಳನ್ನು ಖರ್ಚು ಮಾಡಿಯೂ ಆತನಿಗೆ ಬೆಳೆಯಾಗದೆ ಹೋದರೆ ಸರ್ಕಾರ ಅವನಿಗೇನು ಸಹಾಯಮಾಡುತ್ತಿದೆ? ಪ್ರತಿಯೊಂದಕ್ಕೂ ಜವಾಬ್ದಾರಿ ತೆಗೆದುಕೊಂಡು ಕೊನೆಗೂ ಮಳೆ ಬಿದ್ದರೆ ಫಾಯಿದೆ ಇಲ್ಲದಿದ್ದರೆ ಮಾಡಿದ್ದೆಲ್ಲಾ ವ್ಯರ್ಥ ಈ ರೀತಿಯಾಗಿರುವ ರೈತನಿಗೆ ಯಾವ ವಿಧವಾದ ಸಹಾಯವೂ ಮಾಡದಿರುವಾಗ ಅವನಿಂದ ಹೆಚ್ಚು ಹೆಚ್ಚಿಗೆ ತೆರಿಗೆ ವಸೂಲುಮಾಡುತ್ತಿರುವುದು ಅನ್ಯಾಯ. ಏಕೆಂದರೆ, ಅವನು ಮೂಗು ಪ್ರಾಣಿ. ಕ್ರಮಕ್ರಮವಾಗಿ ಅವನಿಗೆ ಈಗೀಗ ತಿಳಿಯುತ್ತಿದೆ. ಆಡಳಿತ ಅಂದರೇನು, ಪ್ರತಿನಿಧಿ ಅಂದರೇನು, ಎಲ್ಲಿ, ಏನು ಕೇಳಬೇಕೆಂದು ತಿಳಿಯದೆ ಸತ್ತು ಹೋಗಿರುವ ರೈತನನ್ನು ತುಳಿಯುವುದಕ್ಕೆ ಹೋಗಬೇಡಿ; ಹತ್ತಾರು ವರ್ಷಗಳಲ್ಲಿ ಅವನು ವಿದ್ಯಾವಂತನಾಗಿ ಪ್ರತಿ ಗ್ರಾಮದಲ್ಲೂ ನೀವು ಹೋದಾಗ ನಿಮ್ಮನ್ನು ಹಿಡಿದು ನಿಲ್ಲಿಸಿ ಕೇಳುವ ಸಂದರ್ಭ ಬರುತ್ತದೆಯೆಂಬದನ್ನು ತಿಳಿಯಿರಿ.

ಶ್ರೀ ಕಡಿದಾಳ್ ಮಂಜಪ್ಪ.—ಈಗಲೂ ಕೇಳುತ್ತಿದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇದು ಸಾಲದು, ಹತ್ತು ರೂಪಾಯಿ ಗೊಬ್ಬರ ಹಾಕಿ 30ರೂಪಾಯಿ ಖರ್ಚುಮಾಡಿ ಬೆಳೆಯಾಗದೆ ಹೋದರೂ ತಗ್ಗದೆ, ತಾಳ್ಮೆಯಿಂದ ಭೂಮಿತಾಯಿ ಇವೊತ್ತಿಲ್ಲದಿದ್ದರೆ ಮುಂದಿನ ವರ್ಷವಾದರೂ ಕೊಡುತ್ತಾಳೆ ಎಂದು ತಗ್ಗಿ ಹೋಗತಕ್ಕ ಮನುಷ್ಯನಿಗೆ ನೀವು ಪದೇ ಪದೇ ಚಾವಟಿಯಿಂದ ಹೊಡೆಯುವುದು ಏನು ಧರ್ಮ? ನೋವಿನ ಮೇಲೆ ಮತ್ತೆ ನೋವು ಮಾಡಿದಂತಿದೆ. ನೀವು ಈಗಾಗಲೇ ಇರುವ ಸೆಸ್ಸಿನ ಮೇಲೆ ಇನ್ನೊಂದು ಸೆಸ್ ಹಾಕುವುದು ಅಧರ್ಮ. ಈ ಅಧರ್ಮವನ್ನು ಕೂಡಲೆ ತಪ್ಪಿಸಬೇಕೆಂದು ಹೇಳುತ್ತೇನೆ.

Sri P. R. RAMAIYA (Basavangudi).—I want to elicit one information. Now that the Railways are transferred to the Centre, I want to know whether the railway cess is being levied now.

Mr. SPEAKER.—I am not here to enlighten you. You must get that information elsewhere.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಅಧ್ಯಕ್ಷರೆ ಈ ವಿದ್ಯಾಭ್ಯಾಸದ ತೆರಿಗೆ ಈಗಾಗಲೇ ಅನೇಕ ವರ್ಷಗಳಿಂದ ಹಾಕುತ್ತಿದೆ. ವಿದ್ಯಾಭ್ಯಾಸದ ತೆರಿಗೆಯೆಂದರೆ ನಾವು ತಿಳಿದುಕೊಂಡಿದ್ದೆವು, ಪ್ರತಿಯೊಬ್ಬರಿಗೂ ಸರ್ವೇಸಾಮಾನ್ಯವಾಗಿ ಪ್ರೈಮರಿ ವಿದ್ಯಾಭ್ಯಾಸವನ್ನು ಒದಗಿಸಿಕೊಡುವುದಕ್ಕೆಂದು ಕೊಡುತ್ತಿರುವ ಶುಲ್ಕ ಎಂದು. ಇದೇ ನಂಬಿಕೆಯಿಂದ ಈಗಾಗಲೇ ಅನೇಕ ವರ್ಷಗಳಿಂದ ಈ ಸೆಸ್ಸನ್ನು ಕೊಡುತ್ತಾ ಬಂದಿದ್ದೇವೆ. ಆದರೆ, ಅದಕ್ಕೇನಾದರೂ ಅವರಿಗೆ ಪ್ರತಿಫಲದೊರಕಿದೆಯೆ ಎಂಬುದು ಇವರೆಗೂ ನಮ್ಮ ಗಮನಕ್ಕೆ ಬಂದಿಲ್ಲ. ಯಾವಾಗ್ಯೂ ಒಂದು ತೆರಿಗೆ ಹಾಕುವುದರಲ್ಲಿರಬೇಕಾದ ತತ್ವವೇನೆಂದರೆ, ತೆರಿಗೆಯಿಂದ ಯಾರು ಪ್ರಯೋಜನ ಹೊಂದುತ್ತಾರೋ ನ್ಯಾಯವಾಗಿ ಅವರು ತೆರಿಗೆಕೊಡಬೇಕು. ಹೀಗಿರುವಲ್ಲಿ ಎಷ್ಟೋ ವರ್ಷಗಳಿಂದ ಭೂಮಿಯ ಮೇಲೆ ತೆರಿಗೆ ಹಾಕಿ ರೈತರಿಂದ ವಸೂಲುಮಾಡುತ್ತಿದ್ದೀರಲ್ಲಾ ಅವರಿಗೆ ವಿದ್ಯಾಭ್ಯಾಸಕ್ಕೇನಾದರೂ ಸೌಕರ್ಯಮಾಡಿದ್ದೀರಾ ಎಂದು ತಮ್ಮನ್ನು ಕೇಳುತ್ತೇನೆ. ಇದನ್ನೇ ಅನೇಕ ಸಾರಿ ತಮ್ಮ ಮುಂದೆ ಒತ್ತಿ ಒತ್ತಿ ಹೇಳುತ್ತಿದ್ದೇನೆ. ಯಾರನ್ನೋ ತಲೆಹೊಡೆದು ಯಾರಿಗೋ ಕೊಡುವ ನೀತಿ ಬೇಡ, Rob Peter to Pay Paul ಎಂಬಂತೆ ಮಾಡಬೇಡಿ ಎಂದು ನಾನು ಪದೇ ಪದೇ ಹೇಳುತ್ತಿದ್ದೇನೆ. ಈಗ ತಾನೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ರೈತರಿಗಿರತಕ್ಕ ಕಷ್ಟವನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಈಗ ಕೊಡಬೇಕಾಗಿರುವ ತೆರಿಗೆ ಜೊತೆಗೆ ಈ ತೆರಿಗೆಯನ್ನೂ ಸೇರಿಸಿದರೆ ಒಂದು ರೂಪಾಯಿಗೆ 4½ ಆಣೆ ತೆರಿಗೆಕೊಟ್ಟಂತಾಗುತ್ತದೆ. ಇಷ್ಟು ಕೊಟ್ಟೂ ರೈತರಿಗೇನು ಪ್ರಯೋಜನ ಇದೆ? ನಿಜವಾಗಿಯೂ ಹೆಲ್ತ್ ಸೆಸ್ಸಿನಿಂದಲೇ ಆಗಲಿ, ವಿದ್ಯಾಭ್ಯಾಸದ ಸೆಸ್ಸಿನಿಂದಲೇ ಆಗಲಿ ರೈತರಿಗೇನಾದರೂ ಸೌಕರ್ಯಕಲ್ಪಿಸಿದ್ದರೆ ನೀವು ತೆರಿಗೆ ಹಾಕುವುದರಲ್ಲಿ ಸ್ವಲ್ಪ ಅರ್ಥವಿದೆ. ನಾಲ್ಕು ಮೈಲಿ ನಡೆದುಕೊಂಡು ಹೋದರೂ ರೈತರಮಕ್ಕಳಿಗೆ ಒಂದು ಸ್ಕೂಲಿಲ್ಲ. ಕಂದಾಯ ಮಾತ್ರ ಹಾಕುತ್ತೀರಿ ಅವಿದ್ಯಾವಂತರನ್ನು ವಿದ್ಯಾವಂತರನ್ನಾಗಿಮಾಡಿದರೆ ತಾನೆ ಅವರು ನಿಮ್ಮನ್ನು ಕೇಳುವುದು ಎಂದು ಹೇಳಿ ಅವರನ್ನು ವಿದ್ಯಾವಂತರನ್ನಾಗಿಯೇ ಮಾಡುವುದಿಲ್ಲ. ಆದರೆ ಮಾತ್ರ ಇಲ್ಲಿ ಬಂದು ಬಡಬೋರೆ ಗೌಡನನ್ನು ಉದ್ಧಾರಮಾಡುತ್ತೇನೆಂದು ಹೇಳಿಕೊಂಡು, ಅವರು ಸುಖವಾಗಿದ್ದಾರೆಂದು ಹೇಳಿ ಈ ರೀತಿ ಮಾಡುವುದು ಸರಿಯಲ್ಲ. ಆದ್ದರಿಂದ ನಾನು ಒಟ್ಟಿನಲ್ಲಿ ಹೇಳುವುದಿಷ್ಟು. ತೆರಿಗೆ ವಸೂಲುಮಾಡಿದರೆ ತೆರಿಗೆಯ ಪ್ರಯೋಜನವನ್ನು ರೈತರಿಗೆ ಕೊಡುತ್ತೇವೆಂದು ಎದೆ ಮುಟ್ಟಿಕೊಂಡು ಹೇಳಿ; ನಿಜವಾಗಿಯೂ ಇಲ್ಲಿಯವರೆಗೂ ಅವರು ಕೊಟ್ಟ ತೆರಿಗೆಗೆ ಪ್ರತಿ ಫಲವಾಗಿ ಏನಾದರೂ ಅವರುಗಳಿಗೆ ಸ್ಕೂಲಿನ ವ್ಯವಸ್ಥೆಮಾಡಿದ್ದೀರಾ! ಬೇರೆ ಕಡೆ ಕಟ್ಟಡ ಕಟ್ಟುವುದಕ್ಕೆ ಲಕ್ಷಗಟ್ಟಲೆ ಹಣ ಖರ್ಚುಮಾಡುತ್ತಿದ್ದೀರಿ, ಆದರೆ ರೈತರ ಮನೆಕಟ್ಟಿಕೊಳ್ಳಲಿಕ್ಕೆ ಹೆಂಚು ಮತ್ತು ಗಳ ಕೊಂಡುಕೊಳ್ಳುವುದಕ್ಕೆ ಸ್ವಲ್ಪ ಹಣ ಸಹಾಯಮಾಡಿ ಎಂದರೆ ಮಾಡುವುದಿಲ್ಲ. ಹೀಗೆಲ್ಲಾ ಇರುವಾಗ ಸ್ವಲ್ಪಮಟ್ಟಿಗಾದರೂ ನ್ಯಾಯದೃಷ್ಟಿಯಿಂದ ನೋಡಬೇಡವೇ ಆ ಬಡ ರೈತನನ್ನು? ನಾವೆಲ್ಲಾ ಇಷ್ಟು ವಿರೋಧಿಸಿದರೂ ಕೂಡ ತಾವು ಇದನ್ನು ಅವನ ತಲೆಯಮೇಲೆ ಹೊರಿಸುವುದಾದರೆ ಖಂಡಿತವಾಗಿಯೂ ತಮಗೆ ರೈತನ ಮೇಲೆ ಎಳ್ಳಷ್ಟೂ ಕನಿಕರವಿಲ್ಲ, ರೈತನನ್ನು ನೆಲಮಟ್ಟ ಮಾಡುವುದಕ್ಕೆ ತಯಾರಾಗಿ ನಿಂತಿದ್ದೀರೆಂದು ನಾನು ಹೇಳಬೇಕಾಗಿದೆ.

ಎರಡನೆಯದಾಗಿ, ಮೋಟಾರು ತೆರಿಗೆಯ ವಿಚಾರ. ಇದನ್ನು ಮೊನ್ನೆ ಮೊನ್ನೆ ಎನ್ನುವಂತೆ ಈಗ ಎರಡು ವರ್ಷಗಳ ಹಿಂದೆ ಒಮ್ಮೆ revise ಮಾಡಿದ್ದೀರಿ. ಈ ತೆರಿಗೆಯನ್ನು ಕೂಡ, ಈಗಾಗಲೇ ಹೇಳಿದಂತೆ, ತಾವು ವಸೂಲು ಮಾಡಿದರೂ ಆ ಹಣವನ್ನು ರಸ್ತೆ ವಗೈರೆಗಳನ್ನು ಉತ್ತಮಪಡಿಸುವುದಕ್ಕೆ ಉಪಯೋಗಿಸುತ್ತಿದ್ದೀರಾ? ಎಷ್ಟುಮಟ್ಟಿಗೆ ಸರ್ಕಾರದವರು ಇದರಿಂದ ಲಾಭ ಹೊಂದುವುದಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂಬುದನ್ನೂ ಈ ಸಂದರ್ಭದಲ್ಲಿ ನಾವು ಆಲೋಚನೆಮಾಡಬೇಕು. ಎರಡುಮೂರು ಸಾರಿ ಇದನ್ನು ಕೇಳಿದರೂ ಅವರು ಲೆಕ್ಕ ಒದಗಿಸಲಿಲ್ಲ. 120 ಲಕ್ಷ ರೂಪಾಯಿಗಳನ್ನು ಒದಗಿಸುತ್ತಿದ್ದೇವೆಂದು ಒಳಾಡಳಿತ ಸಚಿವರು ಹೇಳಿದರು, ನೀವು ಖಂಡಿತವಾಗಿಯೂ ಅಷ್ಟು ಹಣ ಕೊಡುತ್ತಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಯಾವುದು ?

ಶ್ರೀ ಬಿ. ಹುಚ್ಚೇಗೌಡ.—ರಸ್ತೆಗಳ ಮೇಲೆ ನೀವು ಖರ್ಚುಮಾಡುತ್ತಿರುವ ದುಡ್ಡು. ಸರ್ಕಾರದವರು ಈ ರೀತಿ ತೆರಿಗೆ ವಸೂಲುಮಾಡಿಕೊಂಡು ಅದರಿಂದ ಲಾಭ ಪಡೆಯುವುದಾಗಿದ್ದರೆ ಖಂಡಿತವಾಗಿಯೂ ದೇಶ ಅಭಿವೃದ್ಧಿಗೆ ಬರುವುದಿಲ್ಲ. ಏಕೆಂದರೆ ನಾವು ಮುಂದಿನ ದೃಷ್ಟಿಯಿಂದ, ದೂರದೃಷ್ಟಿಯಿಂದ ಈ ವಿಚಾರವನ್ನು ಪರಿಶೀಲಿಸಬೇಕು. ರಸ್ತೆ ಸರಿಯಾಗಿಟ್ಟುಕೊಂಡಿದ್ದರೆ ಟೈರುಗಳು ಹೆಚ್ಚು ದಿನ ಬಳಕೆಗೆ ಬರುತ್ತವೆ. ಆದ್ದರಿಂದ ತೆರಿಗೆಯನ್ನು ಹಾಕಿ ತೆರಿಗೆಗೆ ಸರಿಯಾಗಿ ರಿಲೀಫ್ ಕೊಡುವ ಹಾಗಿದ್ದರೆ ತೆರಿಗೆಯನ್ನು ಕೊಡೋಣ. ಇತ್ತ ಕಡೆ ಗಾಡಿಯನ್ನು ಹಾಳುಮಾಡಿಕೊಂಡು, ಅತ್ತ ಕಡೆ ತೆರಿಗೆಯನ್ನು ಕೊಡುವುದು ಯಾವ ಧರ್ಮ! ನಿಜವಾಗಿಯೂ ಎಷ್ಟು ತೆರಿಗೆ ವಸೂಲಾಗಿದೆಯೋ ಅದನ್ನೆಲ್ಲಾ ರಸ್ತೆಗಾಗಿಯೇ ಹಾಕುತ್ತೇವೆಂದು ಹೇಳಿದ್ದರೆ ಬೇರೆ ದೃಷ್ಟಿಯಿಂದ ಯೋಚನೆಮಾಡಬಹುದಾಗಿತ್ತು. ದೇಶದ ಸಂಪತ್ತಿಗೆ ಧಕ್ಕೆ ತರುವಂತಹುದಾಗಿದೆ ನಿಮ್ಮ ನೀತಿ. ಮುಂದೆ ಹೆಚ್ಚಿಗೆ ಉತ್ಪತ್ತಿ ತರುವುದಕ್ಕೆ ಬದಲಾಗಿ ಪ್ರತಿಕೂಲವಾಗಿಯೇ ಪರಿಣಮಿಸುತ್ತದೆ. ಏಕೆಂದರೆ, ಒಂದು ಮುಖ್ಯ ಕೈಗಾರಿಕೆಯನ್ನು ಹಾಳುಮಾಡುವ ದೃಷ್ಟಿಯಿಂದ ಈ ಮಸೂದೆಯನ್ನು ತಂದಂತಿದೆ. ಒಂದಕ್ಕೆ ಒಂದೂವರೆಯಷ್ಟು ಖರ್ಚು ಜಾಸ್ತಿಯಾಯಿತೆಂದು ನೂರು Vehicles ಇರುವ ಕಡೆ ಕಮ್ಮಿಯಾಯಿತೆಂದರೆ ಇದರಿಂದ ಬರುವ ದುಡ್ಡು ಇನ್ನೊಂದು ಭಾಗದಲ್ಲಿ ಹೊರಟು ಹೋದಂತಾಗುತ್ತದೆ. ಆದ್ದರಿಂದ ಈ ರೀತಿ ತೆರಿಗೆ ಹೆಚ್ಚುಮಾಡಿರುವುದರಿಂದ ನಿರೀಕ್ಷಿಸಿದ ಫಲವೇನೂ ದೊರಕುವುದಿಲ್ಲ. ಈ ಕಾರಣ, ಈ ಬಿಲ್ಲನ್ನು ವಾಪಸು ತೆಗೆದುಕೊಂಡು ದೇಶದಲ್ಲಿ ಅನುಕೂಲ ಪರಿಸ್ಥಿತಿ ಬಂದಾಗ, ವಾಹನಗಳ ಸಂಖ್ಯೆ ಇನ್ನೂ ಹೆಚ್ಚಿದಾಗ ಬೇಕಾದರೆ ಈ ತೆರಿಗೆಯನ್ನು ಹಾಕುವ ವಿಷಯವನ್ನು ಪುನರಾಲೋಚನೆ ಮಾಡಬಹುದೆಂದು ಹೇಳಿ, ವಿದ್ಯಾಭ್ಯಾಸದ ಸೆಸ್ಸನ್ನಂತೂ ಖಂಡಿತವಾಗಿ ಹಾಕಲೇ ಕೂಡದೆಂದು ಹೇಳಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. RAJASEKHARA MURTHY (Yelandur).—Mr. Speaker, Sir, when taxation proposals were placed before the Representative Assembly by the bureaucratic Government, the Congress members in their bullet like speeches characterised the taxation policy of the Government as indiscriminate, inequitable, oppressive, regressive, inhuman and wooden-headed. After the installation of the National Government the taxation policy of our Government has almost become more inhuman, more indiscriminate, more inequitable, more oppressive and more wooden-headed. The then complainants are now occupying the place of the accused in this Hall and they must be tried in this Assembly. Of course, they may have a good number of counsels to defend their party, but still we in the opposition carry the moral support with less number of counsels on our side. I am quite confident that we can establish our case against the imposition of the proposed new tax on motor vehicles.

First of all, the Government must draw a lesson from history, as to what happened during the period of Louis XIV when heavy taxation was levied on the people. I think the scenes of the French Revolution will have to be re-enacted on the soil of Mysore if they are going to persist in levying heavy taxation. So far I have not been able to understand the taxation policy of the Government. On the one hand, they are nationalising the road transport; on the other hand, they are issuing bus permits to private organisers and at the same time they are proposing fresh taxation.

5 P.M.

In this connection, I remember the famous saying of Mr. H. G. Wells, who said that the policy of the Government is a pitiful jumble of incoherent nonsense. I think I have to apply the same thing here also. The burden of taxation is too heavy on the bus-owners already. Mr. C. S. Nair, Secretary, Indian Roads and Transport Development Association says: "An average motor vehicle in the United States of America bears an annual tax incidence of Rs. 409 while a vehicle owner in India pays Rs. 1,913. The *per capita* income of the U.S.A. is Rs. 6,530 and motor taxation therefore is less than 6 per cent of one's annual income in that country. In India with a *per capita* income as low as Rs. 234 the tax incidence on a motor vehicle owner works out to over 800 per cent on the average annual income. Can motor transport expand in India under such conditions?"

Late Mr. N. Gopalaswamy Iyengar speaking in the Transport Advisory Council Meeting said:

"Some facts which have been brought to my notice recently have given me the impression that the tax burden that motor vehicles have to shoulder requires careful and urgent examination. I have noticed great variation in the level of this burden in different provinces and states. In some of them there has been a steep increase in the rates of tax proposed. There is insufficient reciprocity between some provinces. The anomalies due to double and in a few cases multiple taxation are, some of them, serious enough. These are avoidable impediments to the healthy development of motor transport. The time perhaps is ripe for a full survey of existing taxation on motor transport."

Sri H. SIDDAVEERAPPA.—May I know from what book is that quotation?

Sri M. RAJASEKHARA MURTHY.—I want notice for that.

Sir, the bus-owner is already subject to heavy taxation. He is paying 85 per cent as import duty on motor vehicles, 30 per cent excise duty on tyres, and excise cum import duty of 15 annas per gallon on petrol to the Centre. A vehicle owner has to pay sales-tax to the State on spare parts

(SRI M. RAJASEKHARA MURTHY.)

purchased and consumed. He is further asked to pay local tax like octroi, and vehicle tax, road cess, etc., to the State Government. Here, prior to 1951, if a bus owner had a route of only 50 miles, he was paying by way of tax Rs. 1,980 per annum till April 1951. After 1951 and up till now, he has been paying Rs. 2,569-9-4. According to the revised rate, he has to pay Rs. 4,525-9-4, *i.e.*, 130 per cent increase over the pre-1951 rate. Sir, tax in this particular industry affects the revenue since the law of diminishing return applies. The heavier the taxation, the lesser will be the consumption of petrol. Here we have two cases of Madras and Panjab. In 1932 the consumption of Petrol in Madras was 101.91 lakhs of gallons and in the year 1939 it was 158.4 lakhs gallons. Therefore, the increase in the consumption of petrol is about 55 per cent. In Punjab where taxation is very low, the consumption of petrol in 1932 was 52.64 lakhs gallons and in the year 1939 it was 113.02 lakhs gallons. The increase in the consumption of petrol is 115 per cent. This shows that lower the taxation the heavier the consumption of petrol. If the Government levy heavy taxes, the consumption of petrol will be less and the returns by way of sales-tax will be low. Take Madras and Bengal. In Madras taxation is very high. In regard to the number of vehicles in Madras, in 1935 there were 20,889, and in 1947, there were 21,560 vehicles. Therefore, the increase in the number of vehicles is only 3.2 per cent. In Bengal where taxation is very low the growth in the number of vehicles will be more In the year 1935, there were 25,247 vehicles and in the year 1947, there were 40,531. The increase in the number of vehicles is 60.5 per cent. The additional revenue expected by the Government by way of increased taxation will be offset by the reduction in the growth of vehicles on account of heavy taxation.

Further, Sir, heavy taxation affects trade and industry. Cost of transport enters into cost of production. A country which enjoys high cost of transport, there the cost of production will be very high. In a country where the cost of transport will be very low, cost of production will be very much less. Therefore, a country which enjoys lower transport taxation will be in a better position to compete with another country which is suffering from very heavy taxation.

Further, some of the bus-owners are running their buses in mofussil places for distances of only thirty and forty miles. Those persons will not be in a position to pay heavy taxation and they will have to wind up their business—so much so, it will affect the travelling public in those particular localities.

The Motor Vehicles Taxation Enquiry Committee which was constituted in the year 1950 made certain recommendations. The first one is that the taxation policy of the Indian Union and the States should be so co-ordinated that the motor vehicle user as such is not called upon to pay the expenses of implementing any other Union or State's policy. The second one is that all local taxes on motor vehicles levied by municipalities and district boards should be abolished.

The prices on spare parts have recently gone up. The chassis rate in 1938 was Rs. 2,500. In 1946 it was Rs. 6,850; in 1948 it was Rs. 9,400; in 1951, it was Rs. 13,000; in 1952 it rose up to Rs. 16,000; and now it is Rs. 17,000 and more. The body building rate has also gone up. The bus owner is crippled under heavy taxation and is not in a position to bear any further burden. Further, it is an indirect tax. The burden of this tax cannot be shifted to the passenger for two reasons—firstly on account of the issue of a good number of permits and secondly the maximum rate on account of which he is not in a position to charge more than what is fixed under law *i.e.*, 8 pies

per mile. If he charges more, he will be prosecuted. In these circumstances, he will not be in a position to shift the burden of tax. He has to pay these taxes out of his savings and he will not be in a position to run buses on account of the heavy taxes that are levied upon him. Therefore, in these circumstances, I am not in favour of recommending these taxation measures.

ಶ್ರೀ ಯು. ಎಂ. ಮಾದಪ್ಪ (ಚಾಮರಾಜನಗರ).— ಸ್ವಾಮಿ, ಈಗ ತೆರಿಗೆಗಳ ಪರಂಪರೆ ನಮ್ಮ ರೈತರ ಮುಂದಿದೆ. ಇದನ್ನು ಎದುರಿಸಲು ಯಾರು ಬರಬೇಕು ? ರೈತರೇ ಬರಬೇಕು. ಇಲ್ಲಿ ನಾವು ರೈತರ ಪ್ರತಿನಿಧಿಗಳಾಗಿ ಬಂದಿದ್ದೇವೆ. ರೈತರ ಕಷ್ಟಸುಖಗಳನ್ನು ನಾವು ಸುಧಾರಿಸಬೇಕು. ಹಾಗಿಲ್ಲದೆ ಇಲ್ಲಿಗೆ ನಾವು ಬಂದು ಅವರ ಕಷ್ಟಗಳನ್ನು ಹೆಚ್ಚಿಸುವುದಾದರೆ ನಾವು ಅವರ ಪ್ರತಿನಿಧಿಗಳೆ ! ಈ ವಿಚಾರವನ್ನು ನಾನೊಬ್ಬನೇ ಅಲ್ಲ ಪ್ರತಿಯೊಬ್ಬ ಸದಸ್ಯರೂ ಯೋಚಿಸಬೇಕು. ನಾವು ನಾಲ್ಕು ಗೋಡೆಗಳ ನಡುವೆ ಕುಳಿತು ಏನುಬೇಕಾದರೂ ಮಾಡಬಹುದು. ಆದರೆ ಹೊರಗೆ ಹೋದರೆ ವಿಷಯವೇ ಬೇರೆ. ಈಗಾಗಲೇ ಹಾಕಿರುವ ತೆರಿಗೆಗಳ ಹೊರೆಯನ್ನು ರೈತ ಹೊರುವುದಕ್ಕೆ ಸಾಧ್ಯವೆ, ಆ ಹೊರೆಯ ಜೊತೆಗೆ ಈ ಹೊರೆಯನ್ನು ಹೊರಿಸುವುದು ನ್ಯಾಯವೆ, ಅವನು ಹೊರಬಲ್ಲನೆ ಎಂಬ ವಿಷಯವಾಗಿ ಅರ್ಥಶಾಸ್ತ್ರಜ್ಞರನ್ನು ಕೇಳದೆ ಈ ಮಸೂದೆಯನ್ನು ಸರ್ಕಾರದವರು ತಂದಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಬಡ್ಜೆಟ್ಟಿನಲ್ಲಿ ಬಂದಿರುವ ಖೋತಾವನ್ನು ಸರಿತೂಗಿಸಿದರೆ ಸಾಕೆಂಬ ಒಂದೇ ಒಂದು ಆಧಾರದ ಮೇಲೆ ಇದನ್ನು ತಂದಿರುವುದು ಸರಿಯಲ್ಲ. ರೈತ ನೇಗಿಲಯೋಗಿ, ಎಂದರೆ ಅವನಿಗೆ ಯಾವ ಆಶೆಯೂ ಇಲ್ಲ. ಕಣ್ಣೊರಸುವಂತೆ ಮಾತನಾಡಿ ಅಥವಾ ಯಾವ ರೀತಿಯಲ್ಲಿ ಯಾರ ಬಾಯನ್ನೊ ಬಡಿದು ಅವನು ಸಂಪಾದನೆ ಮಾಡಿ ಜೀವನ ಮಾಡುವವನಲ್ಲ. ಇಂಥವನ ಮೇಲೆ ತೆರಿಗೆಗಳ ಹೊರೆಯನ್ನು ಹೊರಿಸಿದರೆ, ಅವನು ಹೇಗೆ ಜೀವನ ನಡೆಸಬೇಕು ! ಅವನ ಕಾಲ ಮೇಲೆ ಅವನು ನಿಲ್ಲಬೇಕೆಂದು ಅವನಿಗೆ ಸಹಾಯಮಾಡುವ ಬದಲು ಇಂದು ಸರ್ಕಾರ ಅವನನ್ನು ನಾನು ನಿಲ್ಲಿಸುತ್ತೇನೆಂದು ಪ್ರಯತ್ನಪಡುತ್ತಿರುವಂತಿದೆ. ಹಿಂದೆ ಬ್ರಿಟಿಷರು ರೈತರ ರಕ್ತವನ್ನು ಹೀರುತ್ತಾರೆ, ಬಡವರ ರಕ್ತ ಹೀರುತ್ತಾರೆ, ನಾವು ಅದನ್ನು ತಪ್ಪಿಸಿ ಕಾಪಾಡುತ್ತೇವೆಂದು ಹೇಳುತ್ತಿದ್ದು, ಇಂದು ತಾವೇ ರೈತನ ರಕ್ತವನ್ನು ಹೀರುವುದಕ್ಕೆ ಬಂದಂತೆ ಕಾಣುತ್ತದೆ. ಕಾಂಗ್ರೆಸ್ಸಿನವರು ಹಿಂದೆ ರೈತನ ಜೀವನಮಟ್ಟವನ್ನು ಹೆಚ್ಚಿಸಬೇಕೆಂದು ಹೇಳುತ್ತಿದ್ದರು. ಈ ಹೊತ್ತು ಈ ಮಟ್ಟಕ್ಕೆ ಇಳಿದಿದ್ದಾರೆ. ರೈತನ 'ಪರ್‌ಕ್ಯಾಪಿಟಾ ಇನ್‌ಕಂ' ಹಿಂದೆ ಎಷ್ಟಿತ್ತು, ಈ ಹೊತ್ತು ಎಷ್ಟಿದೆ ಎಂಬುದನ್ನು ಅವರು ಗಮನಿಸಿಲ್ಲ. ರೈತನು ಬೆಳೆಯುವ ಧಾನ್ಯಗಳ ಬೆಲೆ ಹೆಚ್ಚಿದೆಯೆಂದು ಹೇಳಬಹುದು ; ಆದರೆ ಅವನಿಗಿರುವ ಖರ್ಚುಗಳು, ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಸರ್ಕಾರ ಅವನ ಮೇಲೆ ಹೇರಿರುವ ತೆರಿಗೆಗಳು ಇವನ್ನು ಯೋಚನೆ ಮಾಡಿದ್ದಾರೆಯೆ ! ಬಡವರ ಸರ್ಕಾರ, ರೈತರ ಸರ್ಕಾರ ಎಂಬ ಹೆಸರಿನಲ್ಲಿ ಅವರ ಕೊಲೆಯೆ ? ಇದು ನಿಜವಾಗಿಯೂ ರೈತರ ಯೋಗಕ್ಷೇಮಕ್ಕಾಗಿ ಇರುವ ಸರ್ಕಾರವಲ್ಲ, ಸ್ವಲ್ಪ ಜನರ ಹಿತಕ್ಕಾಗಿರುವ ಸರ್ಕಾರ. ರೈತನ ಸಾಲವೆಷ್ಟಿದೆ, ಅವನು ಕೊಡತಕ್ಕ ತೆರಿಗೆಯೆಷ್ಟು, ಅವನ ಉತ್ಪತ್ತಿಯೇನು, ಅವನ ಸಂಸಾರದಲ್ಲಿ ಎಷ್ಟು ಜನರಿದ್ದಾರೆ, ಅವನು ಮಾಡಿರುವ ಸಾಲದ ಬಡ್ಡಿಗಾಗಿ ಎಷ್ಟು ಹೋಗುತ್ತದೆ, ಮುಂತಾದ ಎಲ್ಲಾ ಅಂಶಗಳನ್ನೂ ಯೋಚನೆ ಮಾಡದೆ, ಇಂದು ಇದ್ದಕ್ಕಿದ್ದ ಹಾಗೆ, ಯಾರಿಗೂ ತಿಳಿಯದಂತೆ ತೆರಿಗೆಯನ್ನು ಹೇರಿ, ವಸೂಲಿಗೆ ಪಟೇಲ ಶ್ಯಾನುಭೋಗರು ಹೋದರೆ ಅವನ ಗತಿ ಏನು ? ಅವನು ಹಣ ನೋಡುವುದೇ ಕಷ್ಟ. "ಒಂದು ದಿವಸದ ಜೀವನಕ್ಕೆ ಒಂದಾಣೆ ಸಿಕ್ಕಿದರೆ ಸಾಕು ಅರ್ಧಾಣೆ ಟೀ ಸೊಪ್ಪು ಮತ್ತು ನನ್ನ ಜಮೀನಿನಲ್ಲಿ ಬೆಳೆದ ಅರ್ಧಾಣೆ ಬೆಲ್ಲ, ಕಡಲೇಕಾಯಿ ಉಪಯೋಗಿಸಿ ನನ್ನ ಜೀವನ ತಳ್ಳಬಹುದು ಎಂದರೆ, ಅದೂ ಇಲ್ಲದಿರುವಾಗ ನಾನೆಲ್ಲಿ ತೆರಿಗೆ ಕೊಡಲಿ, ಇದಕ್ಕಾಗಿ ನನ್ನ ಬಾಳನ್ನು ಕೆಡಿಸಬೇಡಿ" ಎಂದು ರೈತ ಗ್ರಾಮಾಧಿಕಾರಿಗಳನ್ನು ಬೇಡಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಹಿಂದೆ ಹೆಲ್ತ್ ಸೆಸ್ ಹಾಕಿದಾಗ ಕಂದಾಯ ವಸೂಲಾದ ನಂತರ ಅದನ್ನು ಜಾರಿಗೆ ತರಬೇಕೆಂದು ಆಜ್ಞೆಯಾಯಿತು. ಆಗ ಅರ್ಧಾಣೆಯನ್ನು ವಸೂಲು ಮಾಡುವುದು ಕಷ್ಟವಾಯಿತು, ಹಾಗೂ ಇನ್ನೂ ವಸೂಲಾಗಿಲ್ಲ. ಹೀಗೆ ಅರ್ಧಾಣೆ ವಸೂಲು ಮಾಡುವುದೂ ಇಷ್ಟು ಕಷ್ಟವಾಗಿರುವಾಗ, ವಿದ್ಯಾಭ್ಯಾಸದ ಸೆಸ್ಸು, ಹೆಲ್ತ್ ಸೆಸ್ಸು, ಮೋಟಾರು ಸೆಸ್ಸು ಇವುಗಳನ್ನೆಲ್ಲಾ ವಿಧಿಸಿ, ಐಶ್ವರ್ಯವಂತರ ಮೇಲೆ ಮಾತ್ರ ಈ ತೆರಿಗೆ ಬೀಳುತ್ತದೆಯೆಂದರೆ, ನಿಜವಾಗಿ ಇದು ಶೋಚನೀಯವಾದ ವಿಷಯ. ರೈತ ಬೆಳೆಯತಕ್ಕ ಧಾನ್ಯ ದವಸಗಳಿಗೆ ಸರಿಯಾದ ವ್ಯಾಪಾರ ಕ್ಷೇತ್ರವನ್ನು ಮಾಡಿಕೊಡಬೇಕೆಂದು ಹೇಳುತ್ತಿದ್ದ ಸರ್ಕಾರ ಅದು ಯಾವುದನ್ನೂ ಮಾಡದೆ ಹೀಗೆ ಅವರ ಹಿತಕ್ಕೆ ಧಕ್ಕೆ ತರುವುದು ನ್ಯಾಯವಲ್ಲ. ಶ್ರೀಮಾನ್ ರಾಜಶೇಖರ ಮೂರ್ತಿಯವರು ಹೇಳಿದ ಹಾಗೆ, ಶ್ರೀಮಂತರ ಮೇಲೆ ಈ ತೆರಿಗೆ ಬೀಳುವ ಹಾಗಿಲ್ಲ, ಪ್ರಯಾಣಮಾಡುವವರ ಮೇಲೆ ಬೀಳುತ್ತದೆ. ಒಂದು ವೇಳೆ ಇದು ಆಗದಿದ್ದರೆ ಈ ರೀತಿ ಬಸ್ಸು ಮಾಲೀಕರು ಬಸ್ಸುಗಳನ್ನು ನಿಲ್ಲಿಸಬೇಕು, ನಷ್ಟವಾದ ಮೇಲೆ ಬಸ್ಸುಗಳನ್ನು ಮಾರಬೇಕು, ಆ ರೂಟ್‌ಗಳನ್ನು ಮುಚ್ಚಬೇಕು. ಹೀಗಾಗುವುದರಿಂದ ಗ್ರಾಮಾಂತರಕ್ಕೆ ಹೋಗುವ ಅನೇಕ ಬಸ್ಸುಗಳು ನಿಲ್ಲುತ್ತವೆ. ಇದರಿಂದ ರೈತನಿಗೆ ಕಷ್ಟವಾಗುವುದಿಲ್ಲವೆ ! ಟಾರು ಮತ್ತು ಕಾನ್‌ಕ್ರೀಟ್ ರಸ್ತೆಗಳಲ್ಲಿ ಬಸ್ಸುಗಳನ್ನೋಡಿಸುವುದು ಸುಲಭ ಆದರೆ ಹಳ್ಳಿಗಳ ರಸ್ತೆಗಳು ಉತ್ತಮವಾಗಿಲ್ಲದುದರಿಂದ ಓಡಿಸುವುದು ಎಷ್ಟೋ ಕಷ್ಟ. ಪದೇ ಪದೇ ಸ್ಪ್ರಿಂಗ್‌ಗಳು, ಟೈರುಗಳು ಮತ್ತು ಇತರ ಭಾಗಗಳು ಹೋಗುತ್ತವೆ. ಇದೆಲ್ಲಾ ಕಷ್ಟ. ಈ ಸಿಮೆಂಟ್ ಕಾನ್‌ಕ್ರೀಟ್ ರೋಡ್‌ಗಳಿರತಕ್ಕ ಕಡೆ ಬಸ್ಸುಗಳನ್ನು ಓಡಿಸಲು ಅಷ್ಟು ಹೆಚ್ಚಿಗೆ ಪೆಟ್ರೋಲ್ ಬೇಕಾಗುವುದಿಲ್ಲ. ಹಳ್ಳಿಗಳ ಕಡೆ ಇರತಕ್ಕ ರಸ್ತೆಗಳು ತೀರ ಕೆಟ್ಟಿರುವುದರಿಂದ ನಾನು ಈ ಮೇಲೆ ಹೇಳಿರತಕ್ಕ ರಸ್ತೆಗಳಲ್ಲಿ ಖರ್ಚಾಗುವ ಪೆಟ್ರೋಲಿಗಿಂತ ಹೆಚ್ಚು ಪೆಟ್ರೋಲು ಖರ್ಚಾಗುತ್ತದೆ. ಸಿಮೆಂಟ್ ರಸ್ತೆಗಳಲ್ಲಿ ಓಡಾಡತಕ್ಕ ಬಸ್ಸುಗಳು 8—10 ವರ್ಷ ಕಾಲ ಬದುಕಿದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಓಡತಕ್ಕ ವಾಹನಗಳು ಎಂಟೆಂಟು ದಿವಸಕ್ಕೊ ಕೆಟ್ಟು ಹೋಗುತ್ತಿರುತ್ತದೆ. ರೈತಾಪಿ ವರ್ಗದವರು ಏನೋ ಗ್ರಾಮಾಂತರ ಪ್ರದೇಶಗಳಲ್ಲಿ ಮಾರ್ಗ ಸೌಕರ್ಯವಾಯಿತು. ಅನುಕೂಲ ಹೊಂದೋಣವೆಂದು

(ಶ್ರೀ ಯು. ಎಂ. ಮಾದಪ್ಪ)

ಆಸೆಯಿಟ್ಟುಕೊಂಡಿದ್ದರು ಈಗ ಅದಕ್ಕೂ ಕಲ್ಲುಬಿತ್ತು. ಯಾವ ಬಾಬುಗಳನ್ನೇ ತೆಗೆದುಕೊಂಡರೂ, ರೈತನಿಗೆ ಅನುಕೂಲವೂ ಇಲ್ಲ. ಅವನಿಗೆ ಉಳಿಗಾಲವೂ ಇಲ್ಲ. ಒಂದು ಗೊನೆ ಬಾಳೆಹಣ್ಣಿಗೆ 8 ಆಣೆಯಿಂದ ಹಿಡಿದು ಒಂದು ರೂಪಾಯಿನವರೆಗೂ, ಬಾಡಿಗೆ ಕೊಟ್ಟು ಅದನ್ನು ಸಾಗಿಸುವುದಕ್ಕೆ ಅವನಿಗೆ ಸಾಧ್ಯವಿದೆಯೋ ! ಗ್ರಾಮಾಂತರಗಳಲ್ಲಿ ರೈತನ ಸ್ಥಿತಿ ಏನಾಗಿದೆ, ಅವನ ಕಷ್ಟಗಳೇನು ಎಂಬುದನ್ನು ಯಾರೂ ಕೇಳುವರೇ ಇಲ್ಲದಂತಾಗಿದೆ. ಈಗಿನ ಕಾಲದಲ್ಲಿ ಲಾರಿ ಬಾಡಿಗೆ ಎಷ್ಟು ಸುಲಭ ದರದಲ್ಲಿದ್ದರೆ ರೈತರಿಗೆ ಅಷ್ಟೂ ಅನುಕೂಲ. ರೈತನು ಬೆಳೆಯುತಕ್ಕ ಸಾಮಾನುಗಳ ಪೈಕಿ ಬೇಗ ಕೊಳೆತು ಹೋಗುವಂತ ಹಣ್ಣು ಹಂಪಲು ಇತ್ಯಾದಿಗಳನ್ನು 60—70 ಮೈಲಿ ದೂರದಲ್ಲಿರುವ ದೊಡ್ಡ ದೊಡ್ಡ ಪಟ್ಟಣಗಳಿಗೆ ಎತ್ತಿನಗಾಡಿಯಲ್ಲಿ ಸಾಗಿಸಬೇಕಾಗಿದ್ದರೆ ಮೂರು ನಾಲ್ಕು ದಿವಸಗಳಾದರೂ ಬೇಕಾಗುತ್ತವೆ. ಅಷ್ಟು ದಿನಗಳಲ್ಲಿ ಆ ಹಣ್ಣು ಹಂಪಲುಗಳೆಲ್ಲಾ ಪಟ್ಟಣಕ್ಕೆ ಬಂದು ಸೇರುವುದರೊಳಗೆ ಕೊಳೆತು ಹಾಳಾಗಿ ಹೋಗುತ್ತವೆ, ಇದಕ್ಕಾಗಿ ರೈತ ಲಾರಿ ಸೌಲಭ್ಯಗಳನ್ನು ಅಪೇಕ್ಷಿಸದೆ ಇದ್ದರೆ ಸಾಧ್ಯವೇ ಇಲ್ಲ. ಇನ್ನು ಗ್ರಾಮಾಂತರಗಳ ರಸ್ತೆಗಳ ವಿಚಾರ ನೋಡುವುದಾದರೆ ಅವು ಎತ್ತಿನ ಗಾಡಿಗಳಿಗೂ ಸುಖವಿಲ್ಲ. ಲಾರಿ ಮೋಟಾರುಗಳ ಪ್ರಯಾಣಕ್ಕೂ ಸುಖವಿಲ್ಲ. ಶ್ರೀ ವಾರ್ಜ಼್ ಮಹಮದ್ ಇಮಾಂ ಅವರು ಒಂದಾವರ್ತಿ ಯಾವುದೋ ಗ್ರಾಮಾಂತರ ಪ್ರದೇಶದಲ್ಲಿ ಚುನಾವಣೆ ಸಂಬಂಧವಾಗಿ ಪ್ರವಾಸಮಾಡುತ್ತಿದ್ದಾಗ 'ಗಾಡಿಯನ್ನೂ ಸಹ ಎಳೆಯಲಿಕ್ಕಾಗದೆ ಎತ್ತುಗಳು ಪಡುತ್ತಿದ್ದ ವ್ಯಥೆಯನ್ನು ನಾನು ಕಣ್ಣಿನಿಂದ ನೋಡಲಾರದೆ ಹೋದೆ. ಆದ್ದರಿಂದ ಅಲ್ಲಿನ ಜನರಿಗೆ ಆ ರಸ್ತೆಯನ್ನಾದರೂ ಸರಿಮಾಡಿಸಿಕೊಡಿ' ಎಂಬುದಾಗಿ ಸರ್ಕಾರಕ್ಕೆ ಈ ಸಭೆಯಲ್ಲಿ ತಿಳಿಸಿದರು. ಹೀಗೆ ಅವರು ತಿಳಿಸಬೇಕಾಗಿದ್ದರೆ ಅವರ ಮನಸ್ಸು ಎಷ್ಟು ನೊಂದಿರಬಹುದು ಎಂಬುದನ್ನು ನಾವು ಗಮನಿಸಬೇಕಾದ ಅಂಶ. ಹೀಗೆ ನಾನಾ ಕಷ್ಟಗಳಿಗೆ ಈಡಾಗಿರತಕ್ಕ ರೈತನಿಗೆ ಅನುಕೂಲಮಾಡಿಕೊಡುವುದನ್ನು ಬಿಟ್ಟು ಆತನ ಮೇಲೆ ಮತ್ತಷ್ಟು ತೆರಿಗೆಗಳನ್ನು ಹಾಕುವುದು ಯಾವ ಧರ್ಮ ? ತಾವು ಯಾವ ತೆರಿಗೆಗಳನ್ನು ವಿಧಾಯಕಮಾಡಿದರೂ, ಕಡೆಗೆ ಅವು ರೈತನ ತಲೆಯ ಮೇಲೆ ಬೀಳತಕ್ಕವುಗಳಾಗಿರುತ್ತವೆ. ರೈತನಿಂದ ಹೆಚ್ಚು ಹೆಚ್ಚು ತೆರಿಗೆಗಳನ್ನು ಸರ್ಕಾರದವರು ವಸೂಲ್ಮಾಡಿಕೊಳ್ಳುತ್ತಾ ಇರುವಾಗ ಅದೇ ಪ್ರಮಾಣದಲ್ಲಿ ಅವರಿಗೆ ಅನುಕೂಲತೆಗಳನ್ನು ಏಕೆ ಕಲ್ಪಿಸಿಕೊಡಬಾರದೆಂದು ನಾನು ಕೇಳುತ್ತೇನೆ. ಬಡಬೋರೇಗೌಡನ ಉದ್ಧಾರಕ್ಕಾಗಿ ತಲೆಯೆತ್ತಿರತಕ್ಕ ಸರ್ಕಾರ ಇದು ಎಂದು ಹೇಳಿಕೊಳ್ಳುತ್ತಾ ತಾವು ರೈತನಿಗೆ ಯಾವ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದೀರಿ ? ಪಕ್ಷ ಪ್ರತಿ ಪಕ್ಷಗಳ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ಈ ದಿವಸ ರೈತನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸರ್ಕಾರದ ಬೊಕ್ಕಸವನ್ನು ತುಂಬಲು ನಾನಾ ರೂಪದಲ್ಲಿ ತೆರಿಗೆಗಳನ್ನು ಕೊಡುತ್ತಿದ್ದಾನೆ ಎಂಬ ಅಂಶ ತಮ್ಮೆಲ್ಲರಿಗೂ ಗೊತ್ತಿದೆ. ಆದರೆ ತಮಗೂ ಮತ್ತು ತಮ್ಮ ಪಕ್ಷದವರಿಗೂ ಇಂಥಾ ವಿಷಯಗಳು ಗೊತ್ತಿದ್ದರೂ ಅವರು ಹೃದಯ ಬಿಚ್ಚಿ ಮಾತನಾಡುತ್ತಿಲ್ಲ. ಇನ್ನೂ ವಿರೋಧ ಪಕ್ಷದವರು ಸಲಹೆ ಮಾಡಬೇಕಾದುದು ಅವರ ಕರ್ತವ್ಯ ದೃಷ್ಟಿಯಿಂದ ಕೊಡತಕ್ಕ ಸಲಹೆಗಳು ವಿರೋಧ ಪಕ್ಷಗಳ ಸಲಹೆಯೆಂದು ತಾವು ಅವುಗಳನ್ನು ಅನುಕರಣೆ ಮಾಡುತ್ತಿಲ್ಲ. ತಮ್ಮ ಪಕ್ಷದವರು ಮನಸ್ಸು ಬಿಚ್ಚಿ ವಿಷಯಗಳನ್ನು ತಿಳಿಸುತ್ತಿಲ್ಲ. ಹೀಗಾದರೆ ರೈತನ ಗತಿ ಏನಾದೀತು! ನಾನು ವಿರೋಧ ಪಕ್ಷದ ಒಬ್ಬ ಸದಸ್ಯನೆಂಬುವ ಮನೋಭಾವವನ್ನು ಬಿಟ್ಟು ನಿಜವಾದ ರೈತನ ಪ್ರತಿನಿಧಿಯಾಗಿದ್ದೇನೆಂಬ ಮನೋಭಾವದಿಂದ ಈ ಸಮಸ್ಯೆಗಳ ಅವಾಂತರ ಎಷ್ಟರಮಟ್ಟಿಗೆ ರೈತನಿಗೆ ಕಿರುಕುಳಕೊಡುತ್ತಿವೆಯೆಂಬುದನ್ನು ತಿಳಿಸುವುದಕ್ಕೆ ಅಧ್ಯಕ್ಷರು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ನನ್ನ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಟಿ ಕೆಂಪರಾಜ್ (ಬೆಂಗಳೂರು ದಕ್ಷಿಣ ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಮಾತನಾಡಿದ ನಮ್ಮ ವಿರೋಧ ಪಕ್ಷದ ಮಾನ್ಯ ಸದಸ್ಯರು ಅವರ ಹಳೆಯ ಸಂಪ್ರದಾಯ ಮತ್ತು ವ್ಯಕ್ತಿಗಳನ್ನು ಅನುಸರಿಸಿ ನಮ್ಮ ಮುಂದೆ ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಅವರ ಬಿಟ್ಟು ಟೀಕೆಗಳ ಸಾರಾಂಶದಿಂದ ನಾವು ಇಷ್ಟುಮಾತ್ರ ತಿಳಿದುಕೊಳ್ಳಬಹುದು. ರೈತನನ್ನು ಉದ್ಧಾರಮಾಡುವುದಕ್ಕಾಗಿ ಅವತರಿಸಿದ ಮಹಾ ಪುರುಷರು ಇವರೇ ಏನೋ ಎನ್ನುವಂತೆ ಭಾಷಣಮಾಡಿದರು. ಇದು ಬಹಳ ಆಶ್ಚರ್ಯ. ಅವರು ರೈತರ ಪ್ರತಿನಿಧಿಗಳಾಗಿರಬಹುದು ಆದರೆ ಅವರು ಮಾಡಿರತಕ್ಕ ವಾದಗಳಿಂದ ದೇಶಕ್ಕೆ ಹಿತವೇ ಅಥವಾ ಅಹಿತವೇ ಎಂಬುದನ್ನು ತಿಳಿಸತಕ್ಕ ಬಗ್ಗೆ ಒಂದು ವಿಚಾರವನ್ನು ನಾನು ಅವರ ಗಮನಕ್ಕೆ ತರಬೇಕೆಂದಿದ್ದೇನೆ. ಯಾವ ದೇಶದಲ್ಲೇ ಆಗಲಿ ಪ್ರಗತಿ ಸೂಚನೆಗಳು ಇವೆಯೆಂದು ಹೇಳಬೇಕಾಗಿದ್ದರೆ, ನಾವು ಆ ದೇಶದ ಬಡ್ಜೆಟ್ ಪಟ್ಟಿ ಮತ್ತು ಆ ದೇಶದಲ್ಲಿ ತೆರಿಗೆ ಎತ್ತತಕ್ಕಂಥ ನೀತಿ ಹೇಗಿದೆ ಎಂಬುದರಿಂದಲೇ ನಿರ್ಧರಿಸಬೇಕಾಗಿರುತ್ತದೆ.

The progress of any State will depend upon the progressive taxation that is maintained.

ಇದು ಪಾಶ್ಚಾತ್ಯ ದೇಶದ ಅನೇಕ ಆರ್ಥಿಕ ಪ್ರವೀಣರು ಹೇಳಿರತಕ್ಕಂಥ ಒಂದು ವಾದ. ಯಾವ ದೇಶದಲ್ಲಿ ನಾವು ನೇಷನ್ ಬಿಲ್ಡಿಂಗ್ ಆಕ್ಟಿವಿಟೀಸ್ ಜಾಸ್ತಿಯಾಗಿರುತ್ತವೆಯೆಂದು ಹೇಳಿರುತ್ತೇವೆಯೋ ಅಥವಾ ಯಾವುದನ್ನು ನಾವು ಒಂದು ವೆಲ್‌ಫೇರ್‌ಸ್ಟೇಟ್ ಎಂದು ಕರೆಯುತ್ತೇವೆಯೋ ಅದು, ಜನರ ಪ್ರತಿಯೊಂದು ಆಗುಹೋಗುಗಳನ್ನೂ ಹೊತ್ತುಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾಗಿದ್ದರೆ, ತೆರಿಗೆಗಳನ್ನೂ ಹಾಕಲೇಬೇಕಾಗುತ್ತದೆ. ಈ ದಿವಸ ನಾವು ದೇಶದ ಯಾವ ಮೂಲೆಗೇ ಹೋಗಲಿ ಅಲ್ಲಿ ಜನರು ನಮಗೆ ವಿದ್ಯಾ ಸೌಕರ್ಯಗಳಿಲ್ಲ, ವಿದ್ಯಾ ಸೌಕರ್ಯಗಳನ್ನು ಕೊಡಿ, ಕೆರೆಗಳನ್ನು ದುರಸ್ತು ಮಾಡಿಸಿಕೊಡಿ, ಆಸ್ಪತ್ರೆಗಳನ್ನು ಸ್ಥಾಪನೆಮಾಡಿ ಎಂದು ಇತ್ಯಾದಿ ಅನೇಕ ಸೌಲಭ್ಯಗಳನ್ನು ಕೇಳುತ್ತಿದ್ದಾರೆ. ಈ ಸೌಲಭ್ಯಗಳನ್ನೆಲ್ಲಾ ಯಾವ ರೀತಿ ಆ ಜನಗಳಿಗೆ ಒದಗಿಸಬೇಕು, ಅವುಗಳನ್ನು ಹೇಗೆ ಕಾರ್ಯಗತಮಾಡಬೇಕು ಎಂಬುದನ್ನು ಎದುರು ಪಕ್ಷದ ಮಾನ್ಯ ಸದಸ್ಯರು ಗಮನಿಸಿದಂತೆ ಕಾಣುವುದಿಲ್ಲ. ಅವರು ಹೇಳುವ ರೀತಿ ಕಂದಾಯವನ್ನು ಹಾಕಲೇಬಾರದು ಎಂಬ ತತ್ವವನ್ನು ನಾವೂ ಒಪ್ಪಿಕೊಳ್ಳಬಹುದು. ಆದರೆ ದಿನೇ ದಿನೇ ದೇಶದಲ್ಲಿರತಕ್ಕ ಜನರು ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಒತ್ತಾಯ ಪಡಿಸುತ್ತಿರುವಾಗ ಅವುಗಳನ್ನೂ ಯಾವ ರೀತಿಯಲ್ಲಿ ಒದಗಿಸಬೇಕು ಎಂಬುದನ್ನು ಆಲೋಚಿಸತಕ್ಕದ್ದು ಎಲ್ಲರ ಕರ್ತವ್ಯವಾಗಿದೆ. ಕಂದಾಯವನ್ನು ಒಬ್ಬ ಮನುಷ್ಯನಿಗೆ ತೊಂದರೆಪಡಿಸಬೇಕೆಂದಾಗಲಿ

ಅಥವಾ ಆತನು ಮಾಡತಕ್ಕ ಒಂದು ಉದ್ಯೋಗಕ್ಕೆ ಅಡಚಣೆಯನ್ನುಂಟುಮಾಡಬೇಕೆಂದಾಗಲೀ ಹಾಕುವುದಿಲ್ಲ. ಹಾಗೆ ತೆರಿಗೆ ಹಾಕತಕ್ಕದ್ದು ದೇಶದ ಹಿತಕ್ಕೆ ಮತ್ತು ಪ್ರತಿಯೊಬ್ಬ ಪ್ರಜೆಯ ಯೋಗಕ್ಷೇಮಕ್ಕಾಗಿ. ಪ್ರತಿಯೊಂದು ಘಟ್ಟದಲ್ಲಿಯೂ ಸುಖ ಸೌಲಭ್ಯಗಳು ದೊರೆಯಬೇಕಾಗಿದ್ದರೆ ಅಲ್ಲಿ ಆರ್ಥಿಕ ಭದ್ರತೆ ಚೆನ್ನಾಗಿರಬೇಕು. ಹಾಗಿದ್ದರೆ ಆ ಸೌಲಭ್ಯಗಳು ಫಲಿಸುವುದು. ಹಾಗೆ ಫಲಿಸಬೇಕಾಗಿದ್ದರೆ ಮತ್ತು ಆರ್ಥಿಕ ನೀತಿ, ಭದ್ರವಾಗಿ ನಿಲ್ಲಬೇಕಾಗಿದ್ದರೆ ಅದು ತೆರಿಗೆ, ಕಂದಾಯ ಇತ್ಯಾದಿಗಳ ವಸೂಲಾತಿಯ ಮೇಲೆ ನಿಲ್ಲಬೇಕಾಗಿರುತ್ತದೆ. ಹೀಗೆ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ, ಹೆಚ್ಚು ಹೆಚ್ಚು ಅನುಕೂಲಗಳಾಗಬೇಕಾಗಿದ್ದರೆ ಪ್ರತಿಯೊಬ್ಬರೂ, ಹೆಚ್ಚು ಹೆಚ್ಚಾಗಿ ಶುಲ್ಕಗಳನ್ನು ಕೊಡತಕ್ಕದ್ದೂ ಅವಶ್ಯಕ. ಈ ವಾದವನ್ನು ಸರಿಯೆಂದು ಎಲ್ಲರೂ ಒಪ್ಪಿಕೊಂಡಾಗ ಪ್ರತಿಯೊಬ್ಬರೂ ತೆರಿಗೆಯನ್ನು ಕೊಡಲೇಬೇಕಾಗುತ್ತದೆ. ಆದರೆ ಈಗ ನಮ್ಮ ಎದುರು ಪಕ್ಷದ ಮಾನ್ಯ ಸದಸ್ಯರುಗಳು ಮಾಡಿರತಕ್ಕ ವಾದಗಳೆಲ್ಲಾ ಒಂದು ವಿತಂಡ ವಾದಗಳೆಂದು ಹೇಳಬೇಕಾಗುತ್ತದೆ. "ತೆರಿಗೆ ಹಾಕಬೇಡಿ, ತೆರಿಗೆ ಹಾಕುವುದಕ್ಕೆ ಇದು ಸಕಾಲವಲ್ಲ" ಎಂದು ವಾದಮಾಡತಕ್ಕದು ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿರತಕ್ಕ ಒಂದು ಹಳೆಯ ಸಾಂಪ್ರದಾಯ, ಇದು ಇನ್ನೂ ಮುಂದುವರಿಯುತ್ತಲೇ ಬಂದಿದೆ. ಆದರೆ ನಮ್ಮ ಕಾಂಗ್ರೆಸ್ ಸರ್ಕಾರ ಬಂದ ಮೇಲೆ, ಇಲ್ಲಿ ಪ್ರಜಾ ಸರ್ಕಾರ ಏರ್ಪಟ್ಟನಂತರ ಕಳೆದ ಆರೇಳು ವರ್ಷಗಳಿಂದ ಈ ಸರ್ಕಾರ ದೇಶದ ಪ್ರಜೆಗಳಿಗೆ ಏನೇನು ಉಪಯುಕ್ತ ಕಾರ್ಯಗಳನ್ನು ಮಾಡಿದೆಯೆಂಬುದನ್ನು ಮಾನ್ಯ ಸದಸ್ಯರು ಕಣ್ಣು ತೆರೆದು ನೋಡಬೇಕು ಈ ದಿವಸ ದೇಶದಲ್ಲಿರತಕ್ಕ ಪ್ರತಿಯೊಬ್ಬರೂ, ಅವರವರಿಗೆ ಏನೇನು ಅನುಕೂಲಗಳು ಬೇಕೆಂದು ಕೇಳುತ್ತಿದ್ದಾರೆಯೊ ಅವುಗಳನ್ನು ಹೇಳುವುದಕ್ಕೆ ಹೋದರೆ ಅವುಗಳಿಗೆ ಕೊನೆ ಮೊದಲಿಲ್ಲ, ಒಂದು ದೊಡ್ಡ ಪಟ್ಟಿಯೇ ಆಗುತ್ತದೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಈ ದಿವಸ ಅವರ ಚಾಮರಾಜನಗರ—ಯಳಂದೂರಿಗೆ ರಸ್ತೆ ಸೌಕರ್ಯಗಳು ರೈಲ್ವೆ ಸೌಕರ್ಯಗಳು ನಾಳೆಯೇ ಆಗಬೇಕೆಂದು ಒಂದು ಪಟ್ಟಿಯನ್ನು ತಯಾರಿಸಿ ಸರ್ಕಾರದ ಮುಂದಿಟ್ಟರೆ, ಆ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ಯಾವ ರೀತಿ ಮಾಡಬೇಕು ? ಇದೇ ರೀತಿ ಸೌಲಭ್ಯಗಳನ್ನು ಯಾರು ಯಾರು ಕೇಳುತ್ತಿದ್ದಾರೆಯೋ ಅವರೆಲ್ಲರಿಗೂ ಸರ್ಕಾರ ಅನುಕೂಲಗಳನ್ನು ಒದಗಿಸಬೇಕಾಗಿದೆ, ಆ ಅನುಕೂಲಗಳನ್ನು ಒದಗಿಸಬೇಕಾಗಿದ್ದರೆ ಯಾರು ಅಂಥ ಸೌಕರ್ಯಗಳನ್ನು ಅಪೇಕ್ಷಿಸುತ್ತಾರೋ ಅವರೇ ಈ ತೆರಿಗೆಗಳನ್ನು ಹೊರುವುದಕ್ಕೂ ಸಿದ್ಧರಾಗಿರಬೇಕು. ಹಾಗೆ ಈ ತೆರಿಗೆಗಳನ್ನು ಅವರಿಗೆ ಹೊರುವುದಕ್ಕೆ ಇಷ್ಟವಿಲ್ಲದ ಪಕ್ಷದಲ್ಲಿ ಅವರು ತಮ್ಮ ಬೇಡಿಕೆಗಳಾವುದನ್ನೂ ಸರ್ಕಾರದ ಮುಂದೆ ಇಡಬಾರದು. ಅನಾವಶ್ಯಕವಾಗಿ ಯಾವ ಕಂದಾಯವನ್ನಾಗಲಿ, ತೆರಿಗೆಗಳನ್ನಾಗಲಿ ಜನರ ಮೇಲೆ ಯಾರೂ ಹಾಕುವುದಿಲ್ಲ. ಜನರು ನಾನಾ ರೀತಿಯಲ್ಲಿ ನಾನಾ ಸೌಕರ್ಯಗಳನ್ನು, ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಯಾವಾಗ ಸರ್ಕಾರದ ಮುಂದೆ ಅವರ ಬೇಡಿಕೆಗಳನ್ನಿಡಲು ಕಾತರರಾಗಿರುತ್ತಾರೋ ಆಗ ಸರ್ಕಾರದವರು ಅವರ ಬೇಡಿಕೆಗಳನ್ನು ಕಾರ್ಯರೂಪಕ್ಕೆ ತರಲು ಹಣದ ಮಾರ್ಗವನ್ನು ಹುಡುಕಲೇಬೇಕಾಗುತ ದೆ. ಅಂಥಾ ಹಣ ಸಂಪಾದನೆಯ ಮಾರ್ಗಕ್ಕಾಗಿಯೇ ಸರ್ಕಾರದವರು ಈ ತೆರಿಗೆಗಳನ್ನು ಜಾರಿಗೆ ತರಬೇಕಾಗಿದೆ. ವಿಚಾರಗಳು ಹೀಗಿರುವಾಗ ಸುಮ್ಮನೆ ತೆರಿಗೆಗಳನ್ನು ಹಾಕುವುದರಿಂದ ರೈತ ಹಾಳಾಗಿ ಹೋಗುತ್ತಾನೆ, ದೇಶ ಮಾಯವಾಗುತ್ತದೆ ಎಂದು ನಮಗೆಲ್ಲಾ ದಿಗ್ಭ್ರಮೆ ಹಿಡಿಸುವಂತೆ ಮಾಡಿರತಕ್ಕ ವಾದಗಳಲ್ಲಿ ಯಾವ ತಿರುಳೂ ಇಲ್ಲ. ಈಗ ಹಾಕುವ ತೆರಿಗೆ ಸಮಯೋಚಿತವೂ ಕಾಲಕ್ಕನುಗುಣವಾಗಿಯೂ ಇದೆ. ಪ್ರತಿಯೊಬ್ಬರೂ ಇದನ್ನು ಸೂಕ್ಷ್ಮ ದೃಷ್ಟಿಯಿಂದ ಪರ್ಯಾಲೋಚಿಸಿ ಈ ಮಸೂದೆಗೆ ಬೆಂಬಲ ಕೊಡಬೇಕೆಂದು ತಿಳಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಸ್. ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಸ್ವಾಮಿ, ಈಗ ಭಾಷಣಮಾಡಿರತಕ್ಕ ಮಾನ್ಯ ಸದಸ್ಯರುಗಳು ತಮ್ಮ ಹಾವ, ಭಾವ, ವಿಲಾಸ ಈ ಎಲ್ಲವನ್ನೂ ಸೇರಿಸಿ ಮಾತನಾಡಿದ್ದಾರೆ. ಇವರು ಎಷ್ಟು ಜನ ರೈತರುಗಳಿಗೆ ಪ್ರತಿನಿಧಿಗಳಾಗಿ ಬಂದಿದ್ದಾರೋ ಅದು ನನಗಂತೂ ತಿಳಿಯದು. ಇವರು ಕೇವಲ ಭಾಷಣ ಮಾಡುವುದರಲ್ಲಿ ಮಾತ್ರ ರೈತರ ಪ್ರತಿನಿಧಿಗಳಾಗಿರಬಹುದು. ರೈತಾಪಿ ವರ್ಗಕ್ಕೆ ಸೇರಿದವರೂ ಸ್ವಂತ ವ್ಯವಸಾಯ ಮಾಡತಕ್ಕವರೂ, ರೈತನ ಕಷ್ಟದಲ್ಲಿ ಭಾಗವಹಿಸಿರತಕ್ಕಂಥ ಅನೇಕ ಜನ ಸದಸ್ಯರು ಈ ಸಭೆಯಲ್ಲಿರಬಹುದು. ಆದರೆ ಅವರು ಯಾರೂ ಇವರ ಹಾಗೆ ಭಾಷಣಮಾಡಲಿಲ್ಲ. ಈ ಮಹನೀಯರುಗಳು ಆ ಕೈಲಾಸ ಪರ್ವತವನ್ನೇ ನೆಲಸಮಮಾಡಿ ರೈತನನ್ನು ಉದ್ಧಾರಮಾಡಲಿಕ್ಕೆ ಇಲ್ಲಿಗೆ ಬಂದಿದ್ದಾರೇನೋ ಎನ್ನುವ ಹಾಗೆ ಭಾಷಣಮಾಡಿದ್ದಾರೆ. ಆದರೆ ಇವರೆಲ್ಲರೂ ಹಳ್ಳಿಯ ಜನರನ್ನು ಬಡಿದು ಅವರನ್ನು ನೆಲಸಮಮಾಡಿ ಬೆಳೆದಿರುವಂಥ ದೊಡ್ಡ ಸಾಹುಕಾರುಗಳು. ಇವರು ಹಳ್ಳಿಯ ಜನರ ಕಷ್ಟ ಸುಖಗಳು ಏನಿರುತ್ತವೆಂಬುದನ್ನು ಪ್ರತಿಬಿಂಬಿಸುತ್ತಿದ್ದರೆ, ಇವರ ಮಾತುಗಳಲ್ಲಿ ಹಳ್ಳಿಯ ಜನರಿಗೆ ನಂಬಿಕೆಯೇನಾದರೂ ಇದೆಯೇ ಎಂದು ನಾನು ಕೇಳುತ್ತೇನೆ. ಇವರಿಗೆ ರೈತನ ಕಷ್ಟ ಸುಖಗಳು ಯಾವುವಿವೆಯೆಂಬುದೇ ತಿಳಿಯದು. ಇವರು ದೊಡ್ಡ ಜಮೀನ್ದಾರರಾಗಿರಬಹುದು. ಇವರ ಹೊಲ ಗದ್ದೆಗಳನ್ನು ಉಳತಕ್ಕವರು ಯಾರು, ಅವರು ಎಲ್ಲಿ ಇದ್ದಾರೆ, ಇವರ ಜಮೀನುಗಳಾವುವೂ, ಎಲ್ಲಿ ಇರುತ್ತವೆ ಎಂಬ ವಿಚಾರಗಳೇನಾದರೂ ಇವರಿಗೆ ಗೊತ್ತಿದೆಯೇ ! ಇಂಥ ಈ ಜಮೀನುದಾರರು ಬೆಂಗಳೂರಿನಲ್ಲಿಯೋ ಅಥವ ಮತ್ತೆ ಯಾವ ಯಾವ ದೊಡ್ಡ ಪಟ್ಟಣಗಳಲ್ಲೋ ಸೇರಿಕೊಂಡು ರೈತನ ವೃತ್ತಿ ಏನೆಂಬುದನ್ನೇ ತಿಳಿಯದ ಈ ಧೀರರು ಈ ದಿವಸ ಆ ರೈತನ ಬಗ್ಗೆ ಎಷ್ಟು ಉದ್ದುದ್ದವಾದ ಭಾಷಣಗಳನ್ನು ಮಾಡಿದ್ದಾರೆ ! ಸರ್ಕಾರ ಹಾಗಿದೆ, ಹೀಗಿದೆ, ಆ ಅನುಕೂಲ ಮಾಡಲಿಲ್ಲ, ಈ ತೆರಿಗೆ ಹಾಕುವುದು ನ್ಯಾಯವಲ್ಲ ಎಂದು ವಾದಿಸಿರತಕ್ಕವರೆಲ್ಲಾ ನಿಜವಾದ ರೈತನ ಪ್ರತಿನಿಧಿಗಳಲ್ಲ. ಇವರು ಹೇಳಿರತಕ್ಕುದೆಲ್ಲಾ ಒಂದು ಬೂಟಾಟಿಕೆ. ಆದರೆ 1947ನೇ ಇಸವಿಯಿಂದೀಚೆಗೆ ಬಂದಿರತಕ್ಕ ಈ ಕಾಂಗ್ರೆಸ್ ಸರ್ಕಾರ ರೈತನ ಅಭಿವೃದ್ಧಿಗಾಗಿ ಎಷ್ಟೋ ಕೆಲಸ ಕಾರ್ಯಗಳನ್ನು ಮಾಡಿದೆ.

5-30 P. M.

ಅಲ್ಲಿಂದ ಲೆಕ್ಕಹಾಕಿ ದೇಶಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗಿದೆ. ನೀವೇ ನೋಡಿ.

ನೀವು ಸುಮ್ಮನೆ ಆ ಬ್ರಿಟಿಷರನ್ನೇ ಹಿಂಬಾಲಿಸಿಕೊಂಡು ಯಾವತ್ತೂ ಮಾಡುತ್ತಿದ್ದೀರಿ ! ಹಿಂದಿದ್ದ ಕಾಂಗ್ರೆಸ್ ಸರ್ಕಾರ ತಾನಿದ್ದ ಕೇವಲ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ, ಹಿಂದೆ ಬಹು ದಿವಸಗಳಿಂದ ಕೈಯೆತ್ತುವ

(ಶ್ರೀ ಎಸ್. ಶಿವನಂಜೇಗೌಡ.)

ಸರ್ಕಾರ ಮತ್ತು ಸ್ಕೂಳ್ಳೆ ಸರ್ಕಾರ 50 ವರ್ಷಗಳಲ್ಲಿ ಮಾಡುವ ಕೆಲಸವನ್ನು 4½ ವರ್ಷಗಳಲ್ಲೇ ಮಾಡಿದೆ. ಇದನ್ನು ನೆನಸಿಕೊಂಡರೆ ಅವರು (ವಿರೋಧಪಕ್ಷದವರು) ಮಾಡುತ್ತಿರತಕ್ಕ ಕೆಲಸವೆಲ್ಲ ಏಕೆ ಎಂದೆನಿಸುತ್ತದೆ. ಅವರು ಎಲ್ಲೋ ಒಂದು ಕಡೆ ಸೇರಿಕೊಂಡು ಮೀಟಿಂಗ್ ಮಾಡುತ್ತಿರುತ್ತಾರೆ. ಅಲ್ಲಿ ಬರೀ ಮಾತನಾಡುತ್ತಾ, ಬಡವರು, ಒಡಿಲ್ಲ, ರೈತರನ್ನು ಉದ್ಧಾರಮಾಡುತ್ತೇವೆಂದು ಹೇಳುವ ಮಹನೀಯರು. ಈ ರೀತಿ ಬೂಟಾಟಿಕೆ ಬೇಸಾಯದ ಮಾತನಾಡುವುದು ಬೇಡ. ಅದನ್ನು ಬಿಟ್ಟು......

ಅಧ್ಯಕ್ಷರು.—ಸದಸ್ಯರ ಮೇಲೆ ಒಂದು ಮಿತಿಯಿಲ್ಲದೆ ಈ ರೀತಿ ಟೀಕೆಮಾಡುವುದಕ್ಕೆ ಬದಲಾಗಿ, ಸಭೆಯ ಮುಂದೆ ಬಂದಿರತಕ್ಕ ಮಸೂದೆಯ ಮೇಲೆ ಅದರ ಸಾಧಕಬಾಧಕಗಳನ್ನು ಕುರಿತು ಮಾತನಾಡುವುದೊಳ್ಳೆಯದು.

ಶ್ರೀ ಎಸ್. ಶಿವನಂಜೇಗೌಡ.—ನಮಗೆ ಕುಡಿಯುವ ನೀರಿನ ಬಾವಿಗಳಿಲ್ಲ, ಬಾವಿ ಕೊಡಬೇಕು; ವಿದ್ಯುಚ್ಛಕ್ತಿ ಇಲ್ಲ, ವಿದ್ಯುಚ್ಛಕ್ತಿ ಒದಗಿಸಿಕೊಡಬೇಕು; ಲಫ್ಟ್ ಇರಿಗೇಷನ್ ಇಲ್ಲ, ಅದನ್ನು ಕೊಡಬೇಕು; ಊರಿಂದೂರಿಗೆ ರಸ್ತೆಗಳಿಲ್ಲ, ರಸ್ತೆಗಳನ್ನು ಮಾಡಿಸಿಕೊಡಬೇಕು; ಮಿಡ್ಲ್ ಸ್ಕೂಲುಗಳು, ಹೈಸ್ಕೂಲುಗಳು, ಪ್ರೈಮರಿ ಸ್ಕೂಲುಗಳು—ಎಲ್ಲಾ ವಿದ್ಯಾ ಅನುಕೂಲತೆಗಳೂ ನಮಗೆ ಬೇಕು; ಹರಿಜನೋದ್ಧಾರಕ್ಕಾಗಿ ಮನೆಗಳಿಗೆ ಹೆಂಚುಗಳು ಎಲ್ಲವನ್ನೂ ಕೊಡಬೇಕು; ಇದನ್ನು ಒಂದೂ ಬಿಡದೆ ಈ ಸರ್ಕಾರ ಮಾಡಬೇಕು ಎಂದು ಹೇಳುತ್ತೀರಿ. ಇತ್ತ ಕಡೆ ತೆರಿಗೆಯನ್ನೂ ಕೊಡುವುದಕ್ಕಾಗುವುದಿಲ್ಲವೆಂದೂ ಹೇಳುತ್ತೀರಿ. ಇದೆಲ್ಲಾ ಎಂಥಾ ತೀರ್ಮಾನ! ಸುಮ್ಮನೆ ಅಕ್ಕಿ-ಜೋಳ ಬೆರಸಿದಹಾಗೆ, ಮಾತೆತ್ತಿದರೆ ಹಳ್ಳಿಯವರು ಹಳ್ಳಿಯವರು ಎಂದು ಮಾತನಾಡುತ್ತೀರಿ. ನಿಜವಾಗಿಯೂ ಹೇಳಲಿ, ಇಲ್ಲಿ ರೈತರನ್ನು ಪ್ರತಿನಿಧಿಸತಕ್ಕವರು ಎಷ್ಟು ಜನ ಇದ್ದಾರೆಂಬುದನ್ನು ತಿಳಿಸಲಿ. ಈ ಸಭೆಯಲ್ಲಿ ಕೆಲವರು ಹಳಬರಿದ್ದಾರೆ. ಅವರಾದರೂ ಹೇಳಲಿ, ಹಿಂದಿನವರು ಏನು ಒಳ್ಳೆಯ ಕೆಲಸಮಾಡಿದ್ದಾರೆ ಎಂದು. ಆದ್ದರಿಂದ ಇವರುಗಳಾರೂ ರೈತರ ವಿಷಯವಾಗಿ ಹೇಳುವುದಕ್ಕೆ ಯೋಗ್ಯರಲ್ಲ. ಈಗ ಸರ್ಕಾರದವರು ಇವರಿಂದ ಬಂದ ಹಣದಿಂದ ರೈತರಿಗೆ ರಸ್ತೆ ಮುಂತಾದುವನ್ನು ಮಾಡಿಸಿಕೊಡುತ್ತಾರೆ. ಸರ್ಕಾರ ಲಾಭ ಸಂಪಾದನೆಮಾಡುತ್ತಾರೆ ಎಂದು ಅವರು ಹೇಳಿದರು. ಲಾಭ ಸಂಪಾದನೆಯೆಂದರೆ ಅವರೇನು ದುಡ್ಡನ್ನೆಲ್ಲಾ ಮನೆಗೆ ಹೊತ್ತುಕೊಂಡು ಹೋಗುತ್ತಾರೇನು? ಜನರನ್ನು ಉದ್ಧಾರಮಾಡುವುದಕ್ಕೆ, ಆ ಕಡೆ, ಈ ಕಡೆ ಬಂದ ದುಡ್ಡನ್ನೆಲ್ಲಾ ಸೇರಿಸಿ ಖರ್ಚುಮಾಡಬೇಕಾದ್ದಕ್ಕೆಲ್ಲಾ ಸರ್ಕಾರ ಖರ್ಚುಮಾಡುತ್ತಾರೆ. ಅಷ್ಟೇ ಹೊರತು ಲಾಭ ಸಂಪಾದನೆಮಾಡಬೇಕೆಂದು ಸರ್ಕಾರ ಹೊರಟಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಇದನ್ನು ತಿಳಿದುಕೊಂಡು ಇದಕ್ಕೆ ಒಪ್ಪಿಗೆ ಕೊಡಬಹುದು, ಇದು ಸರ್ವಸಮ್ಮತವಾಗಿದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಲಿಂಗಣ್ಣ (ನಂಜನಗೂಡ).—ಅಧ್ಯಕ್ಷರೇ, ಈ ಒಂದು ತಿದ್ದುಪಡಿ ಮಸೂದಾ ಕಾನೂನು ತನ್ನ ಪರಿಮಿತಿಯಲ್ಲಿ ಎರಡು ಕಾನೂನುಗಳನ್ನು ತಿದ್ದುಪಡಿಮಾಡಲಕ್ಕೆ ಹೊರಟಿದೆ. ಈ ಕಾನೂನುಗಳು ದೇಶದಲ್ಲಿ ನಾವು ಏನು ಕಂದಾಯ ವಿಧಾಯಕಮಾಡುತ್ತೇವೋ ಅದರ ಹಿನ್ನೆಲೆಯಲ್ಲಿರುವ ರೀತಿನೀತಿಗಳನ್ನು ನಮ್ಮ ಮುಂದೆ ಎತ್ತಿ ತೋರಿಸುತ್ತವೆಂದು ನಮ್ಮ ಭಾವನೆ.

ಮೊದಲನೆಯ ಒಂದು ತಿದ್ದುಪಡಿಯಿಂದ ಸರ್ಕಾರದವರು ಸುಮಾರು 4–5 ಲಕ್ಷ ರೂಪಾಯಿಗಳನ್ನು ತಮ್ಮ ಬೊಕ್ಕಸಕ್ಕೆ ಬರಮಾಡಿಕೊಳ್ಳಬಹುದೆಂದು ಯೋಚನೆಮಾಡಿದ್ದಾರೆ. ಎರಡನೆಯ ತಿದ್ದುಪಡಿಯಿಂದ ಸುಮಾರು 30–40 ಲಕ್ಷ ರೂಪಾಯಿಗಳು ಬರುತ್ತವೆಂದು ಯೋಚನೆಮಾಡಿದ್ದಾರೆ. ನಮ್ಮ ಮುಂದೆ ಈ ಸಾರಿ ಆಯವ್ಯಯ ಪಟ್ಟಿಯನ್ನು ಮಂಡಿಸುವ ಸಮಯದಲ್ಲಿ ಶ್ರೀಮಾನ್ ಎ. ಜಿ. ರಾಮಚಂದ್ರರಾಯರು ಆಕ್ಟಿಂಗ್ ಫೈನಾನ್ಸ್ ಮಂತ್ರಿಗಳಾಗಿ ಹೇಳಿದರು, ಇದಾರು ಬಾಬುಗಳಲ್ಲಿ ನಾವು ಕಂದಾಯವನ್ನು ಹಾಕಬೇಕಾಗುತ್ತದೆ ಎಂದು. ಆ ಕಂದಾಯವನ್ನು ವಿಧಾಯಕಮಾಡುವುದಕ್ಕಿರುವ ಕಾರಣಗಳನ್ನೂ ಕೂಡ ಅವರು ಸೂಕ್ಷ್ಮವಾಗಿ ಅಲ್ಲಿ ತಿಳಿಸಿದ್ದಾರೆ. ನಮಗೆ ಸುಮಾರು 1½ ಕೋಟಿ ರೂಪಾಯಿಗಳ ಖೋತಾ ಬೀಳುತ್ತದೆ, ಇದಲ್ಲದೆ 111 ಲಕ್ಷ ರೂಪಾಯಿಗಳನ್ನು ರಿಸರ್ವ್‌ನಿಂದ ತೆಗೆದುಕೊಂಡಿದ್ದೇವೆ, ಅಲ್ಲಿಗೆ ಎರಡನ್ನೂ ಸೇರಿಸಿದರೆ 2½-3 ಕೋಟಿಯವರೆಗೂ ನಮ್ಮ ಆಯವ್ಯಯ ಪಟ್ಟಿಯಲ್ಲಿ ಕಡಮೆಯಾಗುತ್ತದೆ, ಎಂದು ಅವರು ತಿಳಿಸಿದ್ದಾರೆ. ಈ ಖೋತಾವನ್ನು ಸರಿತೂಗಿಸಿಕೊಳ್ಳುವುದಕ್ಕೆ ಅವರು ಹೊರಟಿರುವ ಮಾರ್ಗವನ್ನು ನೋಡಿದರೆ—ಈ ಮಸೂದಾ ಕಾನೂನಿನಿಂದ ಒಂದು 40 ಲಕ್ಷ, ಇನ್ನೊಂದರಿಂದ ನಾಲ್ಕು ಲಕ್ಷ, ಮತ್ತೊಂದರಿಂದ ಎರಡು-ಮೂರು ಲಕ್ಷ ಈ ರೀತಿಯಲ್ಲಿದೆ. ಬೆಳಗ್ಗೆ ಮಾತನಾಡುತ್ತಾ ಮುಖ್ಯಮಂತ್ರಿಗಳು ಹೇಳಿದಂತೆ, ಹೀಗೆ ಅಲ್ಪಸ್ವಲ್ಪವಾಗಿ ಬರುವ ಹಣವನ್ನೇ ಕೂಡಿಸಿ,ಹನಿಗಳನ್ನು ಕೂಡಿಸಿ ಹಳ್ಳಮಾಡಿ, ಹಳ್ಳಗಳನ್ನು ಸೇರಿಸಿತೊರೆಮಾಡಿ,ತೊರೆಗಳಿಂದ ಸಮುದ್ರಮಾಡುವಂತೆ ಒಂದು ದೊಡ್ಡ ಪ್ರಯತ್ನಕ್ಕೆ ಹೊರಟಿದ್ದಾರೆ. ಇದಕ್ಕೆ ಕಾರಣ ಇಷ್ಟೆ: ಫೈನಾನ್ಶಿಯಲ್ ಇಂಟೆಗ್ರೇಷನ್ ಆದಮೇಲೆ ನಮ್ಮಲ್ಲಿರತಕ್ಕ ಹೆಚ್ಚುಹೆಚ್ಚಿನ ಉತ್ಪಾದನಾ ಬಾಬುಗಳು ರೈಲ್ವೆ, income-tax ಮುಂತಾದುವು ಕೇಂದ್ರಕ್ಕೆ ಹೋದುದು ನಮಗೆ ಬಹಳ ನಷ್ಟವಾಗಿದೆ. ಇಂಥ ಹೆಚ್ಚಿನ ಉತ್ಪತ್ತಿ ಬಾಬುಗಳು ಕೇಂದ್ರಕ್ಕೆ ಹೋದಮೇಲೆ ಇನ್ನು ಉಳಿದಿರುವ ಸಣ್ಣಪುಟ್ಟ ಬಾಬುಗಳಿಂದ ಆದಷ್ಟುಮಟ್ಟಿಗೆ ಹಣ ಬರುವಂತೆ ಮಾಡಿಕೊಂಡು ನಮ್ಮ ಬೊಕ್ಕಸ ತುಂಬಿಕೊಳ್ಳಬೇಕಾಗಿದೆಯೆಂದು ಅವರು ಹೇಳಿದರು.

ಅವರ ವಾಕ್ಸರಣಿಯನ್ನು ಒಪ್ಪುತ್ತೇನೆ, ಆದರೆ ಒಂದು ವಿಷಯವನ್ನು ನಾನು ನೊಂದ ಮನಸ್ಸಿನಿಂದ ತಮ್ಮ ಗಮನಕ್ಕೆ ತರಬೇಕಾಗಿದೆ. ಅದು ವಿದ್ಯಾಭ್ಯಾಸದ ಸೆಸ್ಸಿನ ವಿಷಯ. ಎಜುಕೇಷನ್ ಸೆಸ್ಸಿನಿಂದ ಸುಮಾರು 3–4 ಲಕ್ಷ ರೂಪಾಯಿಗಳನ್ನು ತಾವು ತಮ್ಮ ಬೊಕ್ಕಸಕ್ಕೆ ಬರಮಾಡಿಕೊಳ್ಳಬೇಕೆಂದಿದ್ದೀರಿ. ಇದೊಂದು direct Tax. ನೇರವಾಗಿ ರೈತನಿಂದ ರೈತನ ಆದಾಯದಿಂದ ಬರತಕ್ಕ ತೆರಿಗೆಯೆಂಬುದನ್ನು ತಿಳಿದುಕೊಳ್ಳಬೇಕು. ಎರಡನೆಯ ತಿದ್ದುಪಡಿಯಿಂದ ಬರತಕ್ಕ ತೆರಿಗೆ indirect ಆಗಿರುವಂತಹದು. ರೋಡ್ ಸೆಸ್‌ನಿಂದ, ಬ್ರೇಕ್ ಸರ್ಟಿಫಿಕೇಟು, ಸೀಟಿಂಗ್ ಟ್ಯಾಕ್ಸು ಈ ರೀತಿಯಾಗಿ ಒಂದು ಬಾಬಿನಲ್ಲಿ ಬರುತ್ತಿದ್ದ ತೆರಿಗೆಯ ದರವನ್ನು ಜಾಸ್ತಿಮಾಡಿ ಪರೋಕ್ಷವಾಗಿ ಹೆಚ್ಚಿಗೆ ವಸೂಲುಮಾಡಿಕೊಳ್ಳುವವರಾಗಿದ್ದೀರಿ. ಇದರಿಂದ 30–40 ಲಕ್ಷ ರೂಪಾಯಿಗಳು ಬರುತ್ತವೆ. ಇದನ್ನೇನೋ ಒಂದು ವಿಧದಲ್ಲಿ ಒಪ್ಪಬಹುದಾದರೂ, ಎಜುಕೇಷನ್ ಸೆಸ್ಸಿನಿಂದ 3-4 ಲಕ್ಷ ರೂಪಾಯಿಗಳನ್ನು ಪಡೆಯುವುದಕ್ಕೆ ಹೊರಟಿರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಏಕೆಂದರೆ, ಕೇವಲ ಮೂರು ನಾಲ್ಕು ಲಕ್ಷ ರೂಪಾಯಿಗಳು ಬೇಕೆಂದಿದ್ದರೆ ಇನ್ನಾವ

ಬೇರೆ ಬಾಬುಗಳನ್ನೂ ಯೋಚನೆಮಾಡುವ ಹಾಗೆಯೇ ಇರಲಿಲ್ಲವೇ ಎಂದು ಕೇಳುತ್ತೇನೆ. ಹಿಂದೆ ಪೆಟ್ರೋಲಿಗೆ ಸಂಬಂಧಪಟ್ಟ ಮಸೂದಾ ಕಾನೂನನ್ನು ಸಭೆಯ ಮುಂದಿಡುತ್ತಾ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದರು, ಯಾರ ಹತ್ತಿರ ಹಣವಿದೆ ಅವರಿಂದ ಹಣ ತೆಗೆದುಕೊಳ್ಳುವುದಕ್ಕೆ ಆ ಕ್ರಮವನ್ನು ಅನುಸರಿಸಿರುವುದಾಗಿ ಹೇಳಿದರು. ಇದಾದರೋ ಆ ನೀತಿಗೂ ವಿರುದ್ಧವಾಗಿದೆಯೆಂದು ಹೇಳಬೇಕಾಗಿದೆ. ಕೇವಲ 3–4 ಲಕ್ಷ ರೂಪಾಯಿಗಳನ್ನು ಹೊಂದಿಸಿಕೊಳ್ಳಲಿಕ್ಕೆ ಬೇರಾವ ಮಾರ್ಗಗಳೇ ಇರಲಿಲ್ಲವೇ! ಅಥವಾ ಹಣಕಾಸಿನ ಇಲಾಖೆಯವರು ಅದನ್ನು ಯೋಚನೆಮಾಡಲಿಲ್ಲವೇ ಎಂದು ಕೇಳಬೇಕಾಗಿದೆ. ನಾನು ಹೋದ ಸಾರಿ ಬಡ್ಜೆಟ್ಟಿನ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಿದ್ದೆ. ಆಗಲೇ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೆ: ಮೊಟ್ಟಮೊದಲನೆಯ ಸಾರಿ ಮಂತ್ರಿಮಂಡಳವನ್ನು ನೀವು ರಚಿಸಿರುವಿರಾಗಿರುವಿರಿ, ಬಂದ ತಕ್ಷಣ ತೆರಿಗೆ ಹಾಕಿದರೆ ಜನರು ನಿಮ್ಮಲ್ಲಿಟ್ಟಿರುವ ಸದಭಿಪ್ರಾಯವನ್ನು ತಾವು ಕಳೆದುಕೊಳ್ಳಬೇಕಾಗುತ್ತದೆಂದು ಅಧೈರ್ಯದಿಂದ ಹಿಂಜರಿಯುತ್ತಿದ್ದೀರಿ, ಇದು ಸರಿಯಲ್ಲ ಎಂದು ಹೇಳಿದ್ದೆ. ಆಗಲೇ ಆಯವ್ಯಯ ಪಟ್ಟಿಯನ್ನು ಸರಿದೂಗಿಸಲಿಲ್ಲ. ಇದರಿಂದಾಗಿ ಮೊದಲಿದ್ದ 1·07 ಕೋಟಿ ರೂಪಾಯಿಗಳ ಖೋತಾ ಈಗ $1\frac{1}{2}$ ಕೋಟಿಗೆ ಏರಿತು. ಆಗಲೇ ಯೋಚನೆಮಾಡಿ ದೇಶದಲ್ಲಿ ಯಾವ ಯಾವ ಬಾಬಿನಲ್ಲಿ ಹಣ ಹೆಚ್ಚಿಗೆ ಬರಮಾಡಿಕೊಳ್ಳಬಹುದೆಂದು ಯೋಚಿಸಿ ನಮ್ಮ ದೇಶಾಭಿವೃದ್ಧಿ ಕಾರ್ಯಗಳನ್ನು ನಡೆಸಬಹುದಾಗಿತ್ತು. ಒಂದು ವರ್ಷ ಉರುಳಿಹೋಗುವುದಕ್ಕೆ ಬಿಟ್ಟು, ಈಗ ನೇರವಾಗಿ ರೈತರಿಂದ ಹೀಗೆ ಹಣಪಡೆಯುವುದಕ್ಕೆ ಹೊರಟಿರುವುದು ವಿಷಾದವನ್ನುಂಟುಮಾಡುತ್ತದೆ. ಇದಕ್ಕೆ ಬದಲಾಗಿ ಈಗಲಾದರೂ ಬೇರಾವುದಾದರೂ ವಿಧಾನವನ್ನು ಯೋಚನೆಮಾಡಿ. ನಾನು ಮೊದಲೇ ಒಮ್ಮೆ ಹೇಳಿದ್ದೇನೆ. Betting Tax ಈಚೆಗೆ ಬಹಳ ವರ್ಷಗಳಿಂದ ವಿಪರೀತ ಏರುಪೇರಾಗುತ್ತಿದೆ. ಹೆಚ್ಚಿಗೆ ವಿವರಗಳಿಗೆ ಹೋಗದೆ, Actuals ಮಾತ್ರ ಹೇಳುತ್ತೇನೆ. 1951-52ನೆಯ ಸಾಲಿನಲ್ಲಿ ನೋಡುವುದಾದರೆ, Betting Tax ನಿಂದ 20·04 ಲಕ್ಷ ರೂಪಾಯಿಗಳು ಬಂದಿವೆ. ಈ ಸಾರಿ 53-54ರಲ್ಲಿ ಕೇವಲ 17 ಲಕ್ಷ ರೂಪಾಯಿಗಳೆಂದು ತೋರಿಸಿದ್ದೀರಿ. ಇದಕ್ಕೆ ಕಾರಣ, 1951-52ರಲ್ಲಿ ನಿಮ್ಮ Betting Tax ದರ $17\frac{1}{2}\%$ ಇತ್ತು. ಅದನ್ನೀಗ ಕಡಮೆಮಾಡಿ $12\frac{1}{2}\%$ ಗೆ ಇಳಿಸಿದ್ದೀ ಈ ಸಾರಿ ಕಡಮೆ ಹಣ ನಿರೀಕ್ಷಿಸುವುದಕ್ಕೆ ಕಾರಣ. ಆದ್ದರಿಂದ ಈ ವಿದ್ಯಾಭ್ಯಾಸ ತೆರಿಗೆಯನ್ನು ಜಾಸ್ತಿಮಾಡುವುದಕ್ಕೆ ಬದಲು Betting Tax ನ್ನು ಮೊದಲಿನ ಮಟ್ಟಕ್ಕೇ ಜಾಸ್ತಿಮಾಡಿದ್ದರೆ, ಸುಲಭವಾಗಿ 3–4 ಲಕ್ಷ ರೂಪಾಯಿಗಳು ನಿಮಗೆ ಬರುತ್ತಿದ್ದವು. ಹಾಗೂ ಸಾಹುಕಾರರುಗಳಿಂದ ಹಣ ತೆಗೆದುಕೊಳ್ಳಬೇಕೆಂಬ ನಿಮ್ಮ ಅಭಿಪ್ರಾಯಕ್ಕೂ ಅನುಗುಣವಾಗಿರುತ್ತಿತ್ತು. ಸಂಬಂಧಪಟ್ಟ ಇಲಾಖೆಯವರು ಸ್ವಲ್ಪ ಪರಿಶ್ರಮ ವಹಿಸಿದ್ದರೆ ರೈತರಿಂದ ನೇರವಾಗಿ ತೆಗೆದುಕೊಳ್ಳುವ ತೆರಿಗೆಯನ್ನು ತಪ್ಪಿಸಿ ಶ್ರೀಮಂತರಿಂದ ತೆರಿಗೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿತ್ತು. ಅದೂ ಕೇವಲ 3-4 ಲಕ್ಷ ರೂಪಾಯಿಗಳಲ್ಲ, 8–10 ಲಕ್ಷ ರೂಪಾಯಿಗಳು ಬರುತ್ತಿತ್ತು. ಇದನ್ನು ತಾವು ಮನಸ್ಸುಮಾಡಿದ್ದರೆ, ಈಗ ವಿದ್ಯಾಭ್ಯಾಸದ ಸೆಸ್ ಜೊತೆಗೆ ಹೇಳಿರುವ ಇನ್ನೊಂದು ಸಣ್ಣ ಸೆಸ್ (ಹೆಲ್ತ್ ಸೆಸ್) ನ್ನೂ ಕೂಡ ನಿಲ್ಲಿಸಬಹುದಾಗಿತ್ತು. ಈಗಲೂ ಅದಕ್ಕೆ ಕಾಲ ಮೀರಿಲ್ಲ. ವಿದ್ಯಾಭ್ಯಾಸದ ಸೆಸ್ ಹಾಕುವ ಯೋಚನೆಯನ್ನು ಬಿಟ್ಟುಬಿಡಿ. ರೈತರಾಗಲೇ ಕುಗ್ಗಿಹೋಗಿದ್ದಾರೆ; ನಾವೇನೂ ಇಲ್ಲದ್ದನ್ನು ಕಲ್ಪಿಸಿಕೊಂಡು ಹೇಳುತ್ತಿಲ್ಲ. ನಿಜಾಂಶವನ್ನು ತಮ್ಮ ಮುಂದಿಟ್ಟಿದ್ದೇವೆ. ಆದ್ದರಿಂದ ಈ ತಿದ್ದುಪಡಿ ಮಸೂದೆಯನ್ನು ಬಿಟ್ಟು ಬೇರೆ ರೀತಿಯಲ್ಲಿ ತೆರಿಗೆಯನ್ನು ಹಾಕುವ ಪ್ರಯತ್ನಮಾಡಿರೆಂದು ನಾನು ಸಲಹೆ ಕೊಡುತ್ತೇನೆ.

ಇನ್ನು ಎರಡನೆಯ ತಿದ್ದುಪಡಿ ಮಸೂದೆ. ಈ ಮಸೂದೆಯ ಸಂದರ್ಭದಲ್ಲಿ ಶ್ರೀಮಾನ್ ರಾಜಶೇಖರಮೂರ್ತಿಯವರು law of diminishing returns ಎಂಬ ನಿಯಮ ಯಾವ ರೀತಿ ಇಲ್ಲಿ ಅನ್ವಯಿಸುತ್ತದೆಂಬುದನ್ನು ಬಹಳ ವಿಶದವಾಗಿ ಹೇಳಿದ್ದಾರೆ. ಸೆಲೆಕ್ಟ್ ಕಮಿಟಿಯವರು ಆ ಅಂಶವನ್ನು ತೀವ್ರವಾಗಿ ಪರಿಗಣಿಸಬೇಕು. ಆದರೆ ಸೆಲೆಕ್ಟ್ ಕಮಿಟಿಗೆ ಅದು ಇಂದು ಹೋಗಿ ನಾಳೆಯೇ ಪರಿಷ್ಕೃತವಾಗಿ ಬರಬೇಕೆಂದು ಹೇಳಿದ್ದೀರಿ. ಇಷ್ಟು ತೀವ್ರದಲ್ಲಿ ಕೂಲಂಕಷವಾಗಿ ಎಲ್ಲವನ್ನೂ ಆಲೋಚನೆಮಾಡಿ ಒಂದು ಪರಿಣಾಮಕರವಾದ ರೀತಿಯಲ್ಲಿ ಇದನ್ನು ಬದಲಾಯಿಸಲು ಸಾಧ್ಯವೇ ಎಂಬ ಅನುಮಾನವಿದೆ. ಈ ದೃಷ್ಟಿಯಿಂದ ನೋಡುವುದಾದರೆ ಈ ಬಿಲ್ಲಿನಿಂದ ಎಷ್ಟು ಹಣ ಬರಬಹುದೆಂದು ನೀವು ನಿರೀಕ್ಷಣೆ ಮಾಡಿದ್ದೀರೋ ಅಷ್ಟು ಬರಲಾರದೆಂದು ನನಗೆ ತೋರುತ್ತದೆ. ಅವರಾಗಲೇ ಹೇಳಿದ್ದಾರೆ, ಪಂಜಾಬಿನಲ್ಲಿ ತೆರಿಗೆಯ ಮಟ್ಟ ಕಡಮೆ ಇದೆ ಎಂದು. ಮದ್ರಾಸಿನಲ್ಲಿರುವ ದರಗಳೇ ಎಲ್ಲಕ್ಕಿಂತ ಜಾಸ್ತಿ. ಅದಕ್ಕಿಂತಲೂ ಜಾಸ್ತಿಯಾಗಿ ತಾವೀಗ ಹಾಕುತ್ತಿದ್ದೀರಿ. ಮದ್ರಾಸಿನಲ್ಲಿ ಕಂದಾಯ ಯಾವ ರೀತಿ ಕಡಮೆಬರುತ್ತಿದೆಯೆಂಬುದನ್ನು ಕಾಣಬಹುದು. ಅದೇ ರೀತಿ ನಮ್ಮಲ್ಲಿಯೂ ನಾವು ನಿರೀಕ್ಷಿಸಿರುವಷ್ಟು ಬರಲಾರದು. ಆದ್ದರಿಂದ ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ಈಗಲೇ ಸೂಕ್ತ ರೀತಿಯಲ್ಲಿ ಸರಿಪಡಿಸಿಕೊಳ್ಳುವುದು ಉತ್ತಮ.

ಮೊದಲನೆಯ ತಿದ್ದುಪಡಿಯ ವಿಷಯದಲ್ಲಿ ನಾನಾಗಲೇ ಹೇಳಿದಂತೆ ಅದನ್ನು ಬಿಟ್ಟು ಬೆಟಿಂಗ್ ಟ್ಯಾಕ್ಸ್ ಹೆಚ್ಚಿಗೆ ಹಾಕುವುದು ಉತ್ತಮ; ಇನ್ನೂ ಹೆಚ್ಚಿಗೆ ಹಣ ಬರುತ್ತದೆ. ಅದನ್ನು ಬಿಟ್ಟು ಈ ಬಿಲ್ಲನ್ನು ತಂದು ರೈತರ ಅನುರಾಗವನ್ನು ಕಳೆದುಕೊಳ್ಳುವುದು ತರವಲ್ಲವೆಂದು ಈ ತಿದ್ದುಪಡಿಯನ್ನು ತೀವ್ರವಾಗಿ ವಿರೋಧಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ)—ಸ್ವಾಮಿ, ಈಗ ಸಭೆಯ ಮುಂದಿರುವ ಮೈಸೂರು ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಮತ್ತು ಮೋಟಾರು ವಾಹನಗಳ ಮೇಲೆ ತೆರಿಗೆ ಸುಂಕಗಳನ್ನು ಹಾಕುವುದಕ್ಕೆ ಸಂಬಂಧಪಟ್ಟ 1953ನೆಯ ಇಸವಿಯ ತಿದ್ದುಪಡಿ ಮಸೂದೆಯನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ. ಬೆಳಿಗ್ಗೆ ಒಂದು ಮಸೂದೆ ಈ ಸಭೆಯ ಮುಂದೆ ಬಂದಿತ್ತು. ಆ ಸಂದರ್ಭದಲ್ಲಿ, ಯಾವ ಕಾರಣದಿಂದ ಈ ತೆರಿಗೆ ಮಸೂದೆಗಳನ್ನು ನಾವು ವಿರೋಧಮಾಡಬೇಕಾಗಿದೆ ಎಂಬ ಅಂಶವನ್ನು ಸಾಕಷ್ಟು ವಿಸ್ತಾರವಾಗಿಯೇ ತಿಳಿಸಿದ್ದೇನೆ. ಅದೇ ಕಾರಣ ಈ ಮಸೂದೆಗೂ ಸಲ್ಲುತ್ತದೆ. ಇದರಲ್ಲಿ ಒಂದು ವಿಷಯ ಕಾಣುತ್ತದೆ, ಏನೆಂದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಮಸೂದೆಯನ್ನು ಮೋಟಾರು ವಾಹನಗಳಿಗೆ ಸಂಬಂಧಪಟ್ಟ ಮಸೂದೆಯ ಜೊತೆಯಲ್ಲಿ ಸೇರಿಸಿಕೊಂಡು ಹೋದರೆ ಪ್ರತಿಭಟನೆ ಸ್ವಲ್ಪ ಕಡಮೆಯಾಗಬಹುದು ಇಲ್ಲದಿದ್ದರೆ ತೀವ್ರ ಪ್ರತಿಭಟನೆಯುಂಟಾದೀತೊ ಏನೋ ಎಂದು ಈ ಎರಡನ್ನೂ ಒಟ್ಟಿಗೆ ಸೇರಿಸಿಕೊಂಡು ಹೋಗುತ್ತಿರುವಂತೆ ಕಾಣುತ್ತದೆ. ಏನೇ ಇರಲಿ,

(ಶ್ರೀ ಎಸ್. ಗೋಪಾಲಗೌಡ.)

ಒಬ್ಬರು ಮಾನ್ಯ ಸದಸ್ಯರು ವಿರೋಧ ಪಕ್ಷದ ವಿರೋಧವನ್ನು ಕೇಳುವ ಸಹನೆ ಕೂಡ ಇಲ್ಲದೆ ಹದ್ದುಮೀರಿ ಮಾತನಾಡಿದರು, ಆ ಸಂದರ್ಭದಲ್ಲಿ ಅಧ್ಯಕ್ಷರು ಅವರನ್ನು ಕೂರಿಸಿದ್ದು ಒಳ್ಳೆಯದಾಯಿತು. ಆ ಸದಸ್ಯರೂ ಕೂಡ ರೈತರ ಹಿತರಕ್ಷಕರು, ಅವರು ರೈತರನ್ನು ಎಷ್ಟು ಸಂರಕ್ಷಣೆ ಮಾಡಿದರೆಂಬುದೂ ಗೊತ್ತು. ಗೇಣೀ ಕಾನೂನು ಶ್ರೀರಂಗಪಟ್ಟಣ ತಾಲ್ಲೂಕಿಗೆ ಬರಬಾರದೆಂದು ಹೇಳಿದವರಲ್ಲಿ ಅವರೂ ಒಬ್ಬರೆಂದು ಕಾಣುತ್ತದೆ!

ಶ್ರೀ ಶಿವನಂಜೇಗೌಡ.—ಆ ಮಾತನ್ನು ನಾನು ಹೇಳಲಿಲ್ಲ. ಅವರು ಹೇಳುವುದು ಸರಿಯಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೀಗೆ ಅವರು ಅನಿವಾರ್ಯದಿಂದ ಮಾತನಾಡಬೇಕಾದ ಪ್ರಸಂಗಕ್ಕೆ ಕಾರಣವಿದೆ. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುವ ಹಾಗೆ, ಹಣಕಾಸಿನ ಮಸೂದೆಯನ್ನು ಸರ್ಕಾರ ಸಭೆಯ ಮುಂದಿಟ್ಟು ಯಾವುದೇ ಕಾರಣದಿಂದಾದರೂ ವಾಪಸು ಪಡೆಯುವ ಸಂಪ್ರದಾಯ ಬೇರೆ ಯಾವುದಾದರೂ ದೇಶದಲ್ಲಿದೆಯೆ ಎಂದು ಅವರು ವಿರೋಧಪಕ್ಷದವರಿಗೆ ಪ್ರಶ್ನೆ ಹಾಕಿದರು. ಅಂದರೆ ಹಣಕಾಸಿನ ಮಸೂದೆಯನ್ನು ತಂದರೆ ಏನೇ ಆಗಲೀ ಅದು ಅಂಗೀಕಾರವಾಗುವ ಹಾಗೆ ಮಾಡಲೇಬೇಕೆಂಬ ಅಭಿಪ್ರಾಯವನ್ನು ಅವರ ವ್ಯಕ್ತಪಡಿಸಿದ್ದಾರೆ. ಬಹುಶಃ ಸರ್ಕಾರದ ದೃಷ್ಟಿಯಿಂದ ಇದು ಅನಿವಾರ್ಯವೆಂದು ಕಾಣುತ್ತದೆ. ಅಂತೂ ವಿರೋಧ ಪಕ್ಷದ ಸದಸ್ಯರಾಗಿರುವ ನಾವು ಇಂಥ ತೆರಿಗೆ ಹಾಕುವ ಕಾನೂನನ್ನು ವಿರೋಧಿಸುವುದು ಅನಿವಾರ್ಯ, ಇದಕ್ಕೆ ಪ್ರತಿಭಟನೆ ಮಾಡಬೇಕು, ವಿರೋಧ ಮಾಡಬೇಕು ಎಂದೇ ಕಲಿತಿರುವುದು. ಇದನ್ನು ಆ ಪಕ್ಷದ ಸದಸ್ಯರು ಮನದಟ್ಟು ಮಾಡಿಕೊಳ್ಳಬೇಕು, ನೀತಿಯನ್ನು ಅರ್ಥಮಾಡಿಕೊಳ್ಳಬೇಕು. ಅವರೂ ವಿರೋಧ ಪಕ್ಷದಲ್ಲಿಲ್ಲದವರೇನೂ ಅಲ್ಲ. ಹಿಂದೆ ಅವರು ವಿರೋಧ ಪಕ್ಷದಲ್ಲಿದ್ದಾಗ ಸರ್ಕಾರವನ್ನು ಹೇಗೆ ವಿರೋಧಮಾಡಿದ್ದಾರೆಂಬುದು ವರದಿಯ ಪುಸ್ತಕಗಳನ್ನು ನೋಡಿದರೆ ಗೊತ್ತಾಗುತ್ತದೆ. ಈಗ ವಿರೋಧಮಾಡುವುದಷ್ಟೇ ಅಲ್ಲ, ಮತ್ತಷ್ಟು ತೀವ್ರವಾಗಿ ವಿರೋಧ ಮಾಡಬೇಕಾಗಿದೆ. ಇದನ್ನು ಕೇಳುವ ಸಹನೆ ಕೂಡ ಅವರಲ್ಲಿಲ್ಲವೆನ್ನುವುದನ್ನು ನೋಡಿ ವಿಷಾದಪಡಬೇಕಾಗಿದೆ. ಇಲ್ಲಿ ಮಾತನಾಡುತ್ತಾ ಇರುವಾಗ ಬೆಳಿಗ್ಗೆ ಒಂದು ಪ್ರಸಂಗ ನಡೆಯಿತು. ಆಗಲೇ ಅದನ್ನು ವಿಶದೀಕರಿಸಬೇಕೆಂದಿದ್ದೆ, ಆದರೆ ಅವಕಾಶ ದೊರೆಯಲಿಲ್ಲ. ಈಗ ಹೇಳಬೇಕೆಂದಿಚ್ಛಿಸುತ್ತೇನೆ. ಮಾನ್ಯ ಶ್ರೀ ಹನುಮಂತಯ್ಯನವರು ನಾನು ಹೇಳಿದ ಒಂದು ಮಾತಿಗೆ ಸಹನೆ ಮೀರಿ, 'ತಾವು ಧೂಳು, ಧೂಳಿಗಿಂತ ಕಡೆಯಾಗಿ ನಿಂತಿದ್ದಿರಿ, ನನ್ನ ಸಭೆಯಲ್ಲಿ ನಾಲ್ಕೈದು ಸಾವಿರ ಜನರಿದ್ದರು' ಎಂದು ಹೇಳಿದರು. ಇದು ದೊಡ್ಡದಾದ ಒಂದು ಅಹಂಕಾರದ ಮಾತೆಂತಲೇ ಹೇಳಬಹುದು. ಇದು ಅಧಿಕಾರದ ಅಮಲಿನಲ್ಲಿ ಆಡಿದ ಧಿಕ್ಕಾರದ ಮಾತೇ ಹೊರತು ಬೇರೆ ಅಲ್ಲವೆಂದು ಕಾಣುತ್ತದೆ. ಈ ಸಂದರ್ಭದಲ್ಲಿ ಒಂದು ವಿಷಯದಲ್ಲಿ ವಿವರಣೆ ಕೊಡಬೇಕಾಗಿದೆ. ಅಂದಿನ ಸಭೆ ನಡೆಯಬೇಕಾಗಿ ಬಂದಾಗ ದೇಶದಲ್ಲಿ ಈ ತೆರಿಗೆಗಳ ವಿಷಯವೂ ಇತ್ತು. ಮೊದಲೇ ಅಕ್ಕಿಯ ಬೆಲೆಯನ್ನು ಏರಿಸಿರುವಾಗ ಈ ಸಭೆಯನ್ನೂ ಕೇಳದೆ ಆಸ್ಪತ್ರೆಗಳಲ್ಲಿ ಹೊಸದಾಗಿ ತೆರಿಗೆಯನ್ನು ಹಾಕಿದ್ದೂ ಅಲ್ಲದೆ ಅನೇಕ ಕೂಲಿಯವರಿಗೂ, ಬಡಜನರಿಗೂ, ಮಾರಾಟಗಾರರಿಗೂ ತೊಂದರೆ ಕಿರುಕುಳ ಕೊಡುತ್ತಾಯಿರುವ ಮಾರಾಟ ತೆರಿಗೆಯ ಪ್ರಶ್ನೆಯೂ ದೇಶದ ಮುಂದೆ ಇದ್ದು ದೇಶಾದ್ಯಂತವೂ ಒಂದು ಕೂಗಿತ್ತು. ಅಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಾಗ ಮೊದಲೇ ಗೊತ್ತುಮಾಡಿದ್ದ ನಿಯಮದಂತೆ ಜನತೆ ಆ ಕಾರ್ಯಕ್ರಮವನ್ನಿಟ್ಟುಕೊಂಡಿತ್ತು.

SOME MEMBERS.—All this is irrelevant.

Sri R. K. PRASAD.—On a point of order, Sir. How is this relevant to the Bill under consideration, Sir?

Mr. SPEAKER.—It is not relevant. The Hon'ble Member may speak on the merits of the Bill.

ಶ್ರೀ ಎಸ್. ಗೋಪಾಲಗೌಡ.—ಇದೇ ತೆರಿಗೆಯ ನೀತಿಗೆ ಆ ಸಂದರ್ಭದಲ್ಲಿ ಅಧಿಕಾರ ವರ್ಗದವರೂ ವಿರೋಧಪಕ್ಷದ ಸದಸ್ಯರೂ ಹೊರಗೆ ಹೇಳಿರುವ ಮಾತಿಗೆ ಉತ್ತರ ಕೊಡದೇಹೋದರೆ ಕರ್ತವ್ಯಲೋಪವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅಧ್ಯಕ್ಷರ ರೂಲಿಂಗ್ ಏನು ?

Mr. SPEAKER.—There is no point of order.

ಶ್ರೀ ಎಸ್. ಗೋಪಾಲಗೌಡ.—ಆ ಸಂದರ್ಭದಲ್ಲಿ ದೇಶದಲ್ಲಿ ತೀವ್ರವಾದ ಚಳವಳಿ ಎದ್ದಿತ್ತು. ಅಂದಿನ ಸಂದರ್ಭವೇನೆಂದರೆ, ಮಾನ್ಯ ಸಚಿವರು ಅಲ್ಲಿಗೆ ಆಹ್ವಾನಿತರಾಗಿದ್ದು ಅಂದು ಬೆಳಿಗ್ಗೆ ಆಸ್ಪತ್ರೆಯ ಶಂಕುಸ್ಥಾಪನೆ ಮಾಡಬೇಕಾಗಿದ್ದ ಸಂದರ್ಭ. ಆ ಸಂದರ್ಭದಲ್ಲಿ ಖಾಸಗೀಜನರು ಹಲವರು ಆ ಕಾರ್ಯಕ್ಕೆ 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ದ್ರವ್ಯಕೊಟ್ಟಿದ್ದಾರೆ. ಆದ ಕಾರಣ ಆ ಕ್ಷೇತ್ರದಿಂದ ಆರಿಸಿ ಬಂದಿರತಕ್ಕ ಸದಸ್ಯನಾದ ನನ್ನ ಜವಾಬ್ದಾರಿಯೂ ಕೂಡ ಇದ್ದೆ. ಮುಖ್ಯ ಸಚಿವರು ಆ ಊರನ್ನು ಬಿಡುವವರೆಗೂ ಎಷ್ಟೋಜನರು ಹರತಾಳವನ್ನು ಆಚರಿಸಿದರು. ಸರ್ಕಾರ ಬಡಜನರ ವಿಷಯದಲ್ಲಿ ಕರುಣೆಯನ್ನು ತೋರಿಸಲಿಲ್ಲವೆಂಬುದನ್ನು ತೋರಿಸಲು ಜನರ ಪ್ರತಿಭಟನೆಯನ್ನು ಹರತಾಳದ ರೂಪದಲ್ಲಿ ಅನೇಕ ಜನರು ತೋರಿಸಿದರು. ಅದನ್ನು ಮುಖ್ಯ ಸಚಿವರು ತಿಳಿದುಕೊಂಡಿದ್ದರೆ ಸಾಕಾಗಿತ್ತು. ಅದನ್ನು ಬಿಟ್ಟು ಅವರು ಈ ಮಾತನ್ನಾಡಿರುವುದು ಅವರ ಸ್ಥಾನಕ್ಕೆ ತಕ್ಕುದಲ್ಲವೆಂದು ಹೇಳಿ ನಾನು............

Mr. SPEAKER.—At this rate I cannot allow you to go on, Sri Gopal Gowda. It is not relevant. This is a taxation Bill. You must give utterance to what is relevant. What a member or a Minister has said on some other occasion—you must not make use of now.

ಶ್ರೀ ಎಸ್. ಗೋಪಾಲಗೌಡ.—ಈ ಸಂದರ್ಭದಲ್ಲಿ ಈ ತೆರಿಗೆ ಮಸೂದೆಯನ್ನು ವಿರೋಧಿಸುತ್ತಾ, ನಾನು ಸರ್ಕಾರಕ್ಕೆ ಒಂದು ಸವಾಲು ಹಾಕಬೇಕೆಂದಿದ್ದೇನೆ. ನಿಮ್ಮ ತೆರಿಗೆಗಳನ್ನು justify ಮಾಡಿಕೊಳ್ಳುವುದಕ್ಕೆ, ಆಹಾರದ ಬೆಲೆಯನ್ನು ಹೆಚ್ಚಿಸಿರುವುದು, ಮಾರಾಟ ತೆರಿಗೆ ಹಾಕಿರುವುದು, ಆಸ್ಪತ್ರೆಗಳಲ್ಲಿ ಶುಲ್ಕ ವಿಧಿಸಿರುವುದು ಇವುಗಳು ನ್ಯಾಯವೇ ಅಥವಾ ಅಲ್ಲವೆ ಎಂಬುದನ್ನು ತೀರ್ಮಾನಿಸಲು ಯಾವುದಾದರೂ ಕ್ಷೇತ್ರದಲ್ಲಿ ಚುನಾವಣೆಗೆ ನಿಲ್ಲುವುದಾದರೆ, ನಾನು ಈಗ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ನಿಲ್ಲಲು ಸಿದ್ಧನಾಗಿ

ದ್ದೇನೆ. ಆಗ ದೇಶದ ಅಭಿಪ್ರಾಯ ಏನಿದೆ ಎಂಬುದನ್ನು ಪರೀಕ್ಷಿಸಿ ನೋಡಬಹುದು.

Sri K. HANUMANTHAIYA (Chief Minister).—I will accept his challenge. ಎರಡು ಬೈಎಲೆಕ್ಷನ್‌ಗಳಲ್ಲಿ ನಿಲ್ಲಿಸಿದ್ದೆವು. ಅವರು ರಾಜೀನಾಮೆಕೊಟ್ಟರೆ we shall contest on this issue.

ಶ್ರೀ ಎಸ್. ಗೋಪಾಲಗೌಡ.—ಅವರು ರಾಮನಗರದ ಕ್ಷೇತ್ರಕ್ಕೆ ರಾಜೀನಾಮೆಕೊಡಲಿ, ನಾನೂ ಕೊಡುತ್ತೇನೆ. ಇದೇ ವಿಷಯದಮೇಲೆ ಚುನಾವಣೆ ನಡೆಯಲಿ ತೀರ್ಮಾನ ಮಾಡೋಣ.

Sri K. HANUMANTHAIYA.—One word of explanation, Sir. These very issues were raised in Bangarpet and Nagamangala constituencies and the electorate has given their verdict. If my friend does not see facts and figures, I cannot help it.

Mr. SPEAKER.—The Hon'ble Member knows it very well.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆಗಳ ಮಂತ್ರಿಗಳು).—ಅಷ್ಟೇ ಅಲ್ಲ. ಒಂದೊಂದು ತೆಂಗಿನಗಿಡಕ್ಕೆ ಐದು ರೂಪಾಯಿಗಳಂತೆ ಕಂದಾಯ ಹಾಕಿದ್ದಾರೆ, ಹಾಕುತ್ತಾರೆ ಎಂದು ಜನರಲ್ಲಿ ಹೇಳಿದರು !

ಶ್ರೀ ಎಸ್. ಗೋಪಾಲಗೌಡ.—ನಾವು ಒಂದು ಸಮಿತಿಯನ್ನು ಮಾಡಬೇಕೆಂದು ಕೇಳಿಕೊಂಡರೆ, ಅವರು ಅದರ ಅರ್ಥವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಂಡು 'ನಾವು ಏನೋ ತಪ್ಪುಗಳನ್ನು ಮಾಡಿರುವಹಾಗೆ ಅವುಗಳನ್ನು ಒಳಹೊಕ್ಕು ಪರೀಕ್ಷೆ ಮಾಡುವುದಕ್ಕೆ ವಿರೋಧಪಕ್ಷದ ಸದಸ್ಯರು ಈ ಸಲಹೆ ಮಾಡಿದ್ದಾರೆ' ಎಂದು ಹೇಳಿದರು. ನಮ್ಮ ಉದ್ದೇಶ ಹಾಗೇನೂ ಅಲ್ಲ. ದೇಶದ ಆರ್ಥಿಕ ಪರಿಸ್ಥಿತಿ ಹೇಗಿದೆ, ನಮ್ಮ ಸಂಸ್ಥಾನದಲ್ಲಿ ಯಾವ ತೆರಿಗೆಗಳನ್ನು ಹಾಕುವುದಕ್ಕೆ ಅನುಕೂಲವಿದೆ, ಯಾವರೀತಿ ಖರ್ಚು ಮಾಡಬೇಕು, ಯಾವರೀತಿ ಮಿತವ್ಯಯ ಮಾಡಬಹುದು ಮುಂತಾದ ವಿಚಾರಗಳನ್ನು ಪರಿಶೀಲನೆಮಾಡಿ ಸಲಹೆ ಕೊಡಬೇಕೆಂಬ ಸದುದ್ದೇಶದಿಂದ, ದೇಶದ ಹಿತದೃಷ್ಟಿಯಿಂದಲೇ ಆ ಸೂಚನೆ ಕೊಟ್ಟೆವೇ ವಿನಾ ಇನ್ನೇನೂ ಅಲ್ಲ. ಇದಕ್ಕೆ ಅವರು ಆರೀತಿ ಅರ್ಥ ಕಲ್ಪಿಸಿರುವುದನ್ನು ನೋಡಿದರೆ, ಇದಕ್ಕವಕಾಶಕೊಡುವುದು ಅಷ್ಟು ಸೂಕ್ತವಲ್ಲ ಎಂದು ಅವರಿಗೆ ಅನ್ನಿಸಿರಬಹುದು ಅಥವಾ ಬೇರೆ ಇನ್ನಾವುದೋ ತೊಂದರೆಗಳಿರಬಹುದು. ಅದಕ್ಕೇ ಈರೀತಿ ಸಭೆಯ ಮುಂದೆ ಒಂದು ಅಭಿಪ್ರಾಯವನ್ನಿಟ್ಟಿದ್ದಾರೆ. ನಮಗೆ ಅಂಥಾ ಕಾತುರತೆಯೇನೂ ಇಲ್ಲ. ತಾವು ಅಧಿಕಾರದಲ್ಲಿ ಪೂರ್ತಿಯಾಗಿ ಜವಾಬ್ದಾರಿಯಾಗಿದ್ದು ದೇಶದ ಆಗುಹೋಗುಗಳಿಗೆ ಜವಾಬ್ದಾರರು; ತಮಗೆ ಇದರಲ್ಲಿ ಬರುವ ಒಳ್ಳೆಯ ಹೆಸರಿನಲ್ಲಿ ನಮಗೂ ಸಿಕ್ಕಲಿ ಎಂಬ ಆಕಾಂಕ್ಷೆ ಅಥವಾ ಕಾತುರ ನಮಗೇನೂ ಇಲ್ಲ. ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯ ಹೆಸರು ತಮಗೇ ಬರುತ್ತದೆ, ಅದಕ್ಕೆ ತಾವೇ ಪಾತ್ರರಾಗುತ್ತೀರಿ.

ಈ ತೆರಿಗೆಗಳ ವಿಷಯದಲ್ಲಿ ತಾವು ಎಷ್ಟೇ ವಾದವನ್ನು ಮುಂದಿಟ್ಟು, ಇದು ಅನಿವಾರ್ಯ, ಹಾಕಲೇಬೇಕು, 'ಅಭಿವೃದ್ಧಿ ಕಾರ್ಯಗಳಿಗೆ ಹಣಬೇಕು ಎಂದು ಹೇಳಿದರೂ ಕೂಡ ಇದು ನ್ಯಾಯವೆಂದು ಒಪ್ಪಿಸುವುದು ಕಷ್ಟವಿದೆ. ಒಳಹೊಕ್ಕು ನೋಡಿದರೆ, ಒಳಗೂ ಎಷ್ಟೋ ವಿರೋಧವಿದೆ ಎಂಬುದು ನಿಮಗೂ ಗೊತ್ತಿದೆ. ಒಂದು ರಾಜಕೀಯ ಪಕ್ಷದ ನಿಯಮಕ್ಕೆ ಕಟ್ಟುಬಿದ್ದು ಹೂಗುಟ್ಟಬಹುದು, ಕೈಯೆತ್ತಬಹುದು. ಆದರೆ ಅಂತರ್ಯದಲ್ಲಿ ಎಷ್ಟು ಬೆಂಬಲವಿದೆ ಎಂದರೆ, ಒಳಗೂ ಇಲ್ಲ ಹೊರಗೂ ಇಲ್ಲ. ದೇಶದ ಜನರು ಈ ತೆರಿಗೆಗೆ ಬೆಂಬಲ ಕೊಡಲಾರರು. ಒಟ್ಟಿನಲ್ಲಿ ದೇಶದ ಜನರ ಆರ್ಥಿಕ ಪರಿಸ್ಥಿತಿ ಹೀಗಿರುವಾಗ ತೆರಿಗೆಗಳನ್ನು ವಿಧಿಸುವಾಗ ನಾಲ್ಕು ಲಕ್ಷ, ಐದುಲಕ್ಷ ರೂಪಾಯಿಗಳು ಎಂದು ಹೇಳುತ್ತಾ ಸ್ವಲ್ಪ ಸ್ವಲ್ಪವಾಗಿ ಹನಿಹನಿಯಾಗಿ ಕೂಡಿಸಿ ಹಳ್ಳ ಮಾಡುವ ಕೆಲಸ ಬಹಳದೂರ ನಡೆಯಲಾರದು. ಈ ಹನಿಗಳು ಬೇಗ ಬತ್ತಿಹೋಗಿ ಬರಿಯ ಒಣಗಿಹೋದ ಹಳ್ಳವಾಗುತ್ತದೆ. ಯಾವರೀತಿ ನದಿಗಳು ಒಣಗಿ ಪಾತ್ರ ಕಂಡು ಬರಿಯ ಮರಳು ಕಾಣುತ್ತದೆಯೋ ಹಾಗೆ, ಒಣಹಳ್ಳ ದೊರೆಯಬಹುದೇ ವಿನಾ ನೀರು ತುಂಬಿರುವ ಸಮುದ್ರವಾಗುವುದಿಲ್ಲ. ಈ ರೀತಿಯಾಗುತ್ತದೆ ಈ ತೆರಿಗೆ ಹಾಕಿರುವುದು ಎಂದು ಹೇಳಿ, ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ.

6 P.M.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಅಧ್ಯಕ್ಷರೇ; ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸುತ್ತ ನಮ್ಮ ಎದುರುಪಕ್ಷದ ಮಾನ್ಯ ಸದಸ್ಯರು ಕೆಲವು ಟೀಕೆಗಳನ್ನು ಮಾಡಿದ್ದಾರೆ. ಆ ಟೀಕೆಗಳನ್ನು ನೋಡಿದರೆ ನಮ್ಮ ಸರ್ಕಾರದವರು ತರತಕ್ಕ ಮಸೂದೆಗಳನ್ನು ಕೇವಲ ವಿರೋಧಿಸಬೇಕೆಂಬ ಒಂದು ಮನೋಭಾವನೆಯಿಂದಲೇ ಹಾಗೆ ವಿರೋಧಿಸುತ್ತಿದ್ದಂತೆ ನನಗೆ ಭಾಸವಾಯಿತು. ಈಗ ನಮ್ಮ ಸರ್ಕಾರ ಹಾಕಬೇಕೆಂದಿರತಕ್ಕ ತೆರಿಗೆಯು ಕೇವಲ ಶ್ರೀಮಂತರಾಗಿರತಕ್ಕವರ ಮೇಲೂ ಮತ್ತು ಕೊಂಚಭಾಗ ಮಧ್ಯಮ ತರಗತಿಯವರ ಮೇಲೂ ಬೀಳುವಂಥದಾಗಿದೆಯೇ ಹೊರತು ರೈತರಮೇಲೆ ಅಷ್ಟಾಗಿ ತೆರಿಗೆ ಬೀಳತಕ್ಕಂಥ ಸಂದರ್ಭ ಇದರಲ್ಲಿಲ್ಲ. ಹಾಗೂ ಒಂದುವೇಳೆ ಈ ತೆರಿಗೆ ರೈತರಾಗಿರತಕ್ಕವರ ಮೇಲೂ ಬಿದ್ದೇಬೀಳುತ್ತದೆಂದು ಹೇಳುವುದಾದರೆ, ಅದು ಶೇಕಡ 8–10 ಕ್ಕಿಂತ ಜಾಸ್ತಿ ಇರಲಾರದು. ಅಂದಮೇಲೆ ಹಾಗೆ ಶೇಕಡ 90 ಜನರಿಂದ ಬರತಕ್ಕಂಥ ತೆರಿಗೆಯ ಹಣದ ಸೌಲಭ್ಯವನ್ನು ಈ ಶೇಕಡ 8–10 ಜನರ ದೃಷ್ಟಿಯಿಂದ ಬಿಟ್ಟುಬಿಡುವುದು ಉಚಿತವೇ ಅಲ್ಲವೇ ಎಂಬುದನ್ನು ಅವರು ಮತ್ತೊಮ್ಮೆ ಯೋಚಿಸಿ ನೋಡಬೇಕಾಗಿದೆ. ಸರ್ಕಾರ ರೈತನ ಮೇಲೆ ತೆರಿಗೆಹಾಕಲು ಪ್ರಯತ್ನಿಸುತ್ತಿದೆ ಎಂಬುದಾಗಿ ಒಂದು ಕೂಗನ್ನು ಎಬ್ಬಿಸಿದರೆ ಆಗ ದೇಶದಲ್ಲಿರತಕ್ಕ ಜನರೆಲ್ಲಾ ಎಚ್ಚರಗೊಳ್ಳುತ್ತಾರೆಂದು ಈರೀತಿ ಮಾಡತಕ್ಕದ್ದು ಸರಿಯಲ್ಲ. ಈ ದಿವಸ ಸರ್ಕಾರದವರು ಹಾಕತಕ್ಕ ತೆರಿಗೆ ಏನಿದ್ದರೂ ಯಾರುಯಾರು ಮೋಟಾರು ಕಾರು, ಲಾರಿ ಇಂಥವುಗಳನ್ನು ಓಡಿಸುತ್ತಿದ್ದಾರೋ ಅಂಥವರು ಕೊಳ್ಳುವ ಪೆಟ್ರೋಲಿನಮೇಲೆ ಬೀಳತಕ್ಕದ್ದಾಗಿಯೇ ವಿನಾ ಹಳ್ಳಿರೈತನಿಗೂ, ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಸರ್ಕಾರದವರು ಇಂಥ ಧನಿಕರಿಂದ ತೆರಿಗೆಗಳನ್ನು ವಸೂಲ್ಮಾಡಿ, ಅದರಿಂದ ದೇಶಕ್ಕೆ ಉಪಯುಕ್ತ ಸೌಕರ್ಯಗಳನ್ನು ಒದಗಿಸಲು ವಿನಿಯೋಗಮಾಡುತ್ತಾರೆ. ಈ ತೆರಿಗೆ ಹಾಕುವುದರ ಮುಖ್ಯಾಂಶವಾದರೂ ಇಷ್ಟೆ. 1952 ರಿಂದಲೂ ನಮ್ಮ ಸರ್ಕಾರದವರು ದೇಶದಲ್ಲಿ ವಿದ್ಯಾಭ್ಯಾಸದ ಸೌಲಭ್ಯಗಳಿಗಾಗಿ 321 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಚಾಲ್ತಿ ಸಾಲಿಗೆ 357 ಲಕ್ಷ

(ಶ್ರೀ ಆರ್. ಅನಂತರಾಮ್.)

ಹಣವನ್ನೊದಗಿಸಿದ್ದಾರೆ. ಹಾಗೊಂದುವೇಳೆ ತೆರಿಗೆಗಳನ್ನು ವಸೂಲುಮಾಡಿ ಆ ಹಣವನ್ನು ಪೋಲುಮಾಡುತ್ತಿದ್ದರೆ ಆಗ ನಾವು ಪ್ರತಿಭಟಿಸುವುದು ನ್ಯಾಯ. ಆದರೆ ಸರ್ಕಾರ ನೀವು 6 ಲಕ್ಷ ಕೊಡಿ ನಾವು 30 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳುವಾಗ, ನಾವು ಇಂಥ ಸಂದರ್ಭಗಳಲ್ಲಿ ಹಾಗೆ ಪ್ರತಿಭಟಿಸುವುದಕ್ಕಾಗುವುದಿಲ್ಲ. ಕಳೆದ ಮೂರು ವರ್ಷಗಳಿಂದಲೂ ವಿದ್ಯಾಭ್ಯಾಸಕ್ಕಾಗಿ ನಮ್ಮ ಸರ್ಕಾರ ಒಂದಕ್ಕೆ ಮೂರರಷ್ಟು ಹೆಚ್ಚಾಗಿ ಖರ್ಚುಮಾಡುತ್ತಿದೆ. ಉಪಾಧ್ಯಾಯರ ಸಂಖ್ಯೆಯನ್ನು ಜಾಸ್ತಿಮಾಡಬೇಕು, ಹೈಸ್ಕೂಲುಗಳು ನಮಗೆ ಸಾಲವು, ಇನ್ನೂ ಮಿಡಲ್‌ಸ್ಕೂಲುಗಳನ್ನು ಹೆಚ್ಚುಹೆಚ್ಚಾಗಿ ಸ್ಥಾಪಿಸಬೇಕು, ಪ್ರೈಮರಿ ಶಾಲೆಗಳು ಬೇಕು ಎಂದು ಸರ್ಕಾರದವರನ್ನು ಒತ್ತಾಯಪಡಿಸುತ್ತ ಮತ್ತೊಂದುಕಡೆ ಹೀಗೆ ತೆರಿಗೆಗಳನ್ನು ಕೊಡತಕ್ಕ ಬಗ್ಗೆ ಪ್ರತಿಭಟಿಸುವುದು ಯಾವ ನ್ಯಾಯ? ಹಿಂದೆ ಮಹಾತ್ಮ ಗಾಂಧಿಯವರು ಅವರ ಸತ್ಯಾಗ್ರಹ ಮಾಡುತ್ತಿದ್ದ ಕಾಲದಲ್ಲಿ ಯಾವುದಾದರೂ ಒಂದು ನಿಧಿಯನ್ನು ಎತ್ತಲು ಜನರಲ್ಲಿ ಮನವಿಮಾಡಿಕೊಂಡಾಗ ದೇಶದ ಶ್ರೀಮಂತರಲ್ಲಿ ಮುಖ್ಯರಾದ ಕೆಲವು ಜನರು ಎಂದರೆ ತಾತಾ, ಬಿರ್ಲ ಮುಂತಾದವರು ತಾವಾಗಿಯೇ ಮುಂದೆ ಬಂದು ನಿಮಗೆ ಎಷ್ಟು ಹಣ ಬೇಕೋ ಕೇಳಿ, ಅಷ್ಟೆಲ್ಲವನ್ನೂ ನಾವೊಬ್ಬಬ್ಬರೇ ಕೊಟ್ಟುಬಿಡುತ್ತೇವೆಂದು ಹೇಳುತ್ತಿದ್ದರಂತೆ. ಆಗ ಮಹಾತ್ಮಾ ಗಾಂಧಿಯವರೇ 'ಹಾಗೆ ಮಾಡಬಾರದು, ಆರೀತಿ ಒಬ್ಬರೇ ಹಣವನ್ನು ಕೊಟ್ಟರೆ, ದೇಶದ ಆಗುಹೋಗುಗಳ ಜವಾಬ್ದಾರಿಯೆಲ್ಲಾ ಒಬ್ಬರಮೇಲೇ ಬಿದ್ದು, ಬಾಕಿಯವರು ದೇಶಾಭಿವೃದ್ಧಿಯ ಕಡೆಗೆ ಲಕ್ಷಕೊಡಲು ಅವಕಾಶವಿಲ್ಲದಂತಾಗುತ್ತದೆ, ಆದುದರಿಂದ ಎಲ್ಲರೂ ಆ ನಿಧಿಗೆ ದುಡ್ಡನ್ನು ಸೇರಿಸುವುದು ಉಚಿತವೆಂದು ಹೇಳುತ್ತಿದ್ದರಂತೆ. ಅದರಂತೆ ಈಗ ಸರ್ಕಾರದವರು ಕೂಡ ಈ ತೆರಿಗೆಗಳನ್ನೆಲ್ಲಾ ಯಾವಾಗಲೂ ಶ್ರೀಮಂತರಾಗಿರತಕ್ಕವರೊಬ್ಬರ ಮೇಲೆ ಬೀಳುತ್ತಿರುವ ಹಾಗೆ ವಿಧಿಸುತ್ತ ಹೋದರೆ ಆಗ ಸಾಹುಕಾರರುಗಳು ನಮ್ಮಿಂದಲೇ ದೇಶ ಉದ್ಧಾರ ಆಗುತ್ತಿರುವುದು ಎಂದು ಹೇಳಿಕೊಳ್ಳಲು ಅವಕಾಶವಾಗುತ್ತದೆ. ಆದರೆ ಹಾಗೆ ಅವರು ಕೊಡುವ ತೆರಿಗೆಯಾದರೂ ಎಷ್ಟು? ಕೇವಲ 6 ಲಕ್ಷ ರೂಪಾಯಿಗಳು ಮಾತ್ರ. ಈ 6 ಲಕ್ಷ ರೂಪಾಯಿಗಳಿಂದ ಇಡೀ ದೇಶವೇ ಉದ್ಧಾರವಾಗಲು ಸಾಧ್ಯವೇ? ತೆರಿಗೆಗಳ ಹೊರೆಯನ್ನು ಹೊತ್ತು ರೈತನ ಬೆನ್ನು ಬಗ್ಗಿಹೋಗಿದೆ ಎಂದು ಹೇಳುತ್ತಿರುವಾಗ ಸರ್ಕಾರದವರು ಆತನಿಗೆ ಉಪಕಾರಮಾಡಿ ಆ ನೋವನ್ನು ತಪ್ಪಿಸಬೇಕೆಂಬ ಉದ್ದೇಶದಿಂದಲೇ ಇಂಥ ತೆರಿಗೆಗಳನ್ನು ಈಗ ಹಾಕಬೇಕೆಂದು ಉದ್ದೇಶಿಸಿರುವುದು. ವಾಹನ ತೆರಿಗೆಗಳನ್ನು ಹಾಕತಕ್ಕದ್ದು ವಾಹನ ಸೌಕರ್ಯಗಳನ್ನು ಕಲ್ಪಿಸಿ ತನ್ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕೆಂದೇ ಆಗಿರುತ್ತದೆ. ನಮ್ಮ ಬೆಂಗಳೂರು ಕಾರ್ಪೊರೇಷನ್ನಿನ ಸಿವಿಲ್ ಪ್ರದೇಶದಲ್ಲಿ ರಸ್ತೆಗಳಿಗಾಗಿ ಖರ್ಚು ಮಾಡುತ್ತಿರುವುದು 61 ಲಕ್ಷಕ್ಕೆ ಅಂದಾಜಾಗಿತ್ತು. ಅದು ಇತ್ತೀಚೆಗೆ 53–54ಕ್ಕೆ ರಿವೈಸ್ಡ್ ಎಸ್ಟಿಮೇಟಿನ ಪ್ರಕಾರ 64 ಲಕ್ಷಕ್ಕೆ ಏರಿಸಲಾಲಾಗಿದೆ. ಅಂದಮೇಲೆ ಆಬಗ್ಗೆ ಈಗ 3 ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಖರ್ಚುಮಾಡಬೇಕಾಗಿದೆ. ಹೀಗೆಯೆ ಇನ್ನೂ ಅನೇಕ ಅಭಿವೃದ್ಧಿ ಬಾಬುಗಳಿಗಾಗಿ 11 ಲಕ್ಷ ಖರ್ಚುಮಾಡಬೇಕೆಂದಿದ್ದ ಕಡೆ, ಈಗ ಅದು 28·36 ಲಕ್ಷಕ್ಕೆ ಏರಿದೆ. ಇದರಿಂದ ಈಗ ಹೊಸದಾಗಿ $17\frac{1}{4}$ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಖರ್ಚುಮಾಡಬೇಕೆಂದಿದ್ದಾರೆ. ಇಷ್ಟೇಅಲ್ಲದೆ ಮೊನ್ನೆತಾನೆ ನಮ್ಮ ಮಾನ್ಯ ಸಚಿವರು ಭಾಷಣಮಾಡತಕ್ಕ ಕಾಲದಲ್ಲಿ ಬೆಂಗಳೂರು ನಗರದಿಂದ ಪ್ರತಿಯೊಂದು ಜಿಲ್ಲಾ ಹೆಡ್‌ಕ್ವಾರ್ಟರುಗಳಿಗೂ, ಅನಂತರ ಅಲ್ಲಿಂದ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ ಹೋಗತಕ್ಕ ರಸ್ತೆಗಳನ್ನೆಲ್ಲಾ ಸಿಮೆಂಟ್ ಮಾಡಿಸಬೇಕೆಂಬ ಆಸೆ ಸರ್ಕಾರದವರಿಗೆ ಇರುತ್ತದೆಯೆಂಬುದಾಗಿ ಹೇಳಿದ್ದಾರೆ. ಆದರೆ ಎಲ್ಲಾ ರಸ್ತೆಗಳನ್ನೂ ಒಂದೇಸಲಕ್ಕೆ ಉತ್ತಮಪಡಿಸಬೇಕೆಂದರೆ ಅದೂ ಸಾಧ್ಯವಿಲ್ಲ. ಈವರ್ಷ ಸುಮಾರು $17\frac{1}{2}$ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಖರ್ಚುಮಾಡಿದ್ದಾರೆ. ಆ ವಿಚಾರಗಳನ್ನೆಲ್ಲಾ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಅವರ ಭಾಷಣದಲ್ಲಿ ಸವಿಸ್ತಾರವಾಗಿ ತಿಳಿಸಿದ್ದಾರೆ. ಅಭಿವೃದ್ಧಿ ಕಾರ್ಯಗಳನ್ನು ದೇಶದಲ್ಲಿ ಹೆಚ್ಚುಹೆಚ್ಚಾಗಿ ಕೈಕೊಳ್ಳಬೇಕಾದರೆ, ತೆರಿಗೆಗಳನ್ನು ಹಾಕದೆಹೋದರೆ ಅದರಿಂದ ಬಹಳ ಕಷ್ಟ ಬರುತ್ತದೆಂದು ತಿಳಿಸಿದ್ದಾರೆ. ಯಾರು ಹೆಚ್ಚುಹೆಚ್ಚು ಸೌಲಭ್ಯಗಳನ್ನು ಅಪೇಕ್ಷಿಸುತ್ತಾರೋ ಅವರು ಅಷ್ಟೇ ಹೆಚ್ಚುಹೆಚ್ಚು ತೆರಿಗೆಗಳನ್ನೂ ಕೊಡಬೇಕಾಗಿರುತ್ತದೆ.

ಈಗ ಬಸ್ ಮಾಲೀಕರಿಗೂ ಕೂಡ ಬಹಳ ಕಷ್ಟಗಳಿವೆ ಬಸ್ಸುಗಳ ಬೆಲೆ ಜಾಸ್ತಿಯಾಗಿದೆ. ಅವರ ಕಷ್ಟ ಜಾಸ್ತಿಯಾಗಿದೆ. ಆದರೆ ಅವರು ಹೀಗೆ ಕಷ್ಟವಾಗಿರುತ್ತೆಂದು ಲೆಕ್ಕಿಸಿದೆ ದೇಶದ ಉದ್ಧಾರಕ್ಕೂ ಸಹ ಕೊಂಚ ಕಷ್ಟಪಡಬೇಕಾದ್ದು ಅವರ ಕರ್ತವ್ಯ. ಇಂಥಾ ಒಂದು ಸದುದ್ದೇಶದಿಂದ ಹಾಕತಕ್ಕ ತೆರಿಗೆಯನ್ನು ಅವರು ಸಂತೋಷದಿಂದ ಕೊಡಬೇಕಾದದ್ದು ನ್ಯಾಯವಿದೆ. ಬರತಕ್ಕ ಲಾಭದಲ್ಲಿ ಅವರು ಸ್ವಲ್ಪಭಾಗವನ್ನಿಟ್ಟುಕೊಂಡು ಕೊಂಚಭಾಗವನ್ನು ಅವರು ಸರ್ಕಾರಕ್ಕೂ ಕೊಡಬೇಕು. ಇದರಿಂದ ಅವರು ದೇಶದ ಉದ್ಧಾರಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ.

ಮತ್ತೆ ಕೆಲವು ಸದಸ್ಯರು ಮದ್ರಾಸಿನಲ್ಲಿ ಎಷ್ಟು ತೆರಿಗೆ ಕೊಡುತ್ತಿದ್ದಾರೆ, ಮೈಸೂರಿನಲ್ಲಿ ಎಷ್ಟು ತೆರಿಗೆ ಕೊಡುತ್ತಿದ್ದಾರೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ತೆರಿಗೆ ಒಂದು ದೇಶದಲ್ಲಿ ಹೆಚ್ಚಾಗಿರಬಹುದು, ಇನ್ನೊಂದು ದೇಶದಲ್ಲಿ ಕಡಮೆಯಾಗಿರಬಹುದು. ಅದೇ ರೀತಿಯಾಗಿ ರಸ್ತೆಗಳ ವಿಚಾರವನ್ನು ನೋಡಿದರೆ, ಕೆಲವುಕಡೆ ರಸ್ತೆಗಳು ಚೆನ್ನಾಗಿದ್ದರೆ ಮತ್ತೆ ಕೆಲವು ಕಡೆ ರಸ್ತೆಗಳು ಕೆಟ್ಟುಹೋಗಿರುತ್ತವೆ. ಆ ಒಂದು ಕಾರಣವನ್ನು ಈ ಸಂದರ್ಭದಲ್ಲಿ ಹೋಲಿಕೆ ಹಾಕಿಕೊಂಡು ಮಾತನಾಡುವುದು ಸರಿಯಲ್ಲ. ಆದರೆ ಈ ತೆರಿಗೆ ಹಾಕತಕ್ಕದ್ದರಲ್ಲಿ ಒಬ್ಬರಿಗೆ ಜಾಸ್ತಿ ಇನ್ನೊಬ್ಬರಿಗೆ ಕಡಮೆ ಬೀಳುವಂಥಾ ರೀತಿಯಲ್ಲಿ ಹಾಕಿದ್ದರೆ ಆವಾಗ ನಾವು ಇದನ್ನು ಪ್ರತಿಭಟಿಸಲು ಅವಕಾಶವಿತ್ತು ಆದರೆ ಆ ಸಂದರ್ಭಕೂಡ ಇದರಲ್ಲಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಹೋಗಲಿ ತಾವು ರೈತನ ಮೇಲೆ ತೆರಿಗೆ ಹಾಕಲು ಎಲ್ಲಿಯವರೆಗೆ ಅವಕಾಶವಿದೆಯೆಂಬುದನ್ನಾದರೂ ಹೇಳಿಬಿಡಿ, ನೋಡೋಣ!

ಶ್ರೀ ಆರ್. ಅನಂತರಾಮ್.—ಕೆಲವರು ಸೇಲ್ಸ್ ಟ್ಯಾಕ್ಸ್ ವಿಚಾರವೆತ್ತಿದ್ದಾರೆ ತೆರಿಗೆ ಹಾಕತಕ್ಕದ್ದರಲ್ಲಿ ಯಾವ ಒಂದು ವ್ಯತ್ಯಾಸವೂ ಇರಬಾರದು. ಯೂನಿಯನ್ ಆದ್ಯಂತವೂ ಒಂದೆ ತೆರನಾದ ತೆರಿಗೆ ಇರತಕ್ಕದ್ದು ಒಳ್ಳೆಯದು. ಒಂದು ಸ್ಟೇಟಿನಲ್ಲಿ ಒಂದು ತರಹ ಸೇಲ್ಸ್‌ಟ್ಯಾಕ್ಸ್ ಹಾಕುವುದು, ಮತ್ತೊಂದು ಸ್ಟೇಟಿನಲ್ಲಿ ಮತ್ತೊಂದು ತರಹ ಹಾಕುವುದು ಸರಿಯಾದ್ದಲ್ಲ. ಇದನ್ನು ಒಂದೇ ಮಟ್ಟಕ್ಕೆ ತರುವುದರಿಂದ 5 ಲಕ್ಷ ಹೆಚ್ಚಾಗಬಹುದು ಇಲ್ಲವೇ 5 ಲಕ್ಷ ಕಮ್ಮಿಯಾಗಬಹುದು. ತಾವು ತೆರಿಗೆ ಹಾಕಿದರೂ ಚಿಂತೆಯಲ್ಲ. ಅದನ್ನು

ಒಳ್ಳೆಯ ರೀತಿಯಲ್ಲಿ ಖರ್ಚುಮಾಡಿ ದೇಶಾದ್ಯಂತವೂ ಒಳ್ಳೊಳ್ಳೆಯ ರಸ್ತೆಗಳನ್ನು ತಾವು ಮಾಡಬೇಕೆಂದು ನನ್ನ ಆಸೆ. ಇಂಥ ತೆರಿಗೆಗಳನ್ನು ವಿರೋಧಿಸುವುದಕ್ಕೆ ಯಾರಿಗೇ ಆಗಲಿ ಒಂದು ನ್ಯಾಯ ಬೇಕು. ಏನೋ ಕಾಂಗ್ರೆಸ್ ಸರ್ಕಾರ ಇಂಥ ತೆರಿಗೆಗಳನ್ನು ಹಾಕಲು ಒಂದು ಮಸೂದೆಯನ್ನು ತಂದಿದೆಯಲ್ಲ ಎಂಬ ಮನೋಭಾವನೆಯಿಂದ ವಿರೋಧಿಸತಕ್ಕದ್ದು ಸರಿಯಲ್ಲವೆಂದು ಹೇಳಬೇಕಾಗಿದೆ. ತೆರಿಗೆಗಳನ್ನು ಹಾಕತಕ್ಕದ್ದು ಜನರ ಅನುಕೂಲಕ್ಕಾಗಿ, ಇಂಥ ತೆರಿಗೆಗಳನ್ನು ಕೊಡತಕ್ಕದ್ದು ಜನರ ಕರ್ತವ್ಯ. ಹಾಗೆ ಕೊಡತಕ್ಕ ತೆರಿಗೆ ಹಣವನ್ನು ಒಂದು ಸರಿಯಾದ ಮಾರ್ಗದಲ್ಲಿ ಖರ್ಚುಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಈ ತತ್ವದ ಗುರಿಯನ್ನೇ ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ. ವಿರೋಧ ಪಕ್ಷದ ಸದಸ್ಯರು ವಿರೋಧಿಸಬೇಕಾದ್ದು ಅವರ ಕರ್ತವ್ಯ. ಆದರೆ ಆಡಳಿತ ವರ್ಗದವರು ತೆರಿಗೆ ಹಾಕದಿದ್ದರೆ ದೇಶದಲ್ಲಿ ನಡೆಯಬೇಕಾಗಿರತಕ್ಕ ಅನೇಕ ಅಭಿವೃದ್ಧಿ ಕಾರ್ಯಗಳು ಮುಂದುವರಿಯಲು ಬಹಳ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಹೀಗೆ ಹೇಳುತ್ತಿರುವುದು ಸರಿ. ಇದು ನ್ಯಾಯವಾಗಿಯೆ ಇರುತ್ತದೆಯೆಂಬ ಅಂಶ ಎದುರು ಪಕ್ಷದ ಮಾನ್ಯ ಸದಸ್ಯರ ಹೃದಯದಲ್ಲೂ ಇದೆ. ಆದರೆ ಅವರು ವಿರೋಧಪಕ್ಷದಲ್ಲಿರುವುದರಿಂದ ಅದನ್ನು ಬಿಚ್ಚಿತೋರಿಸುತ್ತಿಲ್ಲ. ಆದಕಾರಣ ಈ ಮಸೂದೆಗೆ ಎಲ್ಲರ ಬೆಂಬಲವೂ ಇದೆಯೆಂದೂ, ನಾನೂ ಸಹ ಇದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆಂದೂ ತಿಳಿಸಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಅಧ್ಯಕ್ಷರೇ, The Mysore Elementary Education and Motor Vehicles Taxation and Tolls (Amendment) Bill 1953. ಈ ಬಿಲ್ಲಿನ 3ನೆಯ ಸೆಕ್ಷನ್ನಿನಲ್ಲಿ Substitution of a new Schedule for the First Schedule to Mysore Act XII of 1951 ಎಂದು ಹೇಳಿರತಕ್ಕ ವಿಚಾರವಾಗಿ ಮಾತ್ರ ನಾನು ಮಾತನಾಡುತ್ತಿದ್ದೇನೆ. ಶ್ರೀಮಾನ್ ಆರ್. ಅನಂತರಾಮ್‌ರವರು ಮಾತನಾಡುತ್ತ ಮದ್ರಾಸಿನಲ್ಲಿ ಮೈಸೂರಿಗಿಂತಲೂ ಈ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಜಾಸ್ತಿ ಹಾಕಿರುತ್ತಾರೆಂದು ಹೇಳಿದರು. ಆದರೆ ಅವರಿಗೆ ಇದರ ಬಗ್ಗೆ ಅಷ್ಟು ಹೆಚ್ಚಿನ ಮಾಹಿತಿ ಇಲ್ಲವೆಂದು ನಾನು ತಿಳಿಸಬೇಕಾಗಿದೆ. ಅಲ್ಲಿ ಅವರು ಹಾಕಿರತಕ್ಕ ಟ್ಯಾಕ್ಸ್ ನಮ್ಮಲ್ಲಿರುವುದಕ್ಕಿಂತಲೂ ಬಹಳ ಕಡಮೆ. ನಾನು ಆ ಪ್ರಾಂತ್ಯದಲ್ಲೆಲ್ಲಾ ಪ್ರವಾಸ ಮಾಡಿನೋಡಿದ್ದೇನೆ. ಅವರು ಹೇಳುವ ಪ್ರಕಾರ, ನಮ್ಮ ಟ್ಯಾಕ್ಸ್ ಈಗ 100 ಮೈಲಿ ಒಂದು ಬಸ್ ರನ್ ಆಗುತ್ತಿದ್ದರೆ ಅದಕ್ಕೆ ಒಂದು ಕ್ವಾರ್ಟರಿಗೆ 900 ರೂಪಾಯಿ ಟ್ಯಾಕ್ಸ್ ಕೊಡಲಾಗುತ್ತಿತ್ತು; ಈ ಹೊಸ ತೆರಿಗೆಯ ಕಾನೂನು ಪ್ರಕಾರ ಈ ಟ್ಯಾಕ್ಸ್ 1,600 ರೂಪಾಯಿಗಳಾಗುತ್ತದೆ. ಮದ್ರಾಸಿನಲ್ಲಿ ಸೀಟಿಂಗ್ ಟ್ಯಾಕ್ಸ್ ಮತ್ತು ಮೈಲೇಜ್ ಸೆಸ್ಸುಗಳಿಲ್ಲ. ನಮ್ಮಲ್ಲಿ ಆ ಎರಡು ತೆರಿಗೆಗಳೂ ಇವೆ. 30 ಸೀಟುಗಳಿರತಕ್ಕ ಬಸ್ಸಿಗೆ 200 ರೂಪಾಯಿಗಳ ಟ್ಯಾಕ್ಸ್ ಬಹಳ ಜಾಸ್ತಿಯಾಯಿತು. ಮದ್ರಾಸ್ ಪ್ರಾಂತದಲ್ಲಿರತಕ್ಕ ರಸ್ತೆಗಳ ನಾಣ್ಯತೆಯೇನು, ಇಲ್ಲಿರುವ ರಸ್ತೆಗಳ ನಾಣ್ಯತೆಯೇನು ಎಂಬುದನ್ನು ನಾನು ಚೆನ್ನಾಗಿ ಮನಗಂಡಿದ್ದೇನೆ. ಆ ಪ್ರದೇಶದಲ್ಲಿ ನಾನು ಬಸ್ಸುಗಳಲ್ಲಿ ಬಹಳ ಪ್ರವಾಸಮಾಡಿದ್ದೇನೆ. ಶ್ರೀಮಾನ್ ಅನಂತರಾಮ್‌ರವರು, ಅನಂತಪುರ, ನೆಲ್ಲೂರು ಇಂಥ ಒಂದೆರಡು ಸ್ಥಳಗಳಿಗೆ ರೈಲಿನಲ್ಲಿ ಹೋಗಿ ಬಂದಿರಬಹುದು. ಆದರೆ ನಮ್ಮ ಕಡೆಯ ರಸ್ತೆಗಳು ಆ ಪ್ರದೇಶದ ರಸ್ತೆಗಳ ಮೇಲೆ ಕಾಂಪೀಟ್ ಮಾಡಲಾರವು. ಅನಂತಪುರದಿಂದ ಬಳ್ಳಾರಿಗೆ ಹೋಗತಕ್ಕ ರಸ್ತೆ ಮತ್ತು ಇನ್ನೂ ಅನೇಕ ಆ ರಸ್ತೆಗಳು ನಮ್ಮ ಸಿಮೆಂಟ್ ರಸ್ತೆಗಳಿಗಿಂತಲೂ ಬಹಳ ಚೆನ್ನಾಗಿವೆ. ಆದರೆ ತಾವು ಅಧಿಕಾರಕ್ಕೆ ಬಂದಮೇಲೆ ಅವೂ ಸಹ ಇತ್ತೀಚೆಗೆ ಕೆಡಲಾರಂಭವಾಗಿವೆ. ಅಲ್ಲಿ ರಸ್ತೆಗಳಿಗೆ ವೇರ್ ಅಂಡ್ ಟೇರೇಜ್ ಕಡಮೆ ಇಲ್ಲಿಯ ರಸ್ತೆಗಳಿಗೆ ವೇರ್ ಅಂಡ್ ಟೀರೇಜ್ ಜಾಸ್ತಿ ಇದೆ. ಇನ್ನು ತಾವು ಮೈಲೇಜ್ ಸೆಸ್ಸನ್ನು 8 ಕಾಸುಗಳಿಂದ 1 ಆಣೆಯವರೆಗೆ ಹಾಕಲಾಗುತ್ತದೆಂದು ಈ ಕಾನೂನಿನಲ್ಲಿ ತಿಳಿಸಿದ್ದೀರಿ. ಹೀಗೆ ತಾವು ತೆರಿಗೆಗಳನ್ನೇನೋ ಹೆಚ್ಚಿಸುತ್ತಿದ್ದೀರಿ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ರಸ್ತೆಗಳು ಯಾವ ರೀತಿಯಲ್ಲಿದ್ದವೋ ಈಗಲೂ ಹಾಗೆಯೇ ಇರುತ್ತವೆ.

ಇದೇ ರೀತಿ, ಮೈಸೂರು ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ವಿಚಾರದಲ್ಲಿ ಯಾವ ರೀತಿಯ ಪರಿಣಾಮವಾಗುತ್ತದೆ ನೋಡಿ. ಒಂದು ಸೀಟಿಗೆ $12\frac{1}{2}$ ರೂಪಾಯಿ ಜಾಸ್ತಿಕೊಡಬೇಕಾಗುತ್ತದೆ. ಇದರಿಂದ ಒಂದು ವರ್ಷಕ್ಕೆ 1,30,000 ರೂಪಾಯಿಗಳು ಜಾಸ್ತಿ ಕೊಡಬೇಕಾಗಿ ಬಂತು. 1950-51ರಲ್ಲಿ ಬಂದಿರತಕ್ಕ ಆದಾಯ 25,000 ರೂಪಾಯಿಗಳು. 1952-53ಕ್ಕೆ ಹೆಚ್ಚುಕಡಮೆ ಒಂದು ಲಕ್ಷ ರೂಪಾಯಿಗಳಾಗಬಹುದು. ಅಲ್ಲಿಗೂ ಒಟ್ಟಿನಲ್ಲಿ ನಾವು 3,20,000 ರೂಪಾಯಿಗಳನ್ನು ಜಾಸ್ತಿ ಕೊಡಬೇಕಾದ್ದರಿಂದ 2 ಲಕ್ಷ ರೂಪಾಯಿಗಳು ನಿವ್ವಳ ನಷ್ಟವಾಗಿ ಸರ್ಕಾರಿ ರೋಡ್‌ಟ್ರಾನ್ಸ್‌ಪೋರ್ಟ್ ಇಲಾಖೆ ಲುಕ್ಸಾನು ಬಾಬಾಗಿ ಉಳಿಯುತ್ತದೆ. ಅದೂ ಸರ್ಕಾರದ ರೋಡ್ ಟ್ರಾನ್ಸ್‌ಪೋರ್ಟಿಗೆ ನಾನಾ ರೀತಿಯ ಅನುಕೂಲಗಳು ಇದ್ದೂ ಈ ಪರಿಣಾಮ! ಹೇಗೆಂದರೆ, ಸರ್ಕಾರಕ್ಕೆ ಸರಬರಾಯಿ ಮಾಡುವುದರಲ್ಲಿ ಚಾಸೀಗಳನ್ನು ಕೊಂಡುಕೊಡುವವರಾಗಲಿ, ಪೆಟ್ರೋಲ್ ಕಂಪೆನಿಯವರಾಗಲಿ, ಸ್ಪೇರ್ ಪಾರ್ಟ್ಸ್ ಕಂಪೆನಿಯವರಾಗಲಿ, ಅವರಿಗೆ cost of production ಕಡಮೆಯಾಗುತ್ತದೆ. ಇಷ್ಟೆಲ್ಲಾ ಇದ್ದೂ ಈ ವರ್ಷ ನಮ್ಮ ಆದಾಯ ಒಂದು ಲಕ್ಷ. ಆದ್ದರಿಂದ ಈ ರೀತಿ ನಾವು ಟ್ಯಾಕ್ಸ್ ಜಾಸ್ತಿ ಮಾಡಿದ್ದರಿಂದ ನಮ್ಮ ಟ್ರಾನ್ಸ್‌ಪೋರ್ಟ್ ಇಲಾಖೆಗೇ ಹೇಗೆ 2 ಲಕ್ಷ ರೂಪಾಯಿಗಳು ನಷ್ಟವಾಗುತ್ತದೆಂಬುದನ್ನು ಹೇಳಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಅಷ್ಟೂ ದುಡಿಯುತ್ತೇವೆ. ತಮ್ಮ ಅಭಿಪ್ರಾಯ ರಾಷ್ಟ್ರೀಕರಣ ಬೇಡವೆಂತಲೇ?

ಶ್ರೀ ಮುಲ್ಕ ಗೋವಿಂದರೆಡ್ಡಿ.—ರಾಷ್ಟ್ರೀಕರಣ ಮಾಡುವುದು ಅಗತ್ಯವೆಂಬುದನ್ನು ಒಪ್ಪುತ್ತೇವೆ. ಆದರೆ ಈಗ ಏನು ಲುಕ್ಸಾನಾಗುತ್ತಿದೆಯೆಂದು ಹೇಳುತ್ತಿದ್ದೇವೋ ಅದು ಹೇಗೆ ಆಗುತ್ತಿದೆಯೆಂಬುದು ಅರ್ಥವಾಗುತ್ತಿಲ್ಲ. ಎಲ್ಲೆಲ್ಲಿ leakages ಇವೆ ಅವುಗಳನ್ನು ಸರಿಪಡಿಸಿ ದಕ್ಷತೆಯಿಂದ ನಡೆಸಬೇಕು.

ಹಾಗೆಯೇ ಇನ್ನು ಪೆಟ್ರೋಲ್ ಮೇಲೆ ಎರಡಾಣೆ ಜಾಸ್ತಿಮಾಡಿರುವುದರಿಂದ 45,000 ರೂಪಾಯಿಗಳನ್ನೂ ಹೆಚ್ಚಿಗೆ ನೀವು ಕೊಡಬೇಕಾಗಿ ಬರುತ್ತದೆ. ಅಲ್ಲಿಗೆ ಒಟ್ಟು 3,75,000 ರೂಪಾಯಿಗಳನ್ನು ಈ ಎರಡು ಟ್ಯಾಕ್ಸ್‌ಗಳಿಂದ ರೋಡ್‌ಟ್ರಾನ್ಸ್‌ಪೋರ್ಟ್ ಇಲಾಖೆಯವರು ಕೊಡಬೇಕಾಗಿಬರುತ್ತದೆ. ಇದನ್ನು ಯಾವ ರೀತಿ ಸರಿಪಡಿಸುತ್ತೀರೋ ನನಗೆ ಗೊತ್ತಾಗುವುದಿಲ್ಲ. ಅಲ್ಲದೆ, ರೋಡ್ ಟ್ರಾನ್ಸ್‌ಪೋರ್ಟ್ ಎಲ್ಲವನ್ನೂ

(ಶ್ರೀ ಮುಲ್ಕ ಗೋವಿಂದರೆಡ್ಡಿ.)

ಪೂರ್ತಿಯಾಗಿ ರಾಷ್ಟ್ರೀಕರಣಮಾಡಬೇಕೆಂಬುದೇ ತಮ್ಮ ನೀತಿ ಮತ್ತು ಗುರಿಯಾಗಿರುವಾಗ ಹಾಗೂ ಇನ್ನು ೭—೩ ವರ್ಷಗಳಲ್ಲೇ ರಾಷ್ಟ್ರೀಕರಣ ಮಾಡಬೇಕೆಂದಿರುವಾಗ ಈ ಮಸೂದೆಯನ್ನೇಕೆ ತರುತ್ತೀರೋ ನನಗೆ ಗೊತ್ತಾಗುವುದಿಲ್ಲ. ಆದಾಯವನ್ನಾದರೂ ತೃಪ್ತಿಕರವಾಗಿದ್ದರೆ ಪರವಾಗಿಲ್ಲ. ಜೊತೆಗೆ ಓಡಾಡತಕ್ಕ ಬಸ್ಸುಗಳ ಸಂಖ್ಯೆಯೋ ಕಡಮೆಯಾದರೆ, ಈಗಿರುವ ಕಂದಾಯವೂ ಕೂಡ ಬರುವುದಿಲ್ಲ. ಆದ್ದರಿಂದ ಈ ಕಾನೂನನ್ನು ವಾಪಸು ತೆಗೆದುಕೊಳ್ಳಿ, ಮುಂದುವರಿಸಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲವೆಂದು ನಾನು ನಯವಾಗಿ ಹೇಳುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಅಧ್ಯಕ್ಷರೇ, ಈಗ ಸಭೆಯ ಮುಂದಿರತಕ್ಕ ಈ ಮಸೂದೆಯನ್ನು ಸಮರ್ಥನೆ ಮಾಡುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ, ಮೋಟಾರುಗಳ ಮೇಲೆ ಟ್ಯಾಕ್ಸ್ ಹಾಕಬಾರದೆಂದು ಮಾನ್ಯ ಸದಸ್ಯರನೇಕರು ಮಾತನಾಡುತ್ತಾ ಹೇಳಿದ್ದಾರೆ. ಯಾವ ತೆರಿಗೆ ಹಾಕಿದರೂ ಕೂಡ ಅದು ರೈತರ ಮೇಲೆ ಬೀಳುತ್ತದೆ ಎಂಬುದು ವಿರೋಧಪಕ್ಷದವರೆಲ್ಲರ ವಾದದಲ್ಲೂ ಕಂಡುಬರುತ್ತದೆ, ಮತ್ತೊಂದು ಅಂಶವನ್ನು ವಿರೋಧಪಕ್ಷದವರೇ ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದಾರೆ. ಏನೆಂದರೆ ನಮ್ಮ ಮೈಸೂರು ದೇಶದಲ್ಲಿರತಕ್ಕ ರಸ್ತೆಗಳು ಬಹಳ ಕೆಟ್ಟುಹೋಗಿವೆ, ಮದ್ರಾಸ್ ಪ್ರಾಂತದಲ್ಲಿರತಕ್ಕ ರಸ್ತೆಗಳು ಇಲ್ಲಿಗಿಂತ ಚೆನ್ನಾಗಿವೆ ಎಂದು. ಅವರು ಹೇಳಿದಂತೆ ಕೆಲವು ಹೈ-ರೋಡುಗಳು ಚೆನ್ನಾಗಿರಬಹುದು, ಅದನ್ನು ಒಪ್ಪೋಣ. ಇದಕ್ಕೆ ಕಾರಣವನ್ನು ಯೋಚನೆಮಾಡುವಾಗ ಸ್ವಲ್ಪಮಟ್ಟಿಗೆ ಆ ಪ್ರಾಂತದ Topography ಯನ್ನೂ ಇಲ್ಲಿನ Topography ಯನ್ನೂ ಗಮನದಲ್ಲಿಟ್ಟುಕೊಳ್ಳುವುದು ಅವಶ್ಯಕ. ಮದ್ರಾಸ್ ಪ್ರಾಂತ ಹೆಚ್ಚುಕಡಮೆ ಏರುದಿಣ್ಣೆಗಳಿಲ್ಲದ ಸಮನೆಲ. ಮೈಸೂರು ಸೀಮೆಯಲ್ಲಾದರೋ ಕೆಲವು ಕಡೆ ಅದರಲ್ಲೂ ಮಲೆನಾಡಿನಲ್ಲಿ ಭೂಮಿಯಲ್ಲಿ ತಗ್ಗುದಿಣ್ಣೆ ಜಾಸ್ತಿಯಾಗಿದೆ. ಮೈದಾನ ಪ್ರದೇಶದಲ್ಲಿ ಅಷ್ಟಿಲ್ಲವೆನ್ನಬಹುದು. ಮಲೆನಾಡಿನಲ್ಲಿ ಅದಕ್ಕೆ ಸರಿಯಾಗಿ ಮಳೆಯೂ ಜಾಸ್ತಿ. ಇದರಿಂದಾಗಿ ರಸ್ತೆಗಳಿಗೆ ಎಷ್ಟು ಹಣ ಖರ್ಚು ಮಾಡಿದರೂ ಬಿಗಿಯಾಗಿ ನಿಲ್ಲುವುದಿಲ್ಲ. ಮಳೆ ಜೋರಾಗಿ ಬಂದಿತೆಂದರೆ ಜಲ್ಲಿಯೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ಇಲ್ಲಿನ ರಸ್ತೆಗಳನ್ನೂ ಮದ್ರಾಸಿನ ರಸ್ತೆಗಳನ್ನೂ ಹೋಲಿಸಿದಂಥ ಮಾನ್ಯ ಮಿತ್ರರು ಇಷ್ಟನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಸಾಕೆಂದು ಹೇಳುತ್ತೇನೆ.

ಇದಲ್ಲದೆ Total Mileage ತೆಗೆದುಕೊಂಡರೆ ಮೈಸೂರು ದೇಶದಲ್ಲಿ 12,000 ಮೈಲಿಗಳಷ್ಟಿದೆಯೆಂದು ಕೇಳಿದ್ದೇನೆ. ಮದ್ರಾಸ್ ಪ್ರಾಂತ್ಯದಲ್ಲಿ ಅವರು ಇಡೀ ಪ್ರಾಂತ್ಯದ ವಿಸ್ತೀರ್ಣವನ್ನೂ ತೆಗೆದು ನೋಡುವುದಾದರೆ—ಕರಾರುವಾಕ್ಕಾದ ಅಂಕಿಅಂಶಗಳು ಈಗ ನನ್ನಲ್ಲಿಲ್ಲ. ಆದರೂ ಇಷ್ಟು ಮಾತ್ರ ಹೇಳಬಹುದು—ನಮ್ಮ ದೇಶದ ಮೈಲೇಜಿಗಿಂತ ಅವರದು ಕಡಮೆ. ಈ ದೃಷ್ಟಿಯಿಂದ ರಸ್ತೆಗಳನ್ನು ನಾವು ಸರಿಯಾಗಿ ನೋಡಿಕೊಳ್ಳುತ್ತಿಲ್ಲವೆನ್ನುವ ವಾದ ಅಷ್ಟಾಗಿ ಸಲ್ಲತಕ್ಕದ್ದಲ್ಲ.

ಇನ್ನು, ಈ ಮೋಟಾರ್ ಟ್ಯಾಕ್ಸ್ indirect ಆಗಿ ಪ್ರಯಾಣಿಕನ ಮೇಲೆ ಬೀಳತ್ತದೆಂದು ಒಂದುವಾದವಿದೆ. ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಜಶೇಖರ ಮೂರ್ತಿಯವರೇ ಇದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅವರ ಮೇಲೆ ಬೀಳುವುದಕ್ಕೆ ಅವಕಾಶವೇ ಇಲ್ಲ ಎಂದು. ಕಾನೂನು ಬದ್ಧವಾಗಿ ದರವನ್ನು ಜಾಸ್ತಿಮಾಡಲಿಕ್ಕೇ ಆಸ್ಪದವಿಲ್ಲವೆಂದು ಅವರು ಹೇಳಿ, ಆ ವಾದದಲ್ಲಿ ಯಾವ ತಿರುಳೂ ಇಲ್ಲವೆಂದು ವ್ಯಕ್ತಪಡಿಸಿದ್ದಾರೆ.

ಆದ್ದರಿಂದ ಇನ್ನು ಹೆಚ್ಚು ನಾನು ಲಂಬಿಸಿಕೊಂಡು ಹೋಗಬೇಕಾದ ಪ್ರಮೇಯವಿಲ್ಲ. ಹೀಗಿದ್ದರೂ ಈ ರೀತಿಯಾಗಿ ವಾದ ಹೂಡಬೇಕಾದರೆ ಯಾವ ಕಾರಣದಿಂದ ಹೂಡಿರಬೇಕೆಂದರೆ, ರೈತರ ಹೆಸರಿನಲ್ಲಿ, ಏನೇ ತೆರಿಗೆ ಬರಲಿ, ತಾವೂ ತಪ್ಪಿಸಿಕೊಳ್ಳುವ ಯೋಚನೆಯಿಂದ ಹೀಗೆ ಹೇಳಿದ್ದಾರೋ ಏನೋ ಎಂಬ ಶಂಕೆ ಕೂಡ ಬರುತ್ತದೆ.

ಸೇಲ್ಸ್ ಟ್ಯಾಕ್ಸ್ ಮಾತೆತ್ತಿ ವಾದಿಸುತ್ತಾ ದೇಶಾದ್ಯಂತ ಆದಕ್ಕಾಗಿ ಪ್ರತಿಭಟನೆ ನಡೆಯಿತು ಎಂದು ಮಾನ್ಯ ಸದಸ್ಯರು ಅಪ್ಪಣೆಕೊಡಿಸಿದರು. ಹೀಗೆಯೇ ಯಾವ ಟ್ಯಾಕ್ಸ್ ಬಂದರೂ ದೇಶಾದ್ಯಂತ ಎಂತಲೇ ಹೇಳುತ್ತಾರೆ. ಮೋಟಾರು ವಾಹನಗಳ ಮೇಲೆ ಹಾಕಿದರೆ ಅದೂ ರೈತರ ಮೇಲೆಯೇ ಬೀಳುವಂತೆ ಅವರ ಕಣ್ಣಿಗೆ ಕಾಣುತ್ತದೆ. Direct ಆಗಿ ವಿದ್ಯಾಭ್ಯಾಸದ ಸೆಸ್ ಹಾಕಿದರೆ Direct ಆಗಿ ಬೇಡಿ, indirect ಆಗಿ ಹಾಕಿ ಎಂದು ಅವರೇ ಹೇಳುತ್ತಾರೆ; indirect ಆಗಿ ಹಾಕಿದರೆ, ಅದೂ direct ಟ್ಯಾಕ್ಸೇ ಆಗಿಬಿಡುತ್ತದೆ. ನನಗೆ ತೋರಿದ ಹಾಗೆ, ಮೈಸೂರು ದೇಶವ ಯಾವ ಹಳ್ಳಿಯಲ್ಲೂ ಇದುವರೆಗೂ ಸೇಲ್ಸ್ ಟ್ಯಾಕ್ಸ್ ತೆಗೆದು ಹಾಕಿ ಎಂದು ಹರತಾಳ ಮಾಡಿದ್ದಾಗಲಿ, ಪ್ರತಿಭಟನೆ ತೋರಿಸಿದ್ದಾಗಲಿ ನೋಡಿಲ್ಲ! ಕೇಳಿಲ್ಲ! ಹಾಗಿದ್ದರೆ ಯಾವ ಹಳ್ಳಿಯಲ್ಲಿ ನಡೆದಿದೆಯೆಂಬುದನ್ನು ಅವರಾದರೂ ಹೇಳಲಿ. ಎಲ್ಲೂ ಇಲ್ಲ ! ಎಲ್ಲೋ ಕೆಲವು interested ಜನ ಸ್ವಲ್ಪ ಗಲಾಟೆ ಮಾಡಿದ್ದನ್ನೇ 'Storm in a Tea Cup'' ಎನ್ನುವಂತೆ ಅದನ್ನೇ ಒಂದು ದೊಡ್ಡ Storm ಎಂದು ತಿಳಿದುಕೊಂಡರೆ ಅದು ಅವರ ದೃಷ್ಟಿಯಲ್ಲಿರುವ ಒಂದು ದೋಷ ಎಂದು ಮಾತ್ರ ಹೇಳಬೇಕು.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಹಳ್ಳಿಗೆ ಹೋಗಿದ್ದೀರಿ, ಸ್ವಾಮಿ, ತಾವು ?

ಶ್ರೀ ಡಿ. ದೇವರಾಜ್ ಅರಸ್.—ಕೈಲಾದ ಮಟ್ಟಿಗೂ ಹಳ್ಳಿಗಳಿಗೆ ಹೋಗಿ ನೋಡಿದ್ದೇನೆ; ಈಗಲೂ ನಾನು ಹಳ್ಳಿಯಲ್ಲೇ ಇದ್ದೇನೆ.

ಇನ್ನು ಎಜ್ಯುಕೇಷನ್ ಸೆಸ್ ವಿಷಯ. ಅದೂ ಕೂಡ ರೈತರಿಗೆ ತೊಂದರೆ ತರುತ್ತದೆ, ಈ driect cess ಹಾಕಬಾರದು ಎಂದು ವಾದಮಾಡಿದ್ದಾರೆ. ಈಗಾಗಲೇ ನಮ್ಮ ದೇಶದಲ್ಲಿ ಗ್ರಾಮಾಂತರಗಳ ಕಡೆ ವಿದ್ಯಾಪ್ರಗತಿ ಎಷ್ಟರಮಟ್ಟಿಗೆ ನಡೆದಿದೆ, ಇದರಿಂದ ಎಷ್ಟು ಜನರಿಗೆ ಅನುಕೂಲವಾಗುತ್ತಿದೆ ಯೆಂಬುಧನ್ನು ರೈತರೆಲ್ಲರೂ ಅರಿತಿದ್ದಾರೆ. ಈ ಕಾರಣದಿಂದ ರೈತರು ಯಾರೂ ಈ ತೆರಿಗೆಯನ್ನು ಕೊಡುವುದಕ್ಕೆ ಬೇಜಾರು ಪಟ್ಟುಕೊಳ್ಳುವುದಿಲ್ಲ; ಕೊಡುತ್ತೇವೆಂದು ಅನೇಕರು ಜವಾಬು ಕೊಟ್ಟಿದ್ದಾರೆ.

ಅದೂ ಅಲ್ಲದೆ ಈಗ ಹೆಚ್ಚಿರತಕ್ಕ ತೆರಿಗೆಯಾದರೂ ಎಷ್ಟು ಎಂಬುದನ್ನು ನೋಡುವುದಾದರೆ—ಒಬ್ಬ ರೈತ 5 ರೂಪಾಯಿ ಕಂದಾಯ ಇದುವರೆಗೆ ಕೊಡುತ್ತಿದ್ದಾನೆಂದರೆ, ಈಗ ರೂಪಾಯಿಗೆ 9 ಕಾಸಿನಂತೆ 3 ಆಣೆ, 9 ಕಾಸು ಎಜುಕೇಷನ್ ಸೆಸ್ ಕೂಡುತ್ತಾನೆ, ಈ ಕಾನೂನು ಪ್ರಕಾರ ರೂಪಾಯಿಗೆ ಇನ್ನು 9 ಕಾಸು ಕೊಡಬೇಕಾಗುತ್ತದೆ ಅಷ್ಟೆ. ಅಲ್ಲಿಗೆ 3ಆಣೆ 9 ಕಾಸಿನ ಬದಲು $7\frac{1}{2}$ ಆಣೆ ಕೊಡಬೇಕಾಗುತ್ತದೆ ಅಷ್ಟೆ. ಇದನ್ನು ತಾವು ಎಷ್ಟೇ ಅದ್ಭುತವಾಗಿ ತಿಳಿಸಿದರೂ ಕೂಡ ಒಂದುಮಾತು ಭರವಸೆ ರೂಪವಾಗಿ ಕೊಡಬಲ್ಲೆ. ನಮ್ಮ ಮೈಸೂರು ದೇಶದ ರೈತರು ಅಷ್ಟೇನೂ ದಡ್ಡ

ರಲ್ಲ. ಅವರಿಗೆ ಗೊತ್ತಿದೆ, ತೆರಿಗೆ ಹೆಚ್ಚಿಗೇ ಕೊಟ್ಟರೂ ಅವರಿಗೇ ಅನುಕೂಲವಾಗುತ ದೆ ಎಂದು. ಅವರ ಸೌಕರ್ಯಕ್ಕಾಗಿಯೇ ಈ ತೆರಿಗೆಗಳೆಲ್ಲಾ ಎಂಬ ಅರಿವು ಅವರಿಗಿದೆ. 3 ಆಣೆ 6ಕಾಸನ್ನು ವರ್ಷಕ್ಕೊಂದು ಸಾರಿ ಕೊಡುವುದಕ್ಕೆ ಅವರು ಹಿಂತೆಗೆಯುವುದಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ನಮ್ಮ ಮಾನ್ಯ ಸ್ನೇಹಿತರು ರೈತ ಪ್ರತಿನಿಧಿಗಳು ಈ ಸಭೆಯಲ್ಲಿ ಇನ್ನು ಯಾರೂ ಇಲ್ಲವೇ ಇಲ್ಲ, ತಾವೇ ರೈತ ಪ್ರತಿನಿಧಿಗಳು, ರೈತರುಗಳು ಕೊಡುವುದಿಲ್ಲ ಎಂದು ವಾದಮಾಡಿ ಬಹಳ ಕಟುವಾಗಿಯೇ ಟೀಕೆಮಾಡಿದರು. ಇದನ್ನು ಕೇಳಿದರೆ ನನಗೊಂದು quotation ಜ್ಞಾಪಕಕ್ಕೆ ಬರುತ್ತದೆ. ವಾಲ್ಟೇರ್ ಎಂಬ ಫ್ರೆಂಚ್ ಮಹಾ ಕವಿಯೊಬ್ಬ ತನ್ನ ಕೊನೆಯದಿನಗಳಲ್ಲಿ ಪಟ್ಟಣದಲ್ಲಿದ್ದು ಬೇಜಾರಾಗಿ ಪಟ್ಟಣಕ್ಕೆ ದೂರ ಎಲ್ಲಾದರೂ ಹೋಗಿ ವಾಸಮಾಡಿಕೊಂಡಿರೋಣವೆಂದು ದೂರದಲ್ಲಿ ಒಂದು ಕಡೆ ವಾಸಮಾಡುತ್ತಿದ್ದ. ಅಲ್ಲಿಗೂ ಕೂಡ ಅವನ ಸ್ನೇಹಿತರು ಪ್ರತಿನಿತ್ಯವೂ ಹೋಗಿ ಪೀಡಿಸುತ್ತಿದ್ದರಂತೆ. ಇದನ್ನು ನೋಡಿ ಒಂದು ಸಾರಿ ಅವನು ದೇವರಲ್ಲಿ ಈ ರೀತಿ ಮೊರೆಯಿಟ್ಟನಂತೆ :

"Oh God! Save me from my friends. And I will take care of my enemies"

ಹಾಗೆಯೇ, ಈಗ ತಾವು ರೈತರಿಗಾಗಿ. ಬಹಳವಾಗಿ ಹೋರಾಡುತ್ತಿದ್ದೇವೆಂದು ಹೇಳುತ್ತಿದ್ದು ಅವರ ಸೋಗಿನಲ್ಲಿ ತಾವೂ ತಪ್ಪಿಸಿಕೊಂಡು ಹೋಗುತ್ತಿದ್ದೀರಿ. ಆದ್ದರಿಂದ ಈಗ ರೈತರು ಹೇಳುತ್ತಿರುವುದೇನೆಂದರೆ :

"Oh God! Save us from friends -like you-we the raiyats will take care of ourselves".

ಆದ್ದರಿಂದ ರೈತರು ಹೇಳುವ ಈ ಮೊರೆಯನ್ನು ತಮ್ಮ ಮುಂದಿಡುವುದಕ್ಕಿಂತ ನಾನು ಹೆಚ್ಚಿಗೆ ಹೇಳಬೇಕಾದ್ದಿಲ್ಲವೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಅಧ್ಯಕ್ಷರೇ, ನಾನು ಇದರ ಮೇಲೆ ಮಾತನಾಡಬೇಕೆಂದೇ ಇರಲಿಲ್ಲ. ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರೂ ಮತ್ತು ಇತರೆ ಕೆಲವರೂ ಮಾತನಾಡಿದ ಮೇಲೆ ನಾನು ಒಂದೆರಡು ಮಾತುಗಳನ್ನಾಡಬೇಕೆಂದೆನಿಸಿತು.

ಈಗ ವಿದ್ಯಾಭ್ಯಾಸದ ತೆರಿಗೆ, ರೋಡ್ ಟ್ಯಾಕ್ಸು ಮತ್ತು ಸ್ಪಿರಿಟ್‌ಟ್ಯಾಕ್ಸು ಇವುಗಳ ದರಗಳನ್ನು ಜಾಸ್ತಿ ಮಾಡಿದ್ದಾರೆ ಎನ್ನುವುದಕ್ಕೆ ಸಕಾರಣಗಳನ್ನು ಇಲ್ಲಿಯೇ ಕೊಟ್ಟಿದ್ದಾರೆ. ಅಲ್ಲದೆ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಮಾಡಿದ್ದ ಸ್ವಾರಸ್ಯವಾದ ಆ ಭಾಷಣದಿಂದ ಇದರ ಅವಶ್ಯಕತೆ ಬಹಳ ಚೆನ್ನಾಗಿ ಅರ್ಥವಾಗುತ್ತದೆ. ಆದ್ದರಿಂದ ವಿಷಯಗಳನ್ನು ಪೂರ್ತಿಯಾಗಿ ತಿಳಿಯದೆ ಶ್ರೀಮಾನ್ ಗೋಪಾಲಗೌಡರು ಈ ವಿಷಯವನ್ನು ವಿರೋಧಿಸಿದರೆಂದು ನನಗೆ ತೋರುತ್ತದೆ. ಅಥವಾ ಗೊತ್ತಿದ್ದರೂ ಅವರು ಮತ್ತು ಅವರ ಪಕ್ಷದವರು ಕಾಂಗ್ರೆಸ್ ರಾಜ್ಯದಲ್ಲಿ ಏನೇ ಮಾಡಿದರೂ, ಒಳ್ಳೆಯದನ್ನು ಮಾಡಿರಲಿ, ಅಥವಾ ಮಾಡುವುದಕ್ಕೆ ಹೋಗಲಿ ಅದು ಒಳ್ಳೆಯದಲ್ಲ, ಅದು ತಪ್ಪು ಎಂದು ಹೇಳುವ ಸ್ವಭಾವ ಇಟ್ಟುಕೊಂಡು ಹೀಗೆ ಹೇಳಿದರಲ್ಲ ಎಂದು ನಾವು ವಿಷಾದ ಪಡಬೇಕಾಗಿದೆ.

ಎರಡನೆಯದಾಗಿ, ಶ್ರೀಮಾನ್ ಗೋಪಾಲಗೌಡರು ಭಾಷಣ ಮಾಡುತ್ತಾ 'ಇಲ್ಲಿ ಸಭೆಯ ಮುಂದೆ ಭಾಷಣ ಮಾಡುವುದಿಲ್ಲ; ಭಾಷಣಗಳೇನು ಸಾಂಪ್ರದಾಯಿಕವಾಗಿ ನಡೆಯುತ್ತಿರುತ್ತವೆ; ಕಾರ್ಯಗತವೇನಾದರೂ ಮಾಡುತ್ತಾರೆಯೇ, ನಮ್ಮ ಚಿತ್ರದುರ್ಗದಲ್ಲಿ ನೋಡಿದ್ದರೆ ನಿಜವಾದ ಪರಿಸ್ಥಿತಿ ಗೊತ್ತಾಗುತ್ತಿತ್ತು; ನಾವಾಗಿದ್ದರೆ ಜೋಳಿಗೆ ಹಾಕಿಕೊಂಡು ಹೋಗಿ ಜನರಿಗೆ ಆಹಾರ ತಂದುಕೊಡುತ್ತಿದ್ದೆವು' ಎಂದು ಹೇಳಿದರು. ಅವರು ಹೇಳಿದ ಮಾತಿಗೆ ನಾನೂ ಒಂದು ಸವಾಲು ಹಾಕುತ್ತೇನೆ. ಅವರೂ ದೇಶ ಸೇವಕರು, ನಾವೂ ದೇಶ ಸೇವಕರು, ಇಬ್ಬರೂ ಜೋಳಿಗೆ ಹಾಕಿಕೊಂಡು ನಡೆಯೋಣ. ಕಾರ್ಯತಃ ಕೆಲಸಮಾಡಿ ತೋರಿಸುವುದನ್ನು ಬಿಟ್ಟು ಇಲ್ಲಿಕುಳಿತುಕೊಂಡು ಸವಾಲು ಹಾಕುವುದರಿಂದೇನು ಪ್ರಯೋಜನ? ಅಥವಾ ನಾವು ಮಾಡಿದ್ದು ಪ್ರಯೋಜನವಾಗಿಲ್ಲವೆಂದು ಹೇಳಿದ್ದಾರೆಯೇ? ಹಾಗಿದ್ದರೆ ಈರೀತಿ ಮಾಡಿ ಎಂದಾದರೂ ಹೇಳಬೇಕು. ಅದೂ ಹೇಳುವುದಿಲ್ಲ. ಒಟ್ಟಿನಲ್ಲಿ ಶ್ರೀಮಾನ್ ಗೋಪಾಲಗೌಡರಿಗೆ ಇಷ್ಟು ಹೇಳಬಲ್ಲೆ : ಜನಗಳ ಸೇವೆ ಮಾಡಬೇಕು ಎಂದು ಶ್ರೀಮಾನ್ ಗೋಪಾಲಗೌಡರಿಗೆ ಎಷ್ಟು ಆಸಕ್ತಿಯಿದೆಯೋ ಅದಕ್ಕೆ ಎರಡರಷ್ಟು ಆಸಕ್ತಿ ನಮ್ಮ ಮೆಜಾರಿಟಿ ಪಾರ್ಟಿಯಾದ ಕಾಂಗ್ರೆಸ್ ಸರ್ಕಾರದವರಿಗೆ ಇದೆಯೆಂದು ಹೇಳಬಲ್ಲೆ.

ಈಗ ಸರ್ಕಾರದವರು ವಿದ್ಯಾಭ್ಯಾಸ ಪದ್ಧತಿಯನ್ನು ಮಾರ್ಪಾಡು ಮಾಡಬೇಕೆಂದಿದ್ದಾರೆ. ಯಾವ ಹೊಸ ಏರ್ಪಾಡು ಮಾಡಬೇಕೆಂದರೂ ಹಣಬೇಕು. ಜನರಿಗೆ ಸುಧಾರಣೆಗಳು ಬೇಕೆಂದಮೇಲೆ ಅದಕ್ಕೆ ತಕ್ಕಂತೆ ಹಣ ಕೊಡಲಿಕ್ಕೂ ಸಿದ್ಧರಾಗಬೇಕು. ಅದಿಲ್ಲದೆ, 'ಹಾವೂ ಸಾಯಬೇಕು, ಕೋಲೂ ಮುರಿಯಬಾರದು' ಎಂದು ಹೇಳುವ ಗೋಪಾಲಗೌಡರ ಮಾತಿನ ಅರ್ಥವೇನೋ ನನಗೆ ತಿಳಿಯದು. ಆದ್ದರಿಂದ ಸರ್ಕಾರದವರು ಈಗ ತಂದಿರುವ ಈ ಎರಡು ತೆರಿಗೆಗಳೂ ನ್ಯಾಯವಾದುವು ಎಂದು ಹೇಳಿ, ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

6-30 P.M.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ, ಗುಡಿಬಂಡೆ).—ಸ್ವಾಮಿ, ಎಷ್ಟೇ ನಾವು ನ್ಯಾಯವಾದ ಟೀಕೆಗಳನ್ನು ಮಾಡಿದರೂ ನಮ್ಮ ಮಾತು ನಡೆಯುವುದಿಲ್ಲವೆಂದು ನಮಗೆ ಗೊತ್ತಿದೆ. ಇಂಥಾ 'ಬ್ರೂಟ್ ಮೆಜಾರಿಟಿ' ಇರುವ ಒಂದು ಪಕ್ಷದಲ್ಲಿ ಏನು ತೀರ್ಮಾನ ಮಾಡಿಕೊಂಡು ಬಂದರೆ, ಅದೇ ಜಾರಿಗೆ ಬರುತ್ತದೆಂಬುದೂ ಗೊತ್ತಿದೆ. ಆದರೂ ಅವರು ಮಾಡಿರುವ ಅವಿವೇಕಗಳನ್ನು ದೇಶಕ್ಕೆ ಬಿಚ್ಚಿ ತೋರಿಸುವುದಕ್ಕಾಗಿ ನಾವು ಟೀಕೆ ಮಾಡುವುದು ನಮ್ಮ ಧರ್ಮ. ಆದರೆ ಅವರು ಜಬರ್‌ದಸ್ತಿನಿಂದ ನಮ್ಮ ಹಕ್ಕನ್ನು ಮೊಟಕು ಮಾಡಲು ಪ್ರಯತ್ನಿಸಿದರೆ ನಮಗೆ ಮನಸ್ಸಿಗೆ ನೋವಾಗುತ್ತದೆ. ಎಲ್ಲಿ ಬೇರೆ ಕಡೆ ಮಾತನಾಡಿದರೆ ನಮಗೆ ಗ್ರಹಚಾರ ಬರುತ್ತದೋ ಎಂದು, ತಮ್ಮೆದುರಿಗೇ ಟೀಕೆಮಾಡೋಣ, ಸ್ವಾತಂತ್ರ್ಯವಿದೆ ಎಂದರೆ ಇಲ್ಲಿಯೂ ಜಬರ್‌ದಸ್ತು ಮಾಡಿದರೆ, ನಾವು ಇನ್ನೆಲ್ಲಿ ಹೋಗಬೇಕು?

ಅವರು ಒಂದು ವಿಷಯ ತಿಳಿದುಕೊಳ್ಳಬೇಕು. ತೆರಿಗೆಯ ಹೊರೆಯನ್ನು ಜನರ ಮೇಲೆ ಹೇರಿಸುವುದಕ್ಕೆ ಷುರು ಮಾಡುವಾಗ ಜನರಿಗೆ ಎಲ್ಲಿಯವರೆಗೆ ಇದನ್ನು ಭರಿಸುವ ಶಕ್ತಿಯಿದೆ ಎಂಬುದನ್ನು ಯೋಚಿಸಬೇಕು. It is always the last straw that breaks the Camels back. ಇದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಜನರು ರೋಸಿ ಹೋಗಿ ಉದ್ರೇಕಗೊಂಡರೆ ನಮ್ಮ ಮಿನಿಸ್ಟ್ರಿಗೆ ಬರ್ಮಾದಲ್ಲಿ ಆಂಗ್

(ಶ್ರೀ ಬಿ. ವಿ. ನಾರಾಯಣರೆಡ್ಡಿ)

ಸಾನ್ ಸರ್ಕಾರಕ್ಕೆ ಏನು ಮಾಡಿದರೋ ಅದೇ ರೀತಿ ನಮ್ಮ ರೈತರು ಇಲ್ಲಿ ಮಾಡುತ್ತಾರೋ ಏನೊ. ಇದನ್ನು ಅವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

Sri Kadidal Manjappa.—I object to that.

Mr. SPEAKER.—The Member is not speaking on the merits of the Bill. I will have to ask the Hon'ble Member to resume his seat, if he goes on like that.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಆದುದರಿಂದ ಯಾವ ತೆರಿಗೆ ಹಾಕಲಿ ಅದು ಬಡ ರೈತರ ಮೇಲೆ, ಭೂಮಿಯ ಮೇಲೆ ಬೀಳುತ್ತದೆಂಬುದನ್ನು ಅವರು ತಿಳಿಯಬೇಕು. ಹೆಲ್ತ್ ಸೆಸ್, ವಿದ್ಯಾಭ್ಯಾಸದ ಸೆಸ್ ಎಲ್ಲವೂ ಸ್ವಲ್ಪ ಸ್ವಲ್ಪವಾಗಿ ರೈತನ ಮೇಲೆ ಬೀಳುತ್ತದೆ. ರೈತ ಭೂಮಿಯಿಂದ ಉತ್ಪತ್ತಿ ಮಾಡಿಕೊಡಬೇಕಾಗುತ್ತದೆ. ಮಳೆ ಸರಿಯಾಗಿ ಬರುವ ಹಾಗಿದ್ದರೆ ಕೊಡಬಹುದು, ಇಲ್ಲದಿದ್ದರೆ ಕಷ್ಟವಾಗುತ್ತದೆ. ಸಾಲವಾದರೂ ಮಾಡಿಕೊಡೋಣವೆಂದರೆ, ಅವನಿಗೆ ಬ್ಯಾಂಕರುಗಳಿಲ್ಲ. ಪ್ರತಿಯೊಂದಕ್ಕೂ ತಾಪತ್ರಯಪಡಬೇಕು. ಹೀಗಿರುವಾಗ ಈಗಿರುವ ಹೊರೆಗಳ ಜೊತೆಗೆ ಇದನ್ನು ಹೇರಿದರೆ ಬಡಜನರಿಗೆ ಹೊರಲು ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ನೋಡಬೇಕು. ಒಬ್ಬ ಸದಸ್ಯರು ಹೇಳಿದಂತೆ 365 ದಿನವೂ ರೈತನ ಜೀವನ ಮಳೆಯೊಡನೆ ಜೂಜಾಡುವುದು. ಮಳೆಬಂದರೆ ಬೆಳೆ, ಇಲ್ಲದಿದ್ದರೆ ಏನೂ ಇಲ್ಲ. ಈ ರೀತಿ ಇದ್ದರೂ ಇನ್ನೂ ಹೆಚ್ಚು ಹೆಚ್ಚು ತೆರಿಗೆ ತೋರಿಸುತ್ತಾ ಹೋಗುವುದು ನ್ಯಾಯವಲ್ಲ. ಈ ತೆರಿಗೆಯನ್ನು ಖಂಡಿತ ಹಾಕಬಾರದೆಂದು ಅರಿಕೆಮಾಡಿಕೊಳ್ಳುತ್ತೇನೆ.

*Sri J. MOHAMED IMAM (Jagalur).—Mr. Speaker, I feel it my duty to oppose these two taxation measures. Sir, since this morning we have been having a rather heated debate over the levy of these fresh taxes and cesses. We have adduced our reasons very closely and lucidly in a very clear manner. Sir, the Legislature is the sovereign body to which the fates of nine million people have been entrusted. It is expected of us to look after them and see that their condition is improved and also to see that they are not harassed. Thus a heavy responsibility lies not only on every individual member of this House, not only on the Government, but also on the Opposition. It is admitted that the Opposition plays an important part. Its duty is to bring out such defects and such omissions as cannot be brought out by their own adherents and their own followers. It is true our voice may not prevail, but we perform one duty to the State and to the nation. That is, Sir, we state through you and we announce to the people through you the omissions and commissions of the Government. Thus we play an important part. Secondly, I may state that the Opposition here is guided by a sincere and genuine motive to help the Government. We state frankly whatever we feel to be necessary to be placed before the Government. That should not be misconstrued. You can see from this morning that the reasons we have adduced and the facts we have placed before the Government are incontrovertible and they have not been challenged. Myself and my friend Sri Pattabhiraman and others have placed certain facts before the Government as to why these taxation measures should not be introduced. But the Treasury Bench, especially the Chief Minister, instead of refuting those facts, or instead of challenging those facts, or instead of convincing us regarding those facts, I am sorry for the Chief Minister that he has rather taken an uncompromising attitude—he has thought it fit to throw some allegations against the Opposition. I remember, Sir, what he said. He said that the opposition is making ಅ ರೋ ಪ ಣೆ. I think it is very highly unparliamentary. We are not at all making allegations. It is far from our desire to make allegations and when he says that we are lapsing into illiteracy, he seems to take protection under some undersirable remarks rather than meet our points. Anyhow, I will not question his undemocratic exhibition of temper in an undemocratic expression of remarks; nor am I affected, because he lives in a wet area. In fact I come from a dry area. Therefore, I am always sober and sincere in my desire. Only if I had known he was going to make such remarks, I would have taken care as Chairman of the Prohibition Committee to introduce prohibition in Bangalore also.

Apart from that, I submit to him that whatever remarks we make and whatever we do, we do in all sincerity and with a desire to help the country and to see that the people who trust us are not let down and are not betrayed.

Sir, Sri Anantaraman and my friend Sri Devaraj Urs are one year old as legislators. I am ten years old. Well, I may state for their information that the same kind of argument was advanced by their predecessors when the Petrol Bill was moved in the year 1939. When the Motor Vehicle Taxation Bill was moved before the House in the year 1951, the same argument was advanced. Well, you say that these taxation measures are meant for providing more money for nation-building departments. Well, Sir, similar taxation was introduced two years back. Since then, has there been any appreciable improvement regarding the provision of amenities? Has it in any way stopped further taxation? The very fact that fresh recourse has been made to taxation, reveals the lamentable and critical situation of the State. We made it clear that we are not against taxation if it is really going to help the country. What we made clear was this. All taxation measures must be taken as a comperhensive measure. We should not grope in the dark. Let us find out ways and means of other resources. Let us exert in some other direction instead of at once having recourse to direct taxation.

I must submit that you need not doubt the sincerity of the Opposition. If you doubt it, it is your own mistake. I said in the course of my budget speech: 'do not consider us as enemies'. Do not consider us as enemies to be conquered. We are your sincere friends.

Sri K. HANUMANTHAIYA (Leader of the House).—One word of explanation Sir. I never doubted his sincerity. On the other hand I have said, we must cultivate friendship in the interests of the country. What I object to is—every time we are stated to be behaving undemocratically, that we are ruining the country, that we are becoming unparliamentary and that we are undemocratic. These are the remarks which are rather unhappy. I never doubted their sincerity. Nor am I less anxious for their friendship. The exuberant and extreme language that is used is the unfortunate thing.

Sri J. MOHAMED IMAM.—Sir, this measure is undemocratic. I remember the time when my friends came into office—before they came into office and at the time of the elections, our friends made lavish promises.

Sri K. HANUMANTHAIYA.—Here again, I would like to say one word. As President of the Congress, I have made several speeches during the course of the election campaign for nearly three months. Let him point out what promise I made and what promise I have not kept up. One item would be enough.

Sri J. MOHAMED IMAM.—I am not referring to my particular friend. I am referring to the organisation. Not only in the previous elections but previous to that. Before we were given Responsible Government, you were saying—'let Responsible Government be given to us, let us be in charge of the administration, then we will see milk and honey poured on you, you will see that taxation is reduced.' These are the various promises made to the people. Can you forget it? Can you challenge it?

Sri G. A. THIMMAPPA GOWDA (Arkalgud).—There are the amenities.

Sri J. MOHAMED IMAM.—Have you fulfilled your promises?

Sri K. HANUMANTHAIYA.—We are in the process of fulfilling them.

Sri J. MOHAMED IMAM.—You have broken your promises. You are going against the pledges you have given them. You have not fulfilled your obligations. I think the contrary is the effect. Instead of

(SRI J. MOHAMED IMAM.)

relieving the burden of taxation, you are enhancing their burden. You are heaping more and more taxes. Well, these taxes are such as not to aid their happiness, but to cover the misdeeds and maladministration of the Government.

Sir, coming to these two taxation measures—regarding the petrol-tax, we had discussion and now they want to levy these two taxes, the education cess and the increased rates on taxes on various kinds of motor vehicles. This morning it was argued that the tax levied on motor spirit does not affect the ordinary man and the raiyat. Now, I ask one question. Does not this levy of education cess affect the common man and the ordinary raiyat? Is it not a universal burden you are asking to be borne by every raiyat? For what purpose? As revealed in the copy of the Bill, it is not to give him more educational facilities and it is not to give him more educational institutions, but it is to wipe off the deficit. That too for the year 1952-53. The result will be this, from tomorrow you will collect all the education cess and where will it be credited? It will not go under the head Elementary Education or Primary Education. It will be credited but it will be absorbed in the deficit and there will be no direct benefit. I may also state, last year you made a provision of Rs. 1,50,000 for starting more primary schools, and I find in the Budget estimate for 1952-53 page 10 of the Budget Estimates (volume II) a provision of Rs. 1,50,000 has been made. I find that not a single pie has been spent. In the revised estimate it is blank. You had specifically set apart Rs. 1,50,000 for opening more primary schools. But look at the revised column; the amount is not available, and it has lapsed into some other source. It has not been spent, but it was provided in the Budget just to show to the people that Government were opening more primary schools which they did not intend to open. The same thing will happen this year also. Simply because you are levying nine pies in the rupee—you may get three or four lakhs—is it going to solve your educational problem? As contemplated in the Elementary Education Act, can you introduce universal primary education throughout the State? What is the material benefit you are going to derive from this? The benefit you confer on the people must be proportionate to the trouble or burden you are throwing on them. You are throwing an extra burden on every man in the State, on every tax-payer in the State. But what is the proportionate benefit? Nothing. You may collect four lakhs of rupees and the result is, it will be absorbed in wiping out the deficit.

Coming to the Motor Vehicles Taxation Bill I must point out one thing. While levying a tax, there is what is called jutice and equity. About a year and a half back all these rates were revised and the taxes were increased. A new tax was levied called the seating tax; road cess was collected; and within 1½ years you have thought fit to increase all these items of taxation. I am asking you one question. In the year 1951 you levied all these additional taxes and cesses and during the period of two years—I am not speaking of this Government; Government is a continuous body—what is it you have done with the increased taxes? Where did they go? Have you improved the condition of the raiyats? On the other hand, the condition of our raiyats is deteriorating. Have you given any fresh amenities in spite of these amounts collected? Now also we are going to enhance the rates and the fate of this extra taxation will be similar. The practice itself is changed. The original practice was that whatever tax was collected from motor vehicles it was put into a separate fund called the Road Fund. Whatever cess was collected on educa-

tion, was put into a separate fund called the Elementary Education Fund. But now the Government thought, perhaps for their own convenience, fit to abolish these funds, and all these collections go to the general funds, not for improving a road or for any special purpose, but only to meet the cost of the general administration. There is no purpose in enhancing taxes. With regard to equity, how does it work on those people, who are asked to pay these taxes? You propose to enhance seating tax from Rs. 7-8-0 to Rs. 20, nearly three times! Do you call this an equitable measure? Is it not your duty to safeguard the bus traffic industry? Bus travelling is no longer a luxury, motor-car is no longer a luxury, they form part of essential services. Even for a villager it is an essential service. It is within the exeperience of every one that travelling in buses or cars has become common and I do not think it is the intention of Government to bring down the living conditions of a man. If you take the example of America or England, they encourage higher standard of living. In America perhaps every labourer goes in a car. In England every ordinary man has a car. But here you say you are taxing a rich man. Your are lowering the standard of living instead of encouraging it. The increased taxation which is by 200 per cent, I can tell you, will hit very hard the owners of cars, buses and lorries. For example, take the vehicle tax. You propose to increase it by nearly 50 per cent. I was paying for my car Rs. 84; now I am expected to pay Rs. 120.

Sri K. HANUMANTHAIYA.—That is the reason why you are opposing.

Sri J. MOHAMED IMAM.—I have told my friends that my car is for sale.

Mr. SPEAKER.—Purchase a fresh one.

Sri H. SIDDAVEERAPPA.—It is a very old car purchased six years ago.

Sri J. MOHAMED IMAM.—If the tax is increased on petrol it will be impossible for an ordinary man to maintain a car. Positively you are discouraging him. It will hit him hard. You must also take into consideration the cost of tyres and other accessories that are needed. This is a very retrograde measure and quite unheard of. I can tell you that most of the buses that are plying on short routes will all disappear in no time. You take the example of Madras. In Madras they do not allow more than seven services on any particular route and that is the maximum and the minimum is 4. Here, the minimum is 12 and the maximum is 32! Somebody pointed out the condition of the roads. The condition of the roads suffers a good deal of wear and tear. I must point out that you have monopolised all important and revenue yielding routes. All the routes where the owners of the buses expected to get a good revenue have been monopolised and you have thrown open to the public such routes from which they cannot expect much income. These three obstacles are not found in Madras but are found in Mysore State. You will have to be more considerate and generous; otherwise I will tell you that in course of time all the buses and cars will disappear and all your expectations will be frustrated.

Sri K. HANUMANTHAIYA.—Let us wait and see.

Sri J. MOHAMED IMAM.—You have waited long enough. I think a number of bus owners must have made representations to Government. I think that under the presidentship of Sri T. Subramanya, previous member of this House and who was also the President of the Constituent Assembly, various resolutions have been passed protesting against the actions of Government. Do not be one-sided. Before taking such action,

(SRI J. MOHAMED IMAM.)

you please call for the representatives of bus owners or their associations or lorry owners and hear their grievances; you hear their difficulties and in consultation and co-operation with them take fiscal measures. Can you not from your own undertakings see whether this is a lucrative measure or not? With all your resources and equipment, you can hardly get more than 3 per cent under the present taxation. You have been plying buses on very important routes where there is heavy traffic. In spite of the monopoly, these routes have been getting a revenue of 3 per cent. Such being the case, what can you expect of private bus owners who have to face competition and who have to run buses on unsatisfactory routes and who have to meet so many other demands? Supposing the seating tax is increased for Government buses, what would be the income? I am sure it will go down considerably. You can expect the same thing in the case of private bus owner or lorry owner. You should not make him exhausted completely. You must also see that he gets a certain percentage for the pains he take. You should have humane consideration. Before you take this step, send for the representatives of the Bus Owners' Association and hear their difficulties. Investigate if they are making a huge profit or not. You can find out from their income-tax payments. If they are ready getting huge profits, then I have no objection to your increasing the taxes. On the other hand, if their living is from hand to mouth, then your increasing the taxes will be a suicidal policy. I have nothing more to say. We have done our best as friends.

Sri K. HANUMANTHAIYA.—Therefore vote with us.

Sri J. MOHAMED IMAM.—We will hear what you say and decide. I must again say that our issue is simple. Please defer your taxation measures till you investigate and explore the entire financial structure. A delay of one or two months will not affect you much nor does it affect your revenue. Let us not be in a haste. Let us have a clear picture of the whole thing and find out to what extent you must tax the people to meet our demands and commitments and after having a clear perspective you can take further action. If you still persist, I will only say "Let God bless you and God will help you".

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ನೆನ್ನೆ ಬೆಳಗಿನಿಂದ ಪ್ರಾರಂಭವಾಗಿರತಕ್ಕ ಈ ಚರ್ಚೆಯು ಈ ಹಿಂದೆ ಅನೇಕ ಸಲ ಚರ್ಚೆಗೆ ಬಂದು ಈ ವಿಷಯ ಚರ್ವಿತಚರ್ವಣವಾಗಿ ಚರ್ಚೆಯಾಗಿದೆ. ಇದರಲ್ಲಿ ಮತ್ತೆ ಹೊಸದಾಗಿ ಹೇಳಬೇಕಾದುದೇನೂ ಇಲ್ಲ. ಕೆಲವು ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಮಾತ್ರ ಹೇಳಬೇಕಾಗಿದೆ. ಈಗ ಮಾತನಾಡಿದ ಎದುರುಪಕ್ಷದ ಮಾನ್ಯ ಸದಸ್ಯರುಗಳು ನೀವೇ ಹಿಂದೆಲ್ಲಾ ಈ ರೀತಿಯ ತೆರಿಗೆಯ ಮಸೂದೆಗಳನ್ನು ಸಭೆಯ ಮುಂದೆ ತಂದಾಗ ಅವುಗಳನ್ನು ವಿರೋಧಿಸಿ ಮಾತನಾಡುತ್ತಿದ್ದವರು, ನೀವೇ ಈ ದಿವಸ ಈ ತೆರಿಗೆಗಳನ್ನು ಏತಕ್ಕೆ ಹಾಕುತ್ತೀರಿ ! ಎಂಬದಾಗಿ ಪ್ರಶ್ನೆಮಾಡಿದ್ದಾರೆ. ಆದರೆ ಆ ದಿವಸ ಇವರು ನಮ್ಮ ಜೊತೆ ಸೇರಲಿಲ್ಲ. ಆಗಿದ್ದ ಪರಕೀಯ ಸರ್ಕಾರ ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ನಮ್ಮ ಜನರನ್ನು ಶೋಷಣೆ ಮಾಡುತ್ತಿತ್ತು. ಆಗ ಇವರಿಗೆ ಆ ಸರ್ಕಾರವನ್ನು resist ಮಾಡಲು ಇವರಿಗೆ ಧೈರ್ಯವಿರಲಿಲ್ಲ.

ಶ್ರೀ ಮಹಮದ್ ಇಮಾಂ.—ಆಗ ನಾನು ನಿಮ್ಮ ಗುಂಪಿಗೆ ಸೇರಿದ್ದರೆ ಈಗ ನಾನೂ ಸಹ ಒಬ್ಬ ಕೆಲಸಕ್ಕೆ ಬಾರದ ಮಿನಿಷ್ಟರು ಆಗುತ್ತಿದ್ದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಆದರೆ ಈಗ ಕಾಲಸ್ಥಿತಿ ಬದಲಾಯಿಸಿದೆ. ಈ ದಿವಸ ತಾವು ಹೇಳರತಕ್ಕ ಮಾತುಗಳು ಆ ದಿವಸ ತಾವು ಕೆಲವು ಮಾತುಗಳನ್ನು ಹೇಳರತಕ್ಕದು ಎರಡು ರೀತಿಯಲ್ಲಿ ಅಭಾಸವಾಗಿರುತ್ತವೆ. ಒಂದು ಅಭಾಸ ತಾವು ಆ ದಿವಸ ನಮ್ಮೊಡನೆ ಸೇರದೆ ಇರತಕ್ಕದ್ದು. ಇನ್ನು ಎರಡನೇ ಅಭಾಸ ಆ ದಿವಸ ನಾವು ಹೇಳುತ್ತಿದ್ದಂಥ ಮಾತುಗಳನ್ನು ತಾವು ಈ ದಿವಸ ಉಪಯೋಗಿಸತಕ್ಕದ್ದು ಹೀಗೆ ಎರಡು ರೀತಿಯಲ್ಲಿ ತಾವು ಹೇಳತಕ್ಕದ್ದು ಅಭಾಸವಾಗಿದೆ. ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಜನರಲ್ಲಿ ಇಷ್ಟೊಂದು ಸಂಕುಚಿತಭಾವನೆ ಬೆಳೆದಿರಲಿಲ್ಲ. ಇಷ್ಟರಲ್ಲೇ ಇಷ್ಟು ವ್ಯತ್ಯಾಸ ಬೆಳೆದಿದೆ. ಆದರೆ ಈ ವಾದವನ್ನು ಇಲ್ಲಿಗೇ ನಾನು ಕೈಬಿಟ್ಟು ಬಿಡುತ್ತೇನೆ. ಈಗ ನಾನು ಹೇಳುವುದೇನೆಂದರೆ ತಾವು ಕೊಡತಕ್ಕ ಸ್ಟೇಟ್‌ಮೆಂಟಿನಲ್ಲಿ Constructive statesmanship. ಇನಿಷಿಯೇಟ್ ಆಗುವ ಹಾಗೆ ಇರಬೇಕು. ನಮ್ಮ ದೇಶದ ಆರ್ಥಿಕ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕ ಹಾಗೆ ನಾವು ನಮ್ಮ ಕಾರ್ಯಕ್ರಮಗಳನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ನಾವು ಖರ್ಚುಮಾಡತಕ್ಕ ದುಡ್ಡು ನಮ್ಮ ದೇಶವನ್ನು ಬಿಟ್ಟು ಹೋಗುತ್ತಿಲ್ಲ ಎಲ್ಲವೂ ಇಲ್ಲೇ ಉಳಿಯುತ್ತದೆ. ಈಗಾಗಲೇ ಅನೇಕ ಕೆಲಸಗಳನ್ನು ಮುಗಿಸಿದ್ದೇವೆ. ಆದ್ದರಿಂದ ಅವರಲ್ಲಿ

ನನ್ನ ವಿನಂತಿಯಿಷ್ಟೆ. ಸ್ವಲ್ಪಮಟ್ಟಿಗೆ Real statesmanshipನಿಂದ ಇದನ್ನು ನೋಡಿ. ಈ ದೃಷ್ಟಿಯಿಂದ ನಾನು ಶ್ರೀ ಮುಲ್ಕ . ಗೋವಿಂದರೆಡ್ಡಿಯವರಿಗೆ ಮೊದಲು ನನ್ನ ವಂದನೆಗಳನ್ನರ್ಪಿಸಬೇಕಾಗಿದೆ. ಏಕೆಂದರೆ, ಅವರು ಈ ವಿದ್ಯಾಭ್ಯಾಸದ ಸೆಸ್ಸಿನ ವಿಷಯದಲ್ಲಿ ಸ್ವಲ್ಪವೂ ವಿರೋಧ ತೋರಿಸದೆ ತಮ್ಮ ಪೂರ್ಣ ಬೆಂಬಲವನ್ನು ಇದಕ್ಕೆ ನೀಡಿದ್ದಾರೆ. ಅದಕ್ಕಾಗಿ ನನ್ನ ವಂದನೆಗಳನ್ನರ್ಪಿಸುತ್ತೇನೆ.

7 P.M.

ಈಗ ನಾವು ಹೇಳುತ್ತಿರುವುದೆಲ್ಲಾ ಬಾಯಿಮಾತು ಎಂದು ಮಾನ್ಯ ಸದಸ್ಯರು ಹೇಳಿದರು. ಬಾಯಿಮಾತಲ್ಲ. ತಮ್ಮ ಮುಂದೆ ಬಡ್ಜೆಟ್ ಇಟ್ಟಿತ್ತಲ್ಲವೇ ? The Budget represents the deeds of the ministry for the year ಇರುವ ವಿಷಯಗಳೆಲ್ಲವನ್ನೂ ಯಾವುದನ್ನೂ ಮುಚ್ಚುಮರೆಯಿಲ್ಲದೆ ಅಂಕಿಅಂಶಗಳನ್ನು ತೋರಿಸುವುದಕ್ಕೆ ಅಕೌಂಟ್ಸ್ ಇಲ್ಲಿದೆ. ತಾವೇ ಎಲ್ಲವನ್ನೂ ನೋಡಿದ್ದೀರಿ. ಆದರೆ ಸಕಾಲದಲ್ಲಿ ಮಾತ್ರ ಮರೆತುಬಿಟ್ಟು ಮಾತನಾಡುತ್ತೀರಿ ಅಷ್ಟೆ. ದಯವಿಟ್ಟು ಆ ರೀತಿ ಮರೆಯಬೇಡಿ ಎಂದೇ ನನ್ನ ಪ್ರಾರ್ಥನೆ. ಈ ನಾಲ್ಕು ವರ್ಷಗಳಲ್ಲಿ ಹಿಂದೆ 40 ವರ್ಷಗಳಿಂದ ಆಗದ ಕೆಲಸಗಳು ಆಗಿವೆ. ಅವುಗಳನ್ನೆಲ್ಲಾ ನೋಡಿದರೂ ತಾವು ಮತ್ತೆ ಹಿಂದಿನ ಹಾಳೆಯನ್ನೇ ತೆಗೆದರೇನು ಪ್ರಯೋಜನ ?

ಸೇಲ್ಸ್‌ಟ್ಯಾಕ್ಸನ್ನು ಹಾಕಿದ್ದೀರಿ. ಇದರಿಂದ ರೈತರಿಗೆಲ್ಲಾ ತೊಂದರೆಯಾಗಿದೆ, ರೈತರು ಪ್ರತಿಭಟಿಸುತ್ತಿದ್ದಾರೆಂದು ಹೇಳಿದಿರಿ. ಜನತೆಯೆಲ್ಲಾ ಇದನ್ನು ಪ್ರತಿಭಟಿಸಿದ್ದಾರೆಂದರೆ ನಾನು ಒಪ್ಪುವುದಿಲ್ಲ. ಅದಕ್ಕೆ ಬದಲು ದೇಶ ಕೂಡ ಇದನ್ನು ಒಪ್ಪಿದೆಯೆಂದು ಹೇಳಬಲ್ಲೆ. ಚುನಾವಣೆಗಳಲ್ಲಿ ಸಹ ಅದೇ ರೀತಿ ಭಾಷಣಗಳನ್ನು ಮಾಡಿ ಜನರನ್ನು ಒಪ್ಪಿಸಿಕೊಂಡು ಬಂದಿದ್ದೇವೆ. ಅಷ್ಟೇಕೆ, ನಾವು ಯಾವ ಮಾತನ್ನು ಹೇಳಲಿ. ಜನತೆ ನಮ್ಮಲ್ಲಿ ನಂಬಿಕೆಯಿಟ್ಟಿದೆ. ಈಗಲೂ ನಡೆದ ಉಪಚುನಾವಣೆಗಳ ಫಲಿತಾಂಶವನ್ನು ನೋಡಿ. ಉಪಚುನಾವಣೆಯ ಫಲಿತಾಂಶ ಜನತೆಗೆ ನಮ್ಮ ಪಕ್ಷದಲ್ಲಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ಅದೇ ನಿಮ್ಮನ್ನು ನಂಬುವುದಿಲ್ಲವೆಂಬುದನ್ನು ತೋರಿಸಿಕೊಡುತ್ತದೆ.

ಮತ್ತೊಂದು ವಾದ ಹೇಳಿದ್ದಾರೆ. ಈ ಸರ್ಕಾರ ಫ್ಯಾಸಿಸ್ಟ್ ಸರ್ಕಾರವಾಗಿ ಪರಿಣಮಿಸುತ್ತಿದೆಯೆಂದು ಹೇಳಿದರು. ಫ್ಯಾಸಿಸ್ಟ್ ಸರ್ಕಾರಗಳು ಬಂಡವಾಳಶಾಹಿ ತತ್ವವನ್ನು ನಡೆಸಿಕೊಂಡು ರಾಜ್ಯಭಾರ ನಡೆಸುತ್ತಿದ್ದವು. ಆದರೆ ನಮ್ಮಲ್ಲಿ ಇವೊತ್ತು Capitalists ಯಾರೂ ಇಲ್ಲ. ಅದಕ್ಕೆ ಬದಲು ನಮಗೂ ಅವರಿಗೂ (ರೈತರಿಗೂ) ಮಧ್ಯೆ ಬೇರೆ Capitalists ಇದ್ದಾರೆ. ಈಗ ಅವರೂ ರೈತರ ರಕ್ಷಣೆಗಾಗಿ ಇದ್ದಾರೆಂದ ಮೇಲೆ ನಮಗೇನೂ ಭಯವಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ನಮಗೂ ನಿಮ್ಮಲ್ಲಿ ಸೌಹಾರ್ದವಿದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಇರಬಹುದು. ನಿಮ್ಮ ಜೊತೆಗೆ ಸಹಕರಿಸುತ್ತೇವೆ: ತೆರಿಗೆಗೆ ವಿರೋಧವಾಗಿಲ್ಲವೆಂದು ಹೇಳುತ್ತೀರಿ. ಆದರೆ ಮಾತಿನಲ್ಲಿ ಹೇಳುವುದನ್ನು ನಾವು ಒಪ್ಪಿಕೊಳ್ಳಬೇಕೇ ಅಥವಾ ಕಾರ್ಯತಃ ಮಾಡುವುದನ್ನು ನೋಡಬೇಕೆ ? ಕೇಂದ್ರ ಸರ್ಕಾರದವರು ಯಾವ ರೀತಿ ಮಾಡುತ್ತಾರೋ ಅದನ್ನು ನೋಡಿಕೊಂಡು ಮಾಡುತ್ತೇವೆಂದರೆ, ಈ ಕೂಡಲೆ ಮಾಡಬೇಕೆಂದು ಹೇಳುತ್ತಾರೆ. ಹಾಗ್ಗೂ ಆಗಲಿ, ಈಗಲೇ ಮಾಡುತ್ತೇವೆಂದರೆ ಇದರಲ್ಲೇನೋ ಕುಹಕವಿದೆ, ಸ್ಪಷ್ಟವಾಗಿ ಕೇಳಿದರೆ ಹೇಳುತ್ತಿಲ್ಲ ಎನ್ನುತ್ತಾರೆ. ಇವೊತ್ತು ಕೂಡ ಸೆಲೆಕ್ಟ್ ಕಮಿಟಿಗೆ ಬನ್ನಿ, ತೆರಿಗೆಯ ದರದಲ್ಲಿ ಹೆಚ್ಚು ಕಡಮೆ ಮಾಡುವುದಾಗಿದ್ದರೆ ಮಾಡೋಣವೆಂದು ತಮ್ಮನ್ನು ಆಹ್ವಾನಿಸಿದೆವು, ತಾವು ನಿರಾಕರಿಸಿದಿರಿ. ಇಂಥ ಒಂದು ಸಣ್ಣ ಕಮಿಟಿಯಲ್ಲೇ ಸಹಕಾರವಿಲ್ಲದಿದ್ದರೆ, ಇನ್ನೇನಾದರೂ ದೊಡ್ಡ ಕಮಿಟಿ ಮಾಡಿ ನಿಮ್ಮ ಕೈಗೆ ಕೊಟ್ಟರೆ ಏನು ಮಾಡೀರಿ ?

ಶ್ರೀ ಜೆ. ಮಹಮದ್ ಇಮಾಂ.—ಸೆಲೆಕ್ಟ್ ಕಮಿಟಿಗೆ ನಾವೇಕೆ ಬರಲಿಲ್ಲವೆಂದರೆ, ನಾವು ಈ ಬಿಲ್ಲಿನ ತತ್ವಕ್ಕೆ ಒಪ್ಪಿಕೊಂಡಿದ್ದರೆ ಸೆಲೆಕ್ಟ್ ಕಮಿಟಿಗೆ ಬರುವುದು ನ್ಯಾಯ. ಸೆಲೆಕ್ಟ್ ಕಮಿಟಿಗೆ ಹೋಗಿ ನಿಮ್ಮ ಟ್ಯಾಕ್ಸೇಷನ್ ನೀತಿಯೇ ಸರಿಯಾಗಿಲ್ಲವೆಂದು ಹೇಳುವುದಾದರೆ ಏನು ಪ್ರಯೋಜನವಾಗುತ್ತದೆ ? There is no purpose in our serving in the Select Committee. The scope is so limited.

ಶ್ರೀ ಎ. ಜಿ. ರಾಮಚಂದ್ರರಾವ್.—ಈ ತೆರಿಗೆಯನ್ನು ತರುವುದರಲ್ಲಿ ಮುಂದಾಗಿ ನಮ್ಮನ್ನು ಕೇಳಲಿಲ್ಲ ಎಂದು ಹೇಳಿದರು. ಮುಂದಾಗಿ ತಿಳಿಸಲಿಲ್ಲವೆಂದರೆ, ನಾವೇನು ಮುಚ್ಚುಮರೆಯಿಂದ ತಂದಿದ್ದೇವೆಯೇ ಏನು ? ರಾಜಪ್ರಮುಖರ ಅಡ್ರೆಸ್ಸಿನಲ್ಲಿಯೇ ಇದನ್ನು ತಿಳಿಸಿದೆ. ಅದರ ಮೇಲೆ ಚರ್ಚೆ ನಡೆದು ಅದೂ ಪಾಸಾಗಿದೆ. ಈ ಚರ್ಚೆಯಲ್ಲಿ ಅವರು ಮಾತನಾಡಿದ್ದನ್ನೆಲ್ಲಾ ಕೇಳಿ, ಅವರ ಮಾತಿಗೆ ಮನ್ನಣೆಕೊಟ್ಟು ಹೆಲ್ತ್ ಸೆಸ್ಸನ್ನು ಹಾಕಬೇಕೆಂದಿದ್ದುದನ್ನು ಬೇಡವೆಂದು ಬಿಟ್ಟಿದ್ದೇವೆ.

ಶ್ರೀ ಜೆ. ಮಹಮದ್ ಇಮಾಂ.—ನಮ್ಮ ಮಾತಿಗೆ ಮನ್ನಣೆ ಕೊಟ್ಟೇ ? ಅದು ಅನುಮಾನ !

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ಪಷ್ಟವಾಗಿ ಕಾಣುವುದರ ವಿಷಯದಲ್ಲಿ ಹೀಗೆ ಅನುಮಾನ ಪಟ್ಟರೆ ಏನು ಹೇಳುವುದು ? ಆ ಅನುಮಾನ ಪರಿಚ್ಛೇದ ದೇವರಿಂದಲೂ ಆಗುವುದಿಲ್ಲ.

ಶ್ರೀ ಜೆ. ಮಹಮದ್ ಇಮಾಂ.—ಹಾಗಿದ್ದರೆ. Withdraw this bill also.

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಗೆ Statesmanship ಏನಿದೆ ಯೆಂಬುದು ಗೊತ್ತಾಗುತ್ತದೆ. ಇಲ್ಲೇ ತಮ್ಮ ಮುಂದೆ ಬಡ್ಜೆಟ್ಟಿನಲ್ಲಿ ಎಲ್ಲ ಅಂಶಗಳನ್ನೂ ಕಾಣಿಸಿದ್ದೇವೆ. 1943–44ರಿಂದ 1953-54ನೆಯ ಇಸವಿವರೆಗೂ ಸ್ಪಷ್ಟವಾಗಿ ತಮ್ಮ ಮುಂದಿಟ್ಟಿದ್ದೇವೆ. 103 ಲಕ್ಷ ರೂಪಾಯಿಗಳನ್ನು ವಿದ್ಯಾಭ್ಯಾಸ ಇಲಾಖೆಗೆ ಖರ್ಚುಮಾಡುತ್ತಿದ್ದುದು ಇಂದು 370 ಲಕ್ಷ ರೂಪಾಯಿಗಳಿಗೆ ಏರಿದೆ. ಐದಾರು ವರ್ಷಗಳಲ್ಲಿ ಈ ಇಲಾಖೆಮಾಡುತ್ತಿದ್ದ ಖರ್ಚು ಇಷ್ಟು ಮಟ್ಟಿಗೆ ಏರಿರುವಾಗ, ಕಂದಾಯವನ್ನೇನ್ನಾದರೂ ಅದೇ ರೀತಿ ಜಾಸ್ತಿಮಾಡಿದ್ದೇವೆಯೇ ನೋಡಿ. ಇದೇ ಪ್ರಕಾರ ಪ್ರತಿಯೊಂದು welfare ಬಾಬಿಗೂ ಖರ್ಚು ಜಾಸ್ತಿಮಾಡಿದ್ದೇವೆ. ಸಿಬ್ಬಂದಿ ಖರ್ಚು ಬಹಳ ಜಾಸ್ತಿಯಾಗಿದೆಯೆಂದು ಹೇಳಿದ್ದಾರೆ. ಅದೂ ಸರಿಯಲ್ಲ. The service cost here is the lowest in the whole of India; it is the cheepest and it is the best ; it is the videst and it is the most intense. ಹೀಗಿರುವಾಗ, ಈಗ ಪರಿಸ್ಥಿತಿ ಏನಿದೆಯೆಂಬುದನ್ನು ತಾವೇ ನೋಡಿ. ತಾವೇ ಎಷ್ಟೋ ಸಲ ಬಂದು ನಮ್ಮ ಊರಿಗೆ ಸ್ಕೂಲುಬೇಕು, ರಸ್ತೆ ಬೇಕು ಎಂದು ಕೇಳುತ್ತಿದ್ದೀರಿ. ಕಟ್ಟಡವಿಲ್ಲದೆ ಸ್ಕೂಲು ಕೊಡುವುದಕ್ಕಾಗುವುದಿಲ್ಲವೆಂದರೆ, 'ಸ್ವಲ್ಪ

(ಶ್ರೀ ಎ. ಜಿ. ರಾಮಚಂದ್ರರಾವ್.)

ತೊಂದರೆಯಾದರೂ ಪರವಾಯಿಲ್ಲ, ಬೇರೆ ದೇವಸ್ಥಾನದಲ್ಲಾದರೂ ನಡೆಸುತ್ತೇವೆ, ಸ್ಕೂಲು ಕೊಡಿ' ಎಂದು ತಾವೇ ಜವಾಬು ಕೊಟ್ಟಿಲ್ಲವೆ ? ಹಾಗಿದ್ದರೂ ನೀವು ನಿಜವಾಗಿಯೂ ಇದನ್ನೆಲ್ಲಾ ಎದೆ ಮುಟ್ಟಿಕೊಂಡು ವಿರೋಧಿಸುತ್ತಿದ್ದೀರಾ ? ಇಷ್ಟೆಲ್ಲಾ welfare activities ಗಳಿಗಾಗಿ ಹೆಚ್ಚು ಹೆಚ್ಚು ಖರ್ಚುಮಾಡಿ, ನಮ್ಮಲ್ಲಿದ್ದ ಸೆಕ್ಯೂರಿಟಿಗಳನ್ನೆಲ್ಲಾ ಮುಗಿಸಿಬಿಟ್ಟು ಈಗ ಅವುಗಳನ್ನು ಮುಂದುವರಿಸುವುದಕ್ಕೆ ಸಹ ಇಲ್ಲ, ಮುಚ್ಚಬೇಕಾಗಿ ಬರುತ್ತದೆ ಎಂದರೆ ನೀವು ತೋರ್ಪಡಿಸಿರುವ Sound Statesmanship ನ್ನು, Constructive ಮನೋಭಾವದ ರೀತಿಯನ್ನು ದೇವರೂ ಮೆಚ್ಚುವುದಿಲ್ಲ, ಇನ್ನು ಮನುಷ್ಯರು ಮೆಚ್ಚುತ್ತಾರೆಯೇ ? ತಾವು electorate ಮುಂದೆ ಹೋಗಿ ಏನು ಬೇಕಾದರೂ ಹೇಳಬಹುದು. ಆದರೆ ಈ ದಿವಸ ರೈತರೂ ಜಾಗ್ರತರಾಗಿದ್ದಾರೆ, ಎಚ್ಚೆತ್ತಿದ್ದಾರೆಂಬುದನ್ನು ತಿಳಿಯಿರಿ. ರೈತರೂ ನೋಡುತ್ತಾರೆ, ಇವರು ಬರೀ ಟೀಕೆ ಮಾಡುತ್ತಿದ್ದಾರೆಯೇ ಅಥವಾ ದೇಶವನ್ನು ಕಟ್ಟುವುದಕ್ಕೆ, ಸುಭದ್ರವಾಗಿ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳುತ್ತಾರೆ.

ಆದ್ದರಿಂದ ತಮ್ಮಲ್ಲಿ ನನ್ನ ವಿನಂತಿಯೇನೆಂದರೆ, ಸಹಕಾರದಿಂದ ಹೋಗೋಣ. ನಮ್ಮ ಕಷ್ಟವನ್ನು ಸ್ಪಷ್ಟಪಡಿಸಿದ್ದೇವೆ. ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಮುಂದುವರಿಸಿದ್ದೇವೆ, ಇರಿಗೇಷನ್ ಪಂಪುಗಳು, ಹೆಲ್ತ್ ಯೂನಿಟ್ಟುಗಳು, ಆಸ್ಪತ್ರೆಗಳು, ಸ್ಕೂಲುಗಳು, ರಸ್ತೆಗಳು-ಇವೆಲ್ಲಾ ಇನ್ನೂ ಹೆಚ್ಚು ಹೆಚ್ಚು ಆಗಬೇಕಾಗಿವೆಯೆಂದು ತಮಗೆ ತಿಳಿಸಿದ್ದೇವೆ. ಹಳ್ಳಿಗಾಡುಗಳು ಯಾವ ರೀತಿಯಾಗಿವೆಯೆಂಬುದನ್ನು ತಿಳಿದು, ಪಟ್ಟಣಗಳ ಅನುಕೂಲ್ಯಗಳನ್ನೆಲ್ಲಾ ಅಲ್ಲಿಗೂ ತಂದು ಹಳ್ಳಿಗಾಡುಗಳಿಗೂ ಪಟ್ಟಣಗಳಿಗೂ ಇರುವ ಅಂತರವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಿಸುತ್ತಿದ್ದೇವೆಂಬುದು ರೈತರಿಗೆ ಗೊತ್ತಿದೆ. ಹಳ್ಳಿಗೂ ಪಟ್ಟಣಕ್ಕೂ ಇರುವ ಅಂತರವನ್ನು ಹೋಗಲಾಡಿಸಿ ಹಳ್ಳಿಯವನೂ ಕೂಡ ಪಟ್ಟಣದ ಎಲ್ಲಾ ಸೌಕರ್ಯಗಳನ್ನೂ ಅನುಭವಿಸುವಂತಾಗಬೇಕೆಂಬುದೇ ನಮ್ಮ ಗುರಿಯಾಗಿದೆ. He must feel that he has all the amenities of the urban life. ಇದಕ್ಕಾಗಿ ನಾವೀಗ ದುಡ್ಡು ಕೇಳುತ್ತಿರುವುದು. ಇದೊಂದನ್ನೂ ಮಾಡಿಕೊಡದೆ ನಾವೇನೂ ಇದನ್ನೆಲ್ಲಾ ಮನೆಗೆ ತೆಗೆದುಕೊಂಡು ಹೋಗುತ್ತಿದ್ದೇವೆಯೇ ? ಇದರಲ್ಲಿ ಯಾವ ಕಾಸೂ ದುರ್ವ್ಯಯವಾಗುವುದಕ್ಕೆ ಅವಕಾಶವಿಲ್ಲ. The Auditor General who supervise the whole of India checks every pie. ಹಿಂದಿಗಿಂತ ಈಗ ಭದ್ರತೆ ಜಾಸ್ತಿಯಿದೆಯೆನ್ನಬಹುದು. ನಮ್ಮ ಜ್ಯುಡಿಷಿಯರಿ ಇಲಾಖೆ, ಯಾವ ರೀತಿ ಸ್ವಾತಂತ್ರ್ಯತೆಯಿಂದ ವರ್ತಿಸುತ್ತಿದೆಯೋ ಅದರಂತೆ ನಮ್ಮ ಆಡಿಟರ್ ಜನರಲ್ ಸಹ ಸ್ವತಂತ್ರವಾಗಿ ವರ್ತಿಸುತ್ತಾನೆ. He is independent of their obligations. ಆದ್ದರಿಂದ ರೈತರ ದುಡ್ಡು ಯಾರಿಗೂ ಅನ್ಯಾಯವಾಗಿ ಹೋಗುವುದಿಲ್ಲ. ಅಷ್ಟೇಕೆ, ರೈತರೇ ಸ್ವತಃ ಹೇಳುತ್ತಿದ್ದಾರೆ, ಕಾಂಗ್ರೆಸ್ಸಿನವರು ದೇಶಕ್ಕೆ ಅನುಕೂಲಮಾಡಿಕೊಡುತ್ತಿದ್ದಾರೆ, ನಾವು ತೆರಿಗೆ ಕೊಡುತ್ತೇವೆ ಎಂದು. ಆದ್ದರಿಂದ ತಾವುಗಳು ದಯವಿಟ್ಟು ಈ ಎಜುಕೇಷನ್ ತೆರಿಗೆಗೆ ಮತ್ತು ಮೋಟಾರ್ ತೆರಿಗೆಗೆ ತಮ್ಮ ಅನುಮತಿ ಕೊಡಬೇಕೆಂದು ಕೇಳುತ್ತೇನೆ. ಅದೂ, ಇದನ್ನು ಜಮೀನಿರುವವರು ಮಾತ್ರ ಕೊಡುತ್ತಾರೆಯೇ ಹೊರತು ಜಮೀನಿಲ್ಲದಿರುವವರು ಕೊಡುವುದಿಲ್ಲ. ಜಮೀನಿರುವವರೂ ಕೂಡ ರೂಪಾಯಿಗೆ ಒಂದಾಣೆ, ಒಂದೂವರೆಯಾಣೆ ಕೊಡುವುದಕ್ಕೆ ಎಂದೂ ಹಿಂತೆಗೆಯುವುದಿಲ್ಲ.

ಒಬ್ಬ ಸದಸ್ಯರು.—ನಿಮಗೆ ಅದು ಹೇಗೆ ಗೊತ್ತು ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಹಳ್ಳಿಯಲ್ಲಿ ಹುಟ್ಟಿರುವವನು. ತೆರಿಗೆ ಹಾಕಿದರೂ ಸ್ಕೂಲು ಕಲ್ಪಿಸಿಕೊಡುತ್ತಾರೆಂಬ ನಂಬಿಕೆ ಅವರಿಗಿದೆ. ಆದ್ದರಿಂದ ಸಮ್ಮನೆ ರೈತರ ಹೆಸರನ್ನು ತಂದು ದೇಶದ ಪ್ರಗತಿಗೆ ಕಂಟಕರಾಗಬೇಡಿ ಎಂದು ನಾನು ತಮ್ಮನ್ನು ಬೇಡಿಕೊಳ್ಳುತ್ತೇನೆ.

ಮೊದಲನೆಯದಾಗಿ, ಈ ಸೆಸ್ಸು ಬರೀ ಜಮೀನಿರುವವರಿಗೆ ಮಾತ್ರವೇ ಅಲ್ಲ. ಪಟ್ಟಣದಲ್ಲಿರುವವರೂ ಮನೆಗಳಿರುವವರೂ ಇದನ್ನು ಕೊಡಬೇಕಾಗುತ್ತದೆ. ಮುಂಚೆ ಎರಡಾಣೆ ಕೊಡುತ್ತಿದ್ದರೆ ಈಗ ಅದರ ಜೊತೆಗೆ 9 ಕಾಸು ಸೇರಿಸಿಕೊಡಬೇಕಾಗುತ್ತದೆ. ಅಲ್ಲಿಗೆ ಇದು ಬಡವರಿಗೆ ತಟ್ಟುವುದಿಲ್ಲವೆಂದು ಹೇಳಬಹುದು. ಆಸ್ತಿಯಿರುವವರು ಮಾತ್ರ ಕೊಡಬೇಕು ಅಷ್ಟೆ. ಅಂಥವರಿಗೆ ಇದನ್ನು ಕೊಡುವುದು ಬಹಳ ಸುಲಭ ; ಆದರೆ ಡಿಸ್ಟ್ರೆಸ್ ಏರಿಯಾಗಳಲ್ಲಿ ಹೊಟ್ಟೆಗೇ ಇಲ್ಲದಿರುವಾಗ ಇನ್ನು ಇದನ್ನು ಕೊಡುವುದೆಂದರೆ ಬಹಳ ಕಷ್ಟವಾಗಿ ಪರಿಣಮಿಸುತ್ತದೆಂದು ಹೇಳಿದರು, Distress ಇರುವ ಪ್ರದೇಶವಾಗಿದ್ದರೆ ಕಂದಾಯವೇ ವಜಾ ಆಗುತ್ತದೆ. ಕಂದಾಯ ವಜಾ ಆದಾಗ ಈ ಸೆಸ್ಸೂ ಕೂಡ ವಜಾ ಆಗುತ್ತದೆ.

ಆದ್ದರಿಂದ ಇನ್ನು ಯಾವುದೇ ವಿಷಯದಲ್ಲಿ ತಕರಾರಿದ್ದರೂ ವಿದ್ಯಾಭ್ಯಾಸದ ಸೆಸ್ಸಿನ ವಿಷಯದಲ್ಲಿ ತಕರಾರಿಗೆ ಕಾರಣವೇ ಇಲ್ಲ. ರೈತರಲ್ಲಿಯೂ ತಕರಾರಿಲ್ಲ, ಮಿಕ್ಕ ಜನರೂ ತಕರಾರುಮಾಡುತ್ತಿಲ್ಲ. ತಾವೂ ಕೂಡ ತಮ್ಮ ಅತ್ಮದಲ್ಲಿ ತಕರಾರುಮಾಡುತ್ತಿಲ್ಲ. ವಾದಕ್ಕಾಗಿ ಹೀಗೆ ಹೇಳುತ್ತಿದ್ದೀರಿ ಅಷ್ಟೆ.

ಆ ಮೇಲೆ ಮೋಟಾರ್ ಟಾಕ್ಸಿನ ವಿಚಾರ. ನಮ್ಮಲ್ಲಿ ಟ್ಯಾಕ್ಸ್ ಹಾಕಿರುವುದಕ್ಕೂ ಅಕ್ಕ ಪಕ್ಕದ ಪ್ರಾಂತ್ಯಗಳಲ್ಲಿ ಹಾಕಿರುವುದಕ್ಕೂ ತಾವೇ ಹೋಲಿಕೆಮಾಡಿನೋಡಿ. ಮದ್ರಾಸಿನಲ್ಲಿ ಇಲ್ಲಿಗಿಂತ ಜಾಸ್ತಿಯಿದೆ. ನಮ್ಮಲ್ಲಿ ದುಡ್ಡಿಲ್ಲದೆ ಇಷ್ಟೊಂದು ಖೋತಾ ಬಿದ್ದಿರುವಾಗ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಇದೊಂದು ಮಾರ್ಗ. ಇದು ಬಡವರಿಗೆ ತಗಲುವುದಿಲ್ಲ. ಮಾನ್ಯ ಸದಸ್ಯರೊಬ್ಬರು ಹೇಳಿದಂತೆ ಕೇವಲ ಸುಮಾರು 10,000 ಜನರ ಹತ್ತಿರ ಮಾತ್ರ ಮೋಟಾರು ಗಾಡಿ ಇರುವುದು. ಆದ್ದರಿಂದ ಮೋಟಾರು ಗಾಡಿಗಳನ್ನಿಡುವವರ ಮೇಲೆ ಮಾತ್ರ ಇದು ಬೀಳುತ್ತದೆ. ಅವರಿಗೂ ಇದು ಹೆಚ್ಚಿನ ಹೊರೆಯಲ್ಲ. ಬಡ್ಜೆಟನ್ನು ಸರಿತೂಗಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಆದ್ದರಿಂದ ತಾವುಗಳು ಪುನಃ ಯೋಚನೆಮಾಡಿ, ತಮ್ಮ ಸಹಕಾರ ನೀಡಿ, ದೇಶವನ್ನು ಕಟ್ಟುವುದಕ್ಕೆ ನೆರವಾಗಿ, ತಮ್ಮ better statesmanshipನ್ನು ತೋರ್ಪಡಿಸುವುದಕ್ಕೆ ಇದೊಂದು ಸುಸಮಯ, ದಯವಿಟ್ಟು ನಮ್ಮ ಆಹ್ವಾನವನ್ನು ಕಳೆದುಕೊಳ್ಳಬೇಡಿ.

Sri J. MOHAMED IMAM.—We are not satisfied with the statement given by the Minister and we propose to stage a walk out.

(*At 7-10 p.m. the Opposition Party members staged a walk-out*).

Mr. SPEAKER.—The question is :

" That the Mysore Elementary Education and Motor Vehicles Taxation and Tolls (Amendment) Bill, 1953, be taken into consideration ".

Sri K. HANUMANTHAIYA (Leader of the House).—I beg to move :—

" That the Mysore Elementary Education and Motor Vehicles Taxation and Tolls (Amendment) Bill, 1953, be referred to a Select Committee consisting of the following members :—

(1) Sri V. Venkatappa.
(2) Sm. Laxmidevi Ramanna.
(3) Sri S. Siddappa.
(4) Sri K. V. Shankare Gowda.
(5) Sri H. S. Rudrappa.
(6) Sri K. Prabhakar.
(7) Sri M. Linganna.
(8) Sri M. Rajasekhara Murthy.
(9) Sri H. C. Linga Reddy.
(10) Sri M. V. Rama Rao.
(11) Sri D. Devaraj Urs.
and the Mover."

According to rules, the concerned Ministers who hold the portfolios may also be in the Select Committee. This Committee may be directed by the House to report tomorrow.

Mr. SPEAKER.—The question is :

" That the Mysore Elementary Education and Motor Vehicles Taxation and Tolls (Amendment) Bill, 1953, be referred to a Select Committee consisting of the following members :—

(1) Sri V. Venkatappa.
(2) Sm. Laxmidevi Ramanna.
(3) Sri S Siddappa.
(4) Sri K. V. Shankare Gowda.
(5) Sri H. S. Rudrappa.
(6) Sri K. Prabhakar.
(7) Sri M. Linganna.
(8) Sri M. Rajasekhara Murthy.
(9) Sri H. C. Linga Reddy.
(10) Sri M. V. Rama Rao.
(11) Sri D. Devaraj Urs.
and the Mover ".

The motion was adopted.

Mr. SPEAKER.—Under Rule 36, the Minister for Law will be a Member. Under Rule 37, I appoint the mover, the Honourable the Chief Minister as the Chairman of the Committee.

Sri K. HANUMANTHAIYA.—Since ' Motor Vehicles ' happens to be the portfolio of Honourable Minister Sri H. Siddaveerappa, I suggest that he may also be in the Committee.

Mr. SPEAKER.—If the House has no objection. (SEVERAL MEMBERS.—No objection) ; then I will include his name. The question is :

" That Sri H. Siddaveerappa be added to the list of members to serve on the Select Committee referred to above "

The motion was adopted.

Mr. SPEAKER.—This House will now rise for the day and meet tomorrow, at 12 o' clock.

The Assembly adjourned at Fifteen Minutes past Seven of the Clock to meet again at Twelve of the Clock on on Monday, the 30th March 1953.

WD 4516—GPB—500—9-1-54